
HAN
H36

ಶ್ರೀ

ಮಂಡಯಂ
ಶ್ರೀವೈಷ್ಣವ ಮಹಾಜನರ ಚರಿತ್ರೆ



ಗ್ರಂಥಕರ್ತರು:

ಮಂಡಯಂ ಜಟಾವಲ್ಲಭ ಶಿಂಗ್ರೈಂಗಾರ್ಯರು

ಪ್ರಕಾಶಕರು:

**ಮದ್ರಾಸ್ ಮಂಡಯಂ ಶ್ರೀವೈಷ್ಣವ ಮಹಾಜನರ
ಚರಿತ್ರೆಯ ಪ್ರಕಟಣ ಸಮಿತಿ**


ತಿರುವಲ್ಲಿಕ್ಕೇಣಿ.

1959 **ಬೆಲೆ ರೂ. 3-0-0**

ಸಮರ್ಪಣೆ


ಮಂಡಯಂ ಶ್ರೀವೈಷ್ಣವ ಮಹಾಜನಗಳಲ್ಲಿ

ವಿನಯಪೂರ್ವಕವಾಗಿ ಸಮರ್ಪಿಸಿದೆ.



ಮಂಡಯದ ಶ್ರೀ ಲಕ್ಷ್ಮೀಜನಾರ್ದನಸ್ವಾಮಿಯವರು

(ಮೂಲದೇವರು)



ಮಂಡಯುಪ ಶ್ರೀ ವೇದವಲ್ಲಿತಾಯಾರ್ ಸನ್ನಿಧಿಯಲ್ಲಿ: ಬಿಜಮಾಡಿರುವ

ಶ್ರೀ ತಿರುವನನ್ದಾಳ್ವಾರ್ ಸ್ವಾಮಿಗಳು

PREFATORY NOTE

It was on an evening in March, 1946, a year or so before we won our freedom. Quite a few of us had been summoned to the "Gautamasrama" to listen to a lecture on the history of the Mandayam Srivaishnava Community. In the open terrace of that historic mansion in which Sri Yogi Parthasarathy Iyengar had lived and laboured, where Lokamanya Tilak and Mahatma Gandhi had called, and which saw the first Hindi class in South India opened and conducted by Devadas Gandhi, and under the shadow of the majestic tower of the Divine Charioteer's temple, Sri Jatavallabha Singra Iyengar, Retd. Engineer, held us spellbound for an hour or two. A discourse on history had proved unexpectedly interesting. The lecturer took us back over the centuries and communicated to us not a little of the warmth of his ardour in tracing out the scattered facts and linking them together into a coherent whole. We shared something of the thrill of his discovery, among the stolid pages of the *Epigraphica Carnatica*, of the inscription which proved the existence of Mandayam centuries earlier than the wellknown 16th century grant of Sri Krishna Deva Raya to Sri Govindaraja Udayar. This puts an entirely new complexion on the relations between

Bala Mandayam near Tirupati and the Mandayam in Mysore, and suggested mysterious associations between Anantarya, Kirangoor and Mandayam.

Sri Singra Iyengar's eloquence and enthusiasm moved us deeply, and there was a spontaneous movement among the audience to put the spoken facts into writing and get them printed. Subscriptions were promised on the spot for the purpose.* The lecturer readily agreed to our request to undertake the onerous task of writing out the history of the Mandayam community, more especially as he had been closely concerned in an earlier project to prepare such a history, sponsored by the Mandayam Conference of 1935. And we elected a committee, as set out in his introduction, to print and publish the work.

That is how this little book came to be planned and written and published. The long interval between the lecture in 1946 and the

---

*A sum of Rs. 600 has so far been collected by way of contributions from members as per particulars set down below:-

22-4-1946	Dr. M. O. Parthasarathy Iyengar	100 0 0
22-4-1946	Sri M. O. Alasingrachari	100 0 0
22-4-1946	Sri M. A. Krishnamachari	200 0 0
23-4-1946	Sri M. G. Singra Iyengar	100 0 0
8-11-1953	Sri M. O. S. Iyengar	100 0 0

Since writing the Prefatory Note, the following sums have been contributed.

17-2-56 Sri M. R. Sampatkumaran Rs. 100/-

Further advance by Sri M. O. Alasingra Chari from 19-1-56 to 18-2-56 more than Rs. 350/-

publication in 1956 has to be explained and regretted. There is a Sanskrit saying, "Sreyamsi bahu vighnani," that all noble endeavours are hindered by numerous difficulties. This became peculiarly applicable to the task we had undertaken. Sri Singra Iyengar had not been in the best of health for years, and he had to maintain a valiant struggle to work at the book. This involved not merely the setting down of a narrative, but also the gathering and verification of facts, figures and traditions. There was also a certain amount of correspondence between the Madras Committee and the author over his first rough draft. His finished manuscripts came over to us in Madras in December, 1950. Then we took some little time over it, examining it in detail, and with his approval making slight changes here and there by way of additions, omissions or re-arrangements. As we in Madras live beyond the jurisdiction of Kannada, this would not have been possible at all, but for the invaluable assistance given by Sri M. A. Narasimhacharya (Aiyadoraigal) over long hours uncomplainingly and cheerfully. At an earlier stage of the examination, Sri M. C. Parthasarathy, Assistant Engineer, and Sri R. A. Narayanan of Hindusthan Co-operative Insurance had helped. At long last, we handed over the manuscripts to

the press in September, 1953 and started printing. Meanwhile, we had taken up the verification of the lists of the members of our community living in various places. It proved a more arduous task than we had expected. We sent our printed copies of provisional lists to several friends in different places requesting revision, but only a few responded. And so the work of printing was interrupted. By the time the lists were complete the press had got busy with other works. Thus, there was delay at every turn; and to our lasting regret, we were unable to get the book out before the lamented death of Sri Singra Iyengar in March last. It is, however, some consolation to us that he was able to see practically the whole book in printed formes before he passed away.

Sri Singra Iyengar felt that there were many imperfections in the work. This is inevitable in a pioneering attempt of this kind. Strictly speaking, we have not here so much a well-digested history, as materials for writing it. Again, it is probable that many corrections may have to be made as also changes in emphasis and perspective. Some important facts also may have been omitted either through lack of knowledge or failure to realise their value. But these do not detract from the outstanding contribution that Sri Singra Iyengar has made to the

important question of the history of our community by patiently gathering facts from books, inscriptions and oral testimony and stringing them together. His design includes, as may be seen by the readers of this book, not merely political, but also social and cultural history.

Till recently, the founding of our community and of Mandayam used to be placed in the 16th century. Of course, many of us belong to families with longer histories, but we all came together as a community when Sri Govindaraja Udayar settled down at Mandayam. It used to be generally taken for granted that the name 'Mandayam' was given to the settlement in memory of Bala Mandayam near Tirupati, donated to Sri Anantarya. But Sri Singra Iyengar came across an inscription of 1276, in which Mandayam is referred to as an "anadi agrahara", a Brahmin settlement of an antiquity so great that its origins were unknown. If this was the case in 1276, surely Mandayam must have come into existence much earlier. Making every allowance for a light-hearted use of "anadi" in the inscription, it is impossible not to think of Mandayam at least as a century old at this time. That takes us back to about 1175, less than 40 years after the generally accepted date of the death of Sri Ramanujacharya—1137. We know

that Sri Anantarya survived his great master for a few years. Thus, it looks as though Mandayam must have been flourishing during the times of Sri Anantarya. If, in the light of this, we look at the name of Bala Mandayam given to the settlement near Tirupati, probably at the instance of Sri Anantarya himself, it is difficult to resist the conclusion that Sri Anantarya must have had intimate associations with Mandayam in Mysore. A Bala Mandayam (or New Mandya) presupposes a Vriddha Mandayam (Old Mandya) elsewhere, just as New York in America presupposes an older York in England.

Here is the gist of the historical speculation suggested by Sri Singra Iyengar's researches and recorded in this book. He has also culled out some useful particulars about the founding of the community and the covenant solemnly entered into at that time by the fifty-two families, who settled down at Mandayam under the leadership of Sri Govindaraja Udayar.

Sri Singra Iyengar has also briefly passed in review the fortunes of the community as a whole from the time of the founding fathers to the present day. Political importance hovered over it from the beginning. It reached its zenith during the days of Sri Tirumalai Iyengar Iyen and the

Pradhans. The reigns of Hyder and Tippu formed the most critical and gloomy period in the history of the community. The Pradhans did their duty nobly by the Hindu monarchy, and hundreds of our people had to suffer martyrdom in the cause. The refusal to observe Dipavali by several families in memory of the massacre of innocents which saddened the festival one terrible year in the reign of Tippu, serves to remind us vividly of the fateful oscillations in our political fortunes. The restoration of Hindu rule in Mysore meant the end of this persecution, but little more. And the community found itself dispersing, first into Madras and then into practically every nook and corner of India. Today communal and sub-communal meditations are at a discount. But we have every reason to feel proud of the part played in the history of Mysore by the descendants of a tiny group of settlers, not to speak of the associations which many of our families have with Sri Ramanujacharya earlier still. And today, in the light of our great traditions, we are continuing to do our bit in various walks of life to serve the motherland.

Mention must now be made of a serious omission from this work — the genealogical tables. We have fortunately the genealogies of most of our families from the

time of the settlement at Mandayam, that is, for some twelve to thirteen generations. There are, however, some gaps. The Mandayam Bharadvaja genealogy is not available completely in all its branches, for instance. Sri Singra Iyengar has collected the lists and handed them over to the Committee for publication. Owing to various reasons, one of which is the technical difficulty involved in devising a suitable method of printing them, we have not been able to include them in this book. We hope however to bring them out separately.

Apart from the deficiencies alreadly referred to, the Committe regret that there are also numerous printing errors. This was due to the arrangements made through the press for passing the proofs proving an utter disappointment. We thought that the matter was in safe hands, but it turned out otherwise.

Sri Singra Iyengar has in his Introduction enumerated his obligations to the various friends who had helped him in the preparation of the book. The Committee's thanks are due, in addition, to Sri M. A. Narasimhachariar for the various services he has rendered, to Sri M.A.J. Tirumalai Iyengar, Retired Headmaster of the Triplicane Hindu High School, Sri M. N. Krishnaswamy of

the Indian Meteorological Department, Bangalore, Sri R. A. Sampatkumaracharya, Retired Headmaster, Mysore, and Sri R. A.S. Iyengar, Retired Engineer, Mandya. for help in gathering particulars about the members of the community living in various places, to Sri M. A. Doraiswamy Iyengar Advocate, Mysore, for the note of April, 1954, on his visit to Bala Mandayam and other places near Tirupati, and Mrs. M. Q. Alamelamma Krishnaswamy for preparing a fair copy of the corrected manuscripts for the press.

We have brought together in an appendix a number of photographs of Mandayam conferences and social gatherings of our community which we, feel sure, will add to the value of this work. The names of the several friends who were kind enough to provide these photographs are thankfully mentioned in the appendix.

Finally, we echo Sri Singra Iyengar's request for considerate overlooking of the shortcomings of this volume and his invitation for corrections and additional information for use in later editions.

February 1956. } **M. R. SAMPATKUMARAN.**
Editor

ಮುನ್ನುಡಿ

ನಮ್ಮ ದೇಶವು ಸ್ವತಂತ್ರ್ಯವನ್ನು ಗಳಿಸುವುದಕ್ಕೆ ಸುಮಾರು ವರ್ಷದ ಹಿಂದೆ 1946ನೆಯ ಮಾರ್ಚಿ ತಿಂಗಳು ಒಂದು ಸಂಜೆ. ಮುಂಡಯಂ ಶ್ರೀವೈಷ್ಣವ ಸಮುದಾಯದವರ ಚರಿತ್ರೆಯನ್ನು ಕೇಳುವುದಕ್ಕೆ ನಮ್ಮಲ್ಲಿ ಕೆಲವರು ಗೌತಮಾಶ್ರಮಕ್ಕೆ ಆಹ್ವಾನಿತರಾಗಿದ್ದೆವು. ಎಲ್ಲಿ ಶ್ರೀ ಯೋಗಿ ಪಾರ್ಥಸಾರಥಿ ಆಯ್ಯಂಗಾರ್ಯ ಸ್ವಾಮಿಗಳು ವಾಸಮಾಡಿಕೊಂಡು ವೈದಿಕಧರ್ಮಕ್ಕಾಗಿ ಶ್ರಮಿಸಿದರೋ, ಎಲ್ಲಿಗೆ ಲೋಕಮಾನ್ಯ ತಿಲಕರೂ, ಮಹಾತ್ಮ ಗಾಂಧೀಯವರೂ ಬಿಜ ಮಾಡಿದ್ದರೋ, ಎಲ್ಲಿ ದೇವದಾಸ್ ಗಾಂಧೀಯವರು ದಕ್ಷಿಣದಲ್ಲೇ ಮೊತ್ತಮೊದಲನೆಯದಾಗಿ ಹಿಂದೀತರಗತಿಯನ್ನು ತೆರೆದು ಪಾಠವನ್ನು ನಡೆಸಿದರೋ, ಅನುಪಮದೃಶ್ಯದಿಂದ ಕಂಗೊಳಿಸುತ್ತಿರುವ ದೇವಸಾರಥಿಯ ಗುಡಿಯ ಮುಂದಣ ಗೋಪುರದ ಛಾಯೆಯಿಂದ ಆವೃತವಾಗಿರುವ ಆ ಚರಿತ್ರಾರ್ಹವಾದ ಮನೆಯ ಬಿಸಿಲು ಮಜಡಿಯಲ್ಲೇ ನಿವೃತ್ತ ಇಂಜಿನಿಯರಾದ ಶ್ರೀ ಜಟಾವಲ್ಲಭ ಶಿಂಗ್ರೈಂಗಾರ್ಯರು ಒಂದೆರಡು ಗಂಟೆಗಳ ಕಾಲ ತಮ್ಮ ಉಪನ್ಯಾಸದಿಂದ ನಮ್ಮನ್ನು ಸ್ತಂಭೀಭೂತರನ್ನಾಗಿ ಮಾಡಿಬಿಟ್ಟರು. ಚರಿತ್ರೆಯ ವಿಷಯವಾದ ಉಪನ್ಯಾಸವು ಅಷ್ಟು ಸ್ವಾರಸ್ಯವಾಗಿರುವುದೆಂದು ನಾವು ನಿರೀಕ್ಷಿಸಿರಲಿಲ್ಲ.

ಅಲ್ಲಲ್ಲೇ ಹರಿಹಂಚಾಗಿ ಹೋಗಿದ್ದ ಶತಮಾನಗಳ ಹಿಂದಿನ ವಿಷಯಗಳನ್ನೆಲ್ಲಾ ಕ್ರೋಡೀಕರಿಸಿ, 16ನೆಯ ಶತಮಾನದಲ್ಲೆ ಗೋವಿಂದರಾಜಉಡ್ಡೆಯರಿಗೆ ಕೃಷ್ಣದೇವರಾಯನು ಜಹಗಿರಿಯನ್ನು ಕೊಟ್ಟ ಕಾಲದಿಂದಲೇ ಮಂಡಯವು ಸ್ಥಾಪಿತವಾದುದು ಎಂದು ಜನಸಾಮಾನ್ಯದಲ್ಲಿ ರೂಢಿಯಲ್ಲಿದ್ದ ಅಭಿಪ್ರಾಯವು ಸರಿಯಲ್ಲವೆನ್ನುವುದನ್ನು ಸ್ಥಿರಪಡಿಸುವ ಹಳೆಯ ಶಾಸನದ ಆಧಾರದಿಂದ ಶ್ರೀ. ಉ. ಅನಂತಾರ್ಯರಿಗೂ ಮಂಡಯಕ್ಕೂ ಕಿರಂಗೂರಿಗೂ ಇದ್ದ ಸಂಬಂಧವನ್ನು ಶ್ರೀ ಶಿಂಗ್ರೈಂಗಾರ್ಯರು ಪ್ರಕಾಶಪಡಿಸಿದರು.

ಶ್ರೀ ಶಿಂಗ್ರೈಂಗಾರ್ಯರ ವಾಗ್ಝರಿಯೂ ಉತ್ಸಾಹವೂ ಒಮ್ಮೆಯೇ ಸಭಿಕರ ಮನಸ್ಸನ್ನು ಆಪಹರಿಸಿಬಿಟ್ಟಿತು. ಈ ಭಾಷಣದ ವಿಷಯಗಳನ್ನು ಬರೆದು ಅಚ್ಚು ಹಾಕಿಸಬೇಕೆಂಬ ಆಸೆಯೂ ಆಗಲೇ ಹುಟ್ಟಿತು. ಆ ಕೆಲಸವು ಕೈಗೂಡಲು ಅಲ್ಲೇ *ದ್ರವ್ಯ ಸಹಾಯದ ವಾಗ್ದಾನವೂ ಆಯಿತು. 1935ನೆಯ ಇಸವಿಯಲ್ಲಿ ಮುಂಡಯದಲ್ಲಿ ಸೇರಿದ್ದ ನಮ್ಮ ಮಹಾಜನಗಳ ಸಮ್ಮೇಳನದ ಉಪಯೋಗಕ್ಕಾಗಿ ಶ್ರೀ ಶಿಂಗ್ರೈಂಗಾರ್ಯರು ವಿಷಯಸಂಗ್ರಹಣ ಮಾಡಿದ್ದರಿಂದಲೂ, ಈಚೆಗೆ ಅದೇ ಕೆಲಸವನ್ನು ಮುಂದುವರಿಸುತ್ತಿದ್ದುದರಿಂದಲೂ, ಅವರೇ ಈ ಚರಿತ್ರೆಯನ್ನು ಬರೆದು ಸಿದ್ಧಪಡಿಸಬೇಕೆಂದು ಅವರನ್ನು ಕೇಳಿಕೊಳ್ಳಲಾಯಿತು. ಆ ಕ್ಷಣವೇ ಅವರೂ ಒಪ್ಪಿದರು. ಶ್ರೀ ಶಿಂಗ್ರೈಂಗಾರ್ಯರು ಅವರ 'ವಿಜ್ಞಾಪನೆ'ಯಲ್ಲಿ ತಿಳಿಸಿರುವಂತೆ ಈ ಪುಸ್ತಕವನ್ನು ಪ್ರಕಟಿಸುವುದಕ್ಕಾಗಿ ಮದ್ರಾಸಿನಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಲಾಯಿತು. ಇದೇ ಈ ಚಿಕ್ಕ ಪುಸ್ತಕದ ಪ್ರಕಟಣೆಯ ಹಿನ್ನೆಲೆ.

ಉಪನ್ಯಾಸವು ನಡೆದದ್ದು 1946 ರಲ್ಲಿ ; ಪುಸ್ತಕ ಪ್ರಕಟಣೆಯು 1956 ರಲ್ಲಿ. ಈ ದೀರ್ಘಕಾಲ ವಿಳಂಬಕ್ಕೆ ಕೊಡತಕ್ಕ ಸಮಾಧಾನವಿಷಯು ವಿಷಾದಕರ. "ಶ್ರೇಯಾಂಸಿ ಬಹುವಿಘ್ನಾನಿ" ಎನ್ನುವಂತೆ ಸತ್ಕಾರ್ಯಗಳಿಗೆ ವಿಘ್ನಪರಂಪರೆಗಳು ಬರುವುದು ಸಹಜವಾಮಯೇ ಅಲ್ಲವೆ? ಈ ನುಡಿಯು ಪ್ರಕೃತ ಪುಸ್ತಕಕ್ಕೆ ಸರಿಯಾಗಿ ಅನ್ವಯಿಸುವುದು. ಶ್ರೀ ಶಿಂಗ್ರೈಂಗಾರ್ಯರ ಆರೋಗ್ಯವು ಸಮರ್ಪಕವಾಗಿರಲಿಲ್ಲ. ವಿಷಯಶೋಧನೆ ಮಾಡಿ, ಬರವಣಿಗೆಯು ಸುಸೂತ್ರವಾಗಿ ನಡೆಯುವುದಕ್ಕೆ ಅಡಚಣೆಯಾಯಿತು. ಆದರೂ

---

*ಇದುವರೆಗೆ 600 ರೂಪಾಯಿಗಳು ಈ ಮಹನೀಯರುಗಳಿಂದ ಬಂದಿದೆ.

22-4-1946	ಶ್ರೀ ಡಾಕ್ಟರ್ ಎಂ. ಓ. ಪಾರ್ಥಸಾರಥಿ ಅಯ್ಯಂಗಾರ್ಯರು	100 0 0
22-4-1946	ಶ್ರೀ ಎಂ. ಓ. ಅಳಸಿಂಗ್ರಾಚಾರ್ಯರು	100 0 0
22-4-1946	ಶ್ರೀ ಎಂ. ಎ. ಕೃಷ್ಣಮಾಚಾರಿಯರ್	200 0 0
22-4-1946	ಶ್ರೀ ಎಂ. ಜಿ. ಶಿಂಗ್ರೈಂಗಾರ್ಯರು	100 0 0
8-11-1953	ಶ್ರೀ ಎಂ. ಓ. ಎಸ್. ಅಯ್ಯಂಗಾರ್ಯರು	100 0 0

ಮುನ್ನುಡಿ ಬರೆದ ಮೇಲೆ ದ್ರವ್ಯಸಹಾಯ ಮಾಡಿದವರು:

ಶ್ರೀ ಎಂ. ಆರ್. ಸಂಪತ್ಕುಮಾರನ್ (17-2-56) ರೂ. 100

ಶ್ರೀ ಎಂ. ಹಿ. ಅಳಸಿಂಗ್ರಾಜಾರಿ (19-1-56 ರಿಂದ 18-2-58) ರೂ. 350–ಮೇಲೆ.

ವೇಹಾಲಸ್ಯವನ್ನೂ ಲಕ್ಷಿಸದೆ ಹಿಡಿದ ಕಾರ್ಯವನ್ನು ಕಷ್ಟಪಟ್ಟು ಸಾಧಿಸಬೇಕಾಯಿತು. ಶ್ರೀ ಶಿಂಗ್ರೈಂಗಾರ್ಯರು ಮೊದಲು ಕಳುಹಿಸಿಕೊಟ್ಟ ಕರಡು ಪ್ರತಿಯು ವಿಚಾರದಲ್ಲಿ ಸಮಿತಿಯವರಿಗೂ ಅವರಿಗೂ ಪತ್ರದ ಮೂಲಕ ಸ್ವಲ್ಪ ಚರ್ಚೆ ನಡೆದ ಮೇಲೆ, ಅವರು ಪರಿಷ್ಕರಿಸಿ ಕಳುಹಿಸಿಕೊಟ್ಟ ಪ್ರತಿಯು 1950ನೆಯ ಡಿಸೆಂಬರ್ ತಿಂಗಳಿನಲ್ಲಿ ಸಮಿತಿಯ ಕೈಸೇರಿತು. ಶ್ರೀ ಶಿಂಗ್ರೈಂಗಾರ್ಯರ ಒಪ್ಪಿಗೆಯೆನ್ನು ಪಡೆದು, ಅವರಲ್ಲಿ ಅಲ್ಲಲ್ಲೀ ಕೆಲವು ಭಾಗಗಳನ್ನು ಸೇರಿಸಿಯೂ, ಕೆಲವು ಭಾಗಗಳನ್ನು ಬಿಟ್ಟೂ, ವಿಷಯ ನಿರೂಪಣೆಯಲ್ಲಿ ಸ್ವಲ್ಪ ಹಿಂದುಮುಂದು ಮಾಡಿಯೂ ಸಮಿತಿಯವರು ಪರಿಷ್ಕರಿಸಬೇಕಾಯಿತು. ಸಮಿತಿಯವರ ವಾಸಸ್ಥಳವು ಕನ್ನಡ ನಾಡಿನ ಗಡಿಗೆ ಸ್ವಲ್ಪ ದೂರವಾದುದರಿಂದ ಈ ಕನ್ನಡ ಗ್ರಂಥದ ಪರಿಷ್ಕರಣದಲ್ಲಿ ಶ್ರೀ ಎಂ ಎ. ನರಸಿಂಹಾಚಾರ್ಯರು (ಅಯ್ಯಾಧೊರೆಗಳು) ವಿಶ್ವಾಸದಿಂದ ಅನ್ವಯಿಸಿದ್ದುದರಿಂದ ಹಿಡಿದ ಕಾರ್ಯವು ಪೂರ್ತಿಯಾಗುವುದಕ್ಕೆ ತುಂಬಾ ಸಹಾಯವಾಯಿತು. ಪ್ರಾರಂಭ ವಿಷಯದಲ್ಲಿ ಕನ್ನಡಭಾಷಾಪರಿಚಿತರಾದ ಅಸಿಸ್ಟೆಂಟ್ ಇಂಜಿನಿಯರ್ ಶ್ರೀ ಎಂ. ಸಿ. ಪಾರ್ಥಸಾರಥಿಗಳೂ, ಹಿಂದೂಸ್ತಾನ್ ಕೋ-ಆಪರೇಟಿವ್ ಇನ್ಷೂರೆನ್ಸ್ ಕಂಪೆನಿಯ ಶ್ರೀ ಆರ್. ಎ. ನಾರಾಯಣನ್ ಅವರೂ ಉಪಕಾರ ಮಾಡಿದ್ದಾರೆ. ಶುದ್ಧ ಪ್ರತಿಯನ್ನು 1953ನೆಯ ಸೆಪ್ಟಂಬರ್ ತಿಂಗಳಲ್ಲಿ ಅಚ್ಚುಕೂಟಕ್ಕೆ ಕೊಡಲಾಯಿತು. ಕೆಲವು ಪುಟಗಳೂ ಅಚ್ಚಾದುವು. ಅಷ್ಟರಲ್ಲಿ ನಮ್ಮ ಸಮುದಾಯದವರ ಒಕ್ಕಲುತನದ ಪಟ್ಟಿಯನ್ನು ಪರಿಶೀಲಿಸುವ ಕಾರ್ಯಕ್ಕೆ ತೊಡಗಬೇಕಾಯಿತು. ಅಚ್ಚಾದ ಹೆಸರುಗಳ ಪಟ್ಟಿಗಳನ್ನು (Proof Sheets) ಸರಿನೋಡಿ ಕೊಡಬೇಕೆಂದು ಪ್ರಾರ್ಥಿಸಿ, ಅಲ್ಲಲ್ಲೀ ಕೆಲವು ಮಹನೀಯರಿಗೆ ಕಳುಹಿಸಿಕೊಡಲಾಯಿತು. ಈ ಕೆಲಸವು ನಾವು ನೆನೆಸಿದಂತೆ ಸುಲಭಸಾಧ್ಯವಾಗಲಿಲ್ಲ. ಕೆಲವರು ಮಾತ್ರ ಪಟ್ಟಿಗಳನ್ನು ಕಳುಹಿಸಿಕೊಟ್ಟರು. ಹೆಸರುಗಳ ಪಟ್ಟಿಗಳು ಸಿದ್ಧವಾಗುವುದರಲ್ಲಿ ತಿಂಗಳುಗಳು ಕಳೆದುಹೋದುವು. ಈ ಮಧ್ಯಕಾಲದಲ್ಲಿ ಅಚ್ಚುಕೂಟದವರು ಬೇರೆ ಕೆಲಸವಲ್ಲಿ ತೊಡಗಿದ್ದರು. ಅಂತೂ ಒಂದೊಂದು ಹಂತವಲ್ಲಿಯೂ ಕೆಲಸವು ನಿಧಾನವಾಯಿತು. ಶ್ರೀ ಶಿಂಗ್ರೈಂಗಾರ್ಯರು ಕಳೆದ ಮಾರ್ಚ್ ತಿಂಗಳಲ್ಲಿ ಪರಮಪದಿ

ಸುವ್ರದಕ್ಕೆ ಮೊದಲೇ ಈ ಗ್ರಂಥವು ಹೊರಬೀಳದೇ ಹೋದುದು ತುಂಬ ವಿಷಾದಕರ. ಆದರೆ ಒಂದು ತೃಪ್ತಿ. ಅವರು ಜೀವಂತರಾಗಿದ್ದಾಗಲೇ ಪುಸ್ತಕವು ಪ್ರಾಯಶಃ ಪೂರ್ತಿಯಾಗಿ ಅಚ್ಚಾಗಿದ್ದಿತು. ಅದನ್ನು ನೋಡಿ ಸಂತೋಷಪಟ್ಟಿದ್ದರು.

ಶ್ರೀ ಉ. ಅನಂತಾರ್ಯರಿಗೆ ದಾನವಾಗಿ ಕೊಟ್ಟ ತಿರುಪತಿ ಬಳಿ ಇರುವ ಬಾಲಮಂಡಯದ ಜ್ಞಾಪಕಾರ್ಥವಾಗಿ 'ಮಂಡಯ' ಎನ್ನುವ ಹೆಸರು ಬಂದಿತೆಂಬ ಅಭಿಪ್ರಾಯವು ರೂಢಿಯಲ್ಲಿದ್ದಿತು. ಆದರೆ ಶ್ರೀ ಶಿಂಗ್ರೈಂಗಾರ್ಯರಿಗೆ ದೊರೆತ 1276ನೆಯ ಇಸವಿಯ ಶಾಸನದಲ್ಲಿ ಮಂಡಯವನ್ನು 'ಅನಾದಿ ಅಗ್ರಹಾರ'ವೆಂದು ಹೇಳಿದೆ. ಅನಾದಿ ಎನ್ನುವ ಪದಪ್ರಯೋಗದಿಂದ ಸುಮಾರು ಒಂದು ಶತಮಾನಕ್ಕಾದರೂ ಹಿಂದೆ ಇದ್ದಿರಬೇಕೆಂದು ಊಹಿಸಬಹುದಲ್ಲವೆ? ಎಂದರೆ ಸುಸುಮಾರು ಕ್ರಿ. ಶ. 1175ನೆ ಇಸವಿಗೆ ಸರಿ ಹೋಗುತ್ತದೆ. ಶ್ರೀ ರಾಮಾನುಜಾಚಾರ್ಯರು ಇಹಕಳೇಬರವನ್ನು ತ್ಯಜಿಸಿದ್ದು ಕ್ರಿ. ಶ. 1137ರಲ್ಲಿ. ಶ್ರೀ ಉ. ಅನಂತಾರ್ಯರು ಅವರ ಪೂಜ್ಯ ಆಚಾರ್ಯರು ಪರಮಪದಿಸಿದ ಮೇಲೆ ಕೆಲವು ವರ್ಷಗಳು ಜೀವಂತರಾಗಿದ್ದರೆನ್ನುವುದು ತಿಳಿದ ವಿಷಯ. ಆದುದರಿಂದ ಶ್ರೀ ಅನಂತಾರ್ಯರ ಕಾಲದಲ್ಲೇ ಮಂಡಯವು ಅಭಿವೃದ್ಧಿಸ್ಥಿತಿಯಲ್ಲಿದ್ದಿತೆಂದು ಹೇಳಬಹುದು. ಈ ದೃಷ್ಟಿಯಿಂದ ನೋಡಿದರೆ ತಿರುಪತಿ ಹತ್ತಿರ ಬಾಲಮಂಡಯವೆಂಬ ಹೆಸರನ್ನು ಶ್ರೀ ಉ. ಅನಂತಾರ್ಯರ ಸೂಚನೆಯಂತೆಯೇ ಕೊಟ್ಟಿರಬೇಕು. ಹಾಗಾದರೆ ಮೈಸೂರು ಮಂಡಯದಲ್ಲಿ ಅವರಿಗೆ ನಿಕಟ ಸಂಬಂಧವಿದ್ದಿರಬೇಕಲ್ಲವೆ? ಅಮೆರಿಕಾದಲ್ಲಿ New York (ಹೊಸ ಯಾರ್ಕ್) ಎನ್ನುವ ಪಟ್ಟಣವು ಹಿಂದೆಯೇ ಇಂಗ್ಲೆಂಡಿನಲ್ಲಿರುವ York ಪಟ್ಟಣವನ್ನು ಸೂಚಿಸುವಂತೆ ಬಾಲಮಂಡಯವು ವೃದ್ಧ (ಹಳೆಯ) ಮಂಡಯವನ್ನು ಸೂಚಿಸುವುದಲ್ಲವೆ?

ಮಂಡಯದ 52 ವಂಶೀಯರಲ್ಲಿ ಶ್ರೀ ಉ. ಗೋವಿಂದರಾಜ ಉಡೆಯರವರು ಒಂದು ಸಂಕೇತ ನಿರ್ಬಂಧವನ್ನು ಏರ್ಪಡಿಸಿದಂತೆ ಆ ವಂಶಗಳ ಹದಿ

ಮೂರು ಗೋತ್ರದವರೂ ಸತ್ಸಂಪ್ರದಾಯ ಸದಾಚಾರಸಂಪನ್ನರಾಗಿ ಸಂಕೇತವನ್ನು ಪರಿಪಾಲಿಸುತ್ತ ಬಂದಿರುವ ವಿಷಯವನ್ನು ಶ್ರೀ ಶಿಂಗ್ರೈಂಗಾರ್ಯರು ಸ್ಪಷ್ಟಪಡಿಸಿದ್ದಾರೆ.

ಸಮುದಾಯದ ಸ್ಥಾಪಕರ ಕಾಲದಿಂದ ಈಗಿನವರೆಗೂ ಸಾಂಸ್ಕೃತಿಕ ಸಾಮಾಜಿಕ ರಾಜಕೀಯ ವಿಚಾರಗಳಲ್ಲಿ ನಮ್ಮವರ ಉನ್ನತಾವನತ ಸ್ಥಿತಿಗಳನ್ನು ಶಿಂಗ್ರೈಂಗಾರ್ಯರು ವರ್ಣಿಸಿದ್ದಾರೆ. ಮೊದಲಿಂದಲೂ ನಮ್ಮವರಿಗೆ ರಾಜಕೀಯದಲ್ಲಿ ವ್ಯಾಪ್ತಿಯಿತ್ತು. ತಿರುಮಲೆಅಯ್ಯಂಗಾರ್ಯಅಯ್ಯನ್ ಮತ್ತು ಪ್ರಧಾನರ ಕಾಲದಲ್ಲಿ ಆಪ್ತಾಬಲ್ಯವು ಉನ್ನತಸ್ಥಿತಿಯಲ್ಲಿದ್ದಿತು. ಇದರಿಂದ ಹೈದರ್ ಮತ್ತು ಟಪ್ಪುಸುಲ್ತಾನನಕಾಲದಲ್ಲಿ ನಮ್ಮವರಿಗೆ ತುಂಬ ಕಷ್ಟಕಾಲಪ್ರಾಪ್ತವಾಯಿತು.ಕ್ರಿ.ಶ. 1783ರಲ್ಲಿ ನರಕಚತುರ್ದಶಿ ದಿನ ಟಿಪ್ಪುಸುಲ್ತಾನನು ನಮ್ಮವರ ಅನೇಕ ಸಂಸಾರಗಳನ್ನು ಕೊಲ್ಲಿಸಿದನು. ಈ ಭೀಕರ ಕೊಲೆಯ ಸ್ಮರಣಾರ್ಥವಾಗಿ ಈಗಲೂ ಆ ವಂಶೀಯರು ದೀಪಾವಳೀ ಹಬ್ಬವನ್ನು ಆಚರಿಸುವುದಿಲ್ಲವೆನ್ನುವ ಕಾರಣವನ್ನು ಶ್ರೀ ಶಿಂಗ್ರೈಂಗಾರ್ಯರು ಹೇಳಿದ್ದಾರೆ.

ಈ ಪುಸ್ತಕದಲ್ಲಿ ವಂಶವೃಕ್ಷಗಳು ಅಚ್ಚಾಗದೇ ಇರುವುದು ದೊಡ್ಡ ಕೊರತೆ. ನಮ್ಮವರು ಮಂಡಯದಲ್ಲಿ ನೆಲಸಿದಾಗಲಿಂದ, ಎಂದರೆ ಸುಮಾರು 12–13 ತಲೆಮಾರಿನ ವಂಶ ವೃಕ್ಷಗಳು ನಮ್ಮಲ್ಲಿ ಇವೆ. ಆದರೆ ಸ್ವಲ್ಪ ಭಾಗ ಬಿಟ್ಟುಹೋಗಿದೆ. ಮಂಡಯಂ ಭಾರದ್ವಾಜ ಗೋತ್ರದ ಎಲ್ಲಾ ಶಾಖೆಗಳ ಪಟ್ಟಗಳೂ ಸಂಪೂರ್ಣವಾಗಿ ದೊರೆತಿಲ್ಲ. ಶ್ರೀ ಶಿಂಗ್ರೈಂಗಾರ್ಯರು ಬಹು ಶ್ರಮಪಟ್ಟು ಶೇಖರಿಸಿರುವ ವೃಕ್ಷಗಳನ್ನೆಲ್ಲಾ ಸಮಿತಿಯವರ ವಶಕ್ಕೆ ಒಪ್ಪಿಸಿದ್ದಾರೆ. ಯಾವ ರೀತಿಯಲ್ಲಿ ಅವುಗಳನ್ನು ಅಚ್ಚು ಮಾಡಿಸಬಹುದೆನ್ನುವುದು ಸರಿಯಾಗಿ ಇತ್ಯರ್ಥವಾಗದೇ ಇರುವುದು ಅವುಗಳನ್ನು ಈ ಪುಸ್ತಕದಲ್ಲಿ ಸೇರಿಸದೇ ಇರುವುದಕ್ಕೆ ಒಂದು ಕಾರಣ. ಪ್ರತ್ಯೇಕವಾಗಿ ಅವುಗಳನ್ನು ಅಚ್ಚು ಮಾಡಿಸ ಬಯಸುತ್ತೇವೆ.

ಈ ಪುಸ್ತಕದಲ್ಲಿ ಅನೇಕ ನ್ಯೂನತೆಗಳಿರಬಹುದೆಂದು ಹಿಂದೆಯೇ ತಿಳಿಸಿದೆಯಷ್ಟೆ. ಅವುಗಳಲ್ಲದೆ ವಿಪರೀತ ಅಚ್ಚಿನ ತಪ್ಪುಗಳೂ ಇವೆಯೆಂದು ವಿಷಾದ

ವಿಂವ ಹೇಳಬೇಕಾಗಿದೆ. ಅಚ್ಚಾಗುತ್ತಿದ್ದಾಗ ಕರಡುಗಳನ್ನು (Proof Sheets) ತಿದ್ದಲು ಮಾಡಿದ್ದ ಏರ್ಪಾಡು ಅತೃಪ್ತಿಕರವಾಗಿ ಪರಿಣಮಿಸಿತು. ತಕ್ಕವರ ಕೈಗೆ ಆ ಕೆಲಸವನ್ನು ಒಪ್ಪಿಸಿದ್ದೆವೆಂದು ಇದ್ದೆವು. ಆದರೆ ಅದು ಅನ್ಯಥಾ ಆಯ್ತು.

ಶ್ರೀ ತಿಂಗ್ಳೈಂಗಾರ್ಯರು ಪುಸ್ತಕರಚನೆಯಲ್ಲಿ ಅನರಿಗೆ ಸಹಾಯಮಾಡಿ ವರಿಗೆ ಕೃತಜ್ಞತೆಯನ್ನು ಸೂಚಿಸಿರುವರಷ್ಟೆ. ಅದಲ್ಲದೆ ಸಮಿತಿಯವರು ಶ್ರೀ ಎಂ.ಎ.ನರಸಿಂಹಾಚಾರ್ಯರಿಗೆ ಅವರುಮಾಡಿದ ನಾನಾವಿಧ ಸಹಾಯಗಳಿಗಾಗಿಯೂ, ಒಕ್ಕಲುತನದಪಟ್ಟಿಗಳನ್ನು ಪರಿಶೀಲಿಸಿ ಕಳುಹಿಸಿಕೊಟ್ಟುದಕ್ಕಾಗಿ ಹಿಂಮೂ ಹೈಸ್ಕೂಲ್ ನಿವೃತ್ತ ಹೆಡ್‌ಮಾಸ್ಟರ್ ಶ್ರೀ ಎಂ. ಎ. ಜೆ. ತಿರುಮಲೈಂಗಾರ್ಯ ಸ್ವಾಮಿಗಳಿಗೂ (ಬೆಂಗಳೂರು), ಇಂಡಿಯಾ ಮಿಟಿಯಾರಲಾಜಿಕಲ್ ಇಲಾಖೆಯ ಶ್ರೀ ಎಂ. ಎನ್. ಕೃಷ್ಣಸ್ವಾಮಿಗಳಿಗೂ (ಬೆಂಗಳೂರು), ನಿವೃತ್ತ ಹೆಡ್‌ಮಾಸ್ಟರ್ ಶ್ರೀ ಆರ್. ಎ. ಸಂಪತ್ಕುಮಾರಾಚಾರ್ಯ ಸ್ವಾಮಿಗಳಿಗೂ (ಮೈಸೂರು), ನಿವೃತ್ತ ಇಂಜಿನಿಯರ್ ಶ್ರೀ ಆರ್. ಎ. ಎಸ್. ಆಯ್ಯಂಗಾರ್ಯ ಸ್ವಾಮಿಗಳಿಗೂ (ಮಂಡ್ಯ) ಕೃತಜ್ಞರಾಗಿದ್ದಾರೆ. ತಿರುಪತಿ ಹತ್ತಿರ ಬಾಲಮಂಡಯ ಮುಂತಾದ ಸ್ಥಳಗಳಿಗೆ ಹೋಗಿ, 1954ನೆಯ ಇಸವಿ ಏಪ್ರಿಲ್ ತಿಂಗಳಲ್ಲಿ ಆ ಸ್ಥಳಗಳನ್ನು ಕುರಿತು ಬರೆದು ಕೊಟ್ಟ ಲೇಖನಕ್ಕಾಗಿ ಮೈಸೂರು ಅಡ್ವೊಕೇಟ್ ಶ್ರೀ ಎಂ. ಎ. ಥೊರೆಸ್ವಾಮೈಯ್ಯಂಗಾರ್ಯ ಸ್ವಾಮಿಗಳಿಗೂ, ತಿದ್ದಿದ ಕರಡು ಪ್ರತಿಗಳನ್ನು ಶುದ್ಧ ಪ್ರತಿ ಮಾಡಿ ಅಚ್ಚಿಗೆ ಸಿದ್ಧಪಡಿಸಿ ಕೊಟ್ಟುದಕ್ಕಾಗಿ ಸೌಭಾಗ್ಯವತಿ ಎಂ. ಓ. ಅಲಮೇಲಮ್ಮ ಕೃಷ್ಣಸ್ವಾಮಿಯವರಿಗೂ ಸಮಿತಿಯ ಕೃತಜ್ಞತೆಗಳು ಸಲ್ಲತಕ್ಕುವು.

ಮಂಡಯಂ ಶ್ರೀ ವೈಷ್ಣವ ಮಹಾಸಭೆಗಳ ಮತ್ತು ನಮ್ಮ ಸಮುದಾಯದವರ ಸಾಮಾಜಿಕ ಕೂಟಗಳ ಅನೇಕ ಛಾಯಾಚಿತ್ರಗಳನ್ನು ಒಟ್ಟಿಗೆ ಪರಿಶಿಷ್ಟದಲ್ಲಿ ಪ್ರಕಟಿಸಲಾಗಿದೆ. ಚಿತ್ರಗಳು ಪುಸ್ತಕದ ಉಪಯೋಗವನ್ನು ಹೆಚ್ಚಿಸಿದೆ ಎಂದು ನಿಸ್ಸಂಶಯವಾಗಿ ಹೇಳಬಹುದು. ಆ ಚಿತ್ರಗಳನ್ನು

ಕೃಪೆಮಾಡಿ ಒದಗಿಸಿಕೊಟ್ಟ ಮಿತ್ರರ ಹೆಸರುಗಳನ್ನು ಪರಿಶಿಷ್ಟದಲ್ಲಿ ಕೊಡಲಾಗಿದೆ. ಅವರಿಗೆ ಕೃತಜ್ಞತೆಗಳು.

ಕೊನೆಯದಾಗಿ, "ಈ ಪುಸ್ತಕದಲ್ಲಿ ಇರಬಹುದಾದ ನ್ಯೂನತೆಗಳನ್ನು ಸರಿಪಡಿಸಿ, ವಿಷಯಗಳನ್ನು ಹಿಂದಿನಿಂದ ಇಂದಿನವರೆಗೆ ವಿಸ್ತಾರವಾಗಿ ಬೆಳೆಯಿಸಿ ಜಾಗ್ರತೆಯಾಗಿ ಪುನರ್ಮುದ್ರಣವಾಗಲು ನಮ್ಮ ಸಮುದಾಯದ ಮಹಾ ಜನರೆಲ್ಲರೂ ಸಹಕರಿಸಬೇಕಾಗಿ ಪ್ರಾರ್ಥನೆ" ಎಂದು ಶ್ರೀ ಶಿಂಗ್ರೈಂ ಗಾರ್ಯರು ಮಾಡಿರುವ ಪ್ರಾರ್ಥನೆಯೇ ಸಮಿತಿಯವರ ಪ್ರಾರ್ಥನೆ.

ತಿರುವಲ್ಲಿಕೇಣಿ
ಫೆಬ್ರುವರಿ, 1956.

ಎಂ. ಆರ್. ಸಂಪತ್ಕುಮಾರನ್.
ಸಂಪಾದಕ

॥ ಶ್ರೀ ॥

ಶ್ರೀಮತೇರಾಮಾನುಜಾಯ ನಮಃ

ವಿ ಜ್ಞಾ ಪ ನೆ

ಶ್ರೀ ಮಾಂಡವ್ಯ ಋಷಿ ಕ್ಷೇತ್ರವೆಂದು ಪ್ರಸಿದ್ಧವಾದ ನಮ್ಮ ಮಾತೃ ಸ್ಥಾನವಾದ ಮಂಡಯದಲ್ಲಿ ಶ್ರೀ ಲಕ್ಷ್ಮೀಜನಾರ್ದನ ಸ್ವಾಮಿಯವರ ಸನ್ನಿಧಿಯಲ್ಲಿ ಕ್ರಿ. ಶ. 1935 ನೇ ಏಪ್ರಿಲ್ ತಿಂಗಳಲ್ಲಿ ಮಂಡಯಂ ಶ್ರೀ ವೈಷ್ಣವ ಮಹಾಜನರ ಏಳನೆಯ ಮಹಾಸಭೆಯು ಅತ್ಯಂತ ವಿಜೃಂಭಣೆಯಿಂದ ನಡೆದದ್ದು ನಮ್ಮ ಸಮುದಾಯದ ಮಹನೀಯರೆಲ್ಲರಿಗೂ ಜ್ಞಾಪಕದಲ್ಲಿದೆ. ಈ ಸಭೆಯಲ್ಲಿ ನಮ್ಮ ಸಮುದಾಯದವರ ಕೆಲವು ಅಂಶಗಳನ್ನು ನಿವೇದಿಸಿದೆನು.

ಆಗ ಮಹಾಸಭೆಯವರು ನಮ್ಮವರ ಚರಿತ್ರೆಯನ್ನು ಪುಸ್ತಕ ರೂಪವಾಗಿ ಬರೆಯಿಸಿ ಪ್ರಕಟಿಸಬೇಕೆಂದು ತೀರ್ಮಾನಿಸಿ ಒಂದು ಸಮಿತಿಯನ್ನು ನೇಮಕ ಮಾಡಿದರು. ಆ ಸಮಿತಿಯ ಸದಸ್ಯರು:—

ಶ್ರೀಮದಿತ್ಯಾದಿಗಳಾದ:—

1. ಪ್ರಾಕ್ತನ ವಿಮರ್ಶ ವಿಚಕ್ಷಣ, ಮಹಾಮಹೋಪಾಧ್ಯಾಯ, ರಾವ್ ಬಹದ್ದೂರ್ ಆರ್. ನರಸಿಂಹಾಚಾರ್ಯಸ್ವಾಮಿಗಳು; ಬೆಂಗಳೂರು.

2. ಶ್ರೀ ಕಲ್ಕಿ ಎಂ. ಟಿ. ನರಸಿಂಹೈಯ್ಯಂಗಾರ್ಯಸ್ವಾಮಿಗಳು; ಬೆಂಗಳೂರು.

3. ಪಂಡಿತ ದೇವತಿಲಾಮಣಿ ರಾಮಾನುಜೈಯ್ಯಂಗಾರ್ ಸ್ವಾಮಿಗಳು; ಮೈಸೂರು.

4. ಅಸೂರಿ ಜೊಕ್ಕತಂಬಿ ತಿರುನಾರಣೈಯ್ಯಂಗಾರ್ ಸ್ವಾಮಿಗಳು; ಮೈಸೂರು.

5. ಎಂ. ಟಿ. ನಾರಣ್ಯೆಯ್ಯಂಗಾರ್ ಸ್ವಾಮಿಗಳು; ಬೆಂಗಳೂರು.
6. ಎಂ. ಆಜಿ ರಾಮಾನುಜೈಯ್ಯಂಗಾರ್ ಸ್ವಾಮಿಗಳು; ಮೈಸೂರು.
7. ಆರ್. ತಿರುನಾರಣ್ಯೆಯ್ಯಂಗಾರ್ ಸ್ವಾಮಿಗಳು; ಮೈಸೂರು.
8. ಎಂ.ಎ. ಧೊರೆಸ್ವಾಮೈಯ್ಯಂಗಾರ್ ಸ್ವಾಮಿಗಳು; ಮೈಸೂರು.
9. ಸಾಹಿತ್ಯರತ್ನಂ, ಆಸ್ಥಾನ ಮಹಾವಿದ್ವಾನ್, ಸಾಂಖ್ಯತೀರ್ಥ ಜಗ್ಗು ವೆಂಕಟಾಚಾರ್ಯ ಸ್ವಾಮಿಗಳು; ಮೇಲುಕೋಟೆ.
10. ಎಂ. ಆಜಿ. ನಾರಣ್ಯೆಯ್ಯಂಗಾರ್ ಸ್ವಾಮಿಗಳು; ಮೈಸೂರು.
11. ವಿದ್ವಾನ್ ಆರ್. ಎ. ಐಯ್ಯನ್ಯೆಯ್ಯಂಗಾರ್ ಸ್ವಾಮಿಗಳು; ಮೈಸೂರು.
12. ಎಂ. ಜಿ. ತಿಂಗ್ರೈಯ್ಯಂಗಾರ್, ಮೈಸೂರು, (ಚಾಲಕರು).

ಈ ಸಮಿತಿಯ ಮೊದಲಿನ ಏಳು ಸ್ವಾಮಿಗಳು ಈಚೆಗೆ ಪರಮಪದಿಸಿರುತ್ತಾರೆ.

ಶ್ರೀರಂಗಪಟ್ಟಣದ ಕಾವೇರೀ ತೀರದಲ್ಲಿ ಕಿರಂಗೂರಿನಲ್ಲಿ ಶ್ರೀ॥ ಉ॥ ತಿರುವನನ್ತಾಳ್ವಾರ್ ಸ್ವಾಮಿಗಳವರು ಶಾಲಿವಾಹನ ಶಕ 975 ನೆಯ ವಿಜಯ ಸಂವತ್ಸರ, ಜ್ಯೈತ್ರ, ಚಿತ್ರಾ ನಕ್ಷತ್ರದಲ್ಲಿ (ಕ್ರಿ. ಶ. 1053 ರಲ್ಲಿ) ಅವತರಿಸಿ, ಶ್ರೀರಾಮಾನುಜಾಚಾರ್ಯರ ಕೃಪಾಕಟಾಕ್ಷಕ್ಕೆ ಪಾತ್ರರಾದ ಸಮಯದಿಂದಲೇ ಈಗ ದೊರೆತಿರುವ ನಮ್ಮ ಮಹಾನುಭಾವರ ಚರಿತ್ರೆಯ ಆರಂಭ. "ಮಾಂಡವ್ಯ ಋಷಿಗಳ" ಯುಗವು ನಮ್ಮ ಭಾಗಕ್ಕೆ ಚರಿತ್ರಾ ಪೂರ್ವಯುಗವಾಗಿದೆ.

ಅನೇಕ ಮಾನ್ಯರ ಸಹಕಾರದಿಂದಲೂ ಮಹಾಸಭೆಯ ಸಮಿತಿಯ ಮಹನೀಯರ ಸಹಾಯದಿಂದಲೂ ಸಂಗ್ರಹಿಸಿದಷ್ಟು ವಿಷಯಗಳನ್ನು ಬರೆದು ಸ್ವಲ್ಪ ಕಾಲವಾಗಿತ್ತು. ಕ್ರಿ. ಶ. 1946 ರಲ್ಲಿ ತಿರುವಲ್ಲಿಕ್ಕೇಣಿಯಲ್ಲಿ ಶ್ರೀ ಗೌತಮಾಶ್ರಮದಲ್ಲಿ ನಮ್ಮ ಸಮುದಾಯದ ಚರಿತ್ರೆಯ ವಿಷಯದಲ್ಲಿ ಅಲ್ಲಿನ ಮಹಾಜನರು ನನ್ನ ಕೈಯಲ್ಲಿ ಒಂದು ಉಪನ್ಯಾಸವನ್ನೇರ್ಪಡಿಸಿ ಕೇಳಿದರು. ಆಗ ಅಲ್ಲಿ ನೆರೆದಿದ್ದ ಮುಖ್ಯರೂ ಉತ್ಸಾಹಿಗಳೂ ನಾನು ಸಂಗ್ರಹಿಸಿದ್ದ ವಿಷಯಗಳನ್ನು ಪುಸ್ತಕ ರೂಪವಾಗಿ ಪ್ರಕಟಿಸಲು ನಿರ್ಧರಿಸಿ

ಒಂದು ಸಮಿತಿಯನ್ನು ಏರ್ಪಡಿಸಿದರು. ಈ ಸಮಿತಿಯ ಸದಸ್ಯ ಮಹಾಶಯರು:—

ಶ್ರೀಮದಿತ್ಯಾದಿಗಳಾದ:—

1. ಎಂ. ವಿ. ತಿರುಮಲೈಯ್ಯಂಗಾರ್ ಸ್ವಾಮಿಗಳು; (ಅಧ್ಯಕ್ಷರು)

2. ಎಸ್. ಶ್ರೀನಿವಾಸಾಚಾರ್ಯ ಸ್ವಾಮಿಗಳು; (ಉಪಾಧ್ಯಕ್ಷರು)

3. ಎಂ. ಓ. ಪಾರ್ಥಸಾರಥಿ ಐಯ್ಯಂಗಾರ್ ಸ್ವಾಮಿಗಳು; (ಉಪಾಧ್ಯಕ್ಷರು)

4. ಎಂ. ಓ. ಎಸ್. ಐಯ್ಯಂಗಾರ್ ಸ್ವಾಮಿಗಳು; (ಉಪಾಧ್ಯಕ್ಷರು)

5. ಎಂ. ಎ. ಶ್ರೀನಿವಾಸನ್ ಸ್ವಾಮಿಗಳು; (ಗೌರವ ಕೋಶಾಧಿಕಾರಿಗಳು)

6. ಎಂ. ಎ. ಕೃಷ್ಣಮಾಚಾರ್ಯ ಸ್ವಾಮಿಗಳು.

7. ಎಂ. ಎ. ಶಿಂಗ್ರಾಚಾರ್ಯ ಸ್ವಾಮಿಗಳು;

8. ಎಂ. ಜಿ. ಶಿಂಗ್ರೈಯ್ಯಂಗಾರ್; (ಗ್ರಂಥ ಕರ್ತರು)

9. ಎಂ. ಆರ್. ಸಂಪತ್ಕುಮಾರನ್ ಸ್ವಾಮಿಗಳು; (ಸಹಾಯ ಗ್ರಂಥಕರ್ತರು)

10. ಎಂ. ಓ. ಅಳಶಿಂಗ್ರಾಚಾರ್ಯ ಸ್ವಾಮಿಗಳು; (ಗೌರವ ಕಾರ್ಯದರ್ಶಿಗಳು)

ನಾನು ಬರೆದ ಪುಸ್ತಕವನ್ನು ಈ ಸಮಿತಿಯ ಸದಸ್ಯರು ಆಮೂಲಾಗ್ರವಾಗಿ ಪರಿಶೋಧಿಸಿ ಅನೇಕ ಸಲಹೆಗಳನ್ನು ನೀಡಿದರು. ಈ ಸಲಹೆಗಳಂತೆ ಸಾಧ್ಯವಾದಷ್ಟು ತಿದ್ದುಪಡಿಗಳನ್ನು ಮಾಡಿದ್ದೇನೆ. ಶ್ರೀಮದಿತ್ಯಾದಿ ಎಂ. ಆರ್. ಸಂಪತ್ಕುಮಾರನ್‌ರವರೂ ಶ್ರೀಮದಿತ್ಯಾದಿ ಎಂ. ಎ. ನರಸಿಂಹಾಚಾರ್ಯರವರೂ (ಅಯ್ಯಾಧೋರೆಗಳು) ಶ್ರೀಮದಿತ್ಯಾದಿ ಎಂ. ಓ. ಅಳಶಿಂಗ್ರಾಚಾರ್ಯರವರೂ ಗ್ರಂಥ ಪರಿಷ್ಕರಣದಲ್ಲಿ ಬಹಳ ಸಹಾಯಮಾಡಿದ್ದಾರೆ. ಈ ಮಹಾನುಭಾವರಿಗೆ ನನ್ನ ಅನೇಕ ನಮಸ್ಕಾರಗಳು.

ಈ ಗ್ರಂಥರಚನೆಗೆ ಮುಖ್ಯ ಪ್ರೇರೇಪಕರೂ ಮಾರ್ಗದರ್ಶಿಗಳೂ ಆದ ಶ್ರೀಮದಿತ್ಯಾದಿ ಎಂ. ಎ. ಥೊರೆಸ್ವಾಮೈಯ್ಯಂಗಾರ್ಯರವರಿಗೆ ನನ್ನ ಅನಂತಾನಂತ ವಂದನೆಗಳು.


ಒಕ್ಕಲು ತನದ ಪಟ್ಟಿಯನ್ನು ತಯಾರಿಸುವುದರಲ್ಲಿ ಅಮೂಲ್ಯವಾದ ಸಹಾಯವನ್ನು ಮಾಡಿದ ಶ್ರೀ|| ಉ|| ಪಂಡಿತ ಆರ್. ಎ. ಕೃಷ್ಣಮಾಚಾರ್ಯ ಸ್ವಾಮಿಗಳವರಿಗೂ, ಶ್ರೀಯದುಗಿರಿ ಯತಿರಾಜ ಮಠದ ಕೆಲವು ವಿಷಯಗಳನ್ನು ಒದಗಿಸಿ ಕೊಟ್ಟದ್ದಕ್ಕಾಗಿ ಶ್ರೀಮದಿತ್ಯಾದಿಗಳಾದ ಕೃಷ್ಣ ಕುಮಾರ ಆಳಶಿಂಗ್ರಾ ಜಾರ್ಯ ಸ್ವಾಮಿಗಳಿಗೂ(ಮಡಕೆಹುಳಿ) ಆಸೂರಿ ಶ್ರೀನಿವಾಸಸ್ವಾಮಿಗಳವರಿಗೂ ಅನೇಕ ವಂದನೆಗಳು. ಮಂಡಯದೆ ದೇವಸ್ಥಾನದಲ್ಲಿ ಬಿಜಯಂಗೈದಿರುವ **ಶ್ರೀ ಲಕ್ಷ್ಮೀಜನಾರ್ದನಸ್ವಾಮಿಯವರ** ಮತ್ತು ತಾಯಾರ್ ಸನ್ನಿಧಿಯಲ್ಲಿ ಬಿಜಯಂಗ್ಯೆದಿರುವ **ಶ್ರೀ ॥ ಉ॥ ತಿರುವನನ್ತಾಳ್ವಾರ್ ಸ್ವಾಮಿಗಳವರ** ಛಾಯ ಚಿತ್ರಗಳು ಈ ಗ್ರಂಥದಲ್ಲಿ ಕಂಗೊಳಿಸುತ್ತಲಿವೆ. ಈ ಚಿತ್ರ ಸಂಗ್ರಹ ಕಾರ್ಯದಲ್ಲಿ ನೆರವಾದ ಶ್ರೀಮದಿತ್ಯಾದಿ ಸಂಪಳ್ಳಿ ರಂಗಸ್ವಾಮೈಯ್ಯಂಗಾರ್ಯ ಸ್ವಾಮಿಗಳಿಗೂ, ಶ್ರೀಮದಿತ್ಯಾದಿ ಸಂಪಳ್ಳಿ ನರಸಿಂಹಾಚಾರ್ಯಸ್ವಾಮಿಗಳೇ ಮುಂತಾದವರಿಗೂ ನನ್ನ ವಂದನೆಗಳು.

ಈ ನನ್ನ ಕೈಂಕರ್ಯವು ನಮ್ಮ ಮಹಾಜನಗಳಿಗೆ ಭೋಗ್ಯವಾಗುವುದೆಂದು ನಂಬಿ ಈ ಗ್ರಂಥವನ್ನು **ಮಂಡಯಂ ಶ್ರೀ ವೈಷ್ಣವ ಮಹಾಜನರ** ಸನ್ನಿಧಿಯಲ್ಲಿ ಸಾಷ್ಟಾಂಗ ನಮಸ್ಕಾರ ಪೂರ್ವಕವಾಗಿ ಸಮರ್ಪಣೆ ಮಾಡಿದ್ದೇನೆ.

ಈ ಪುಸ್ತಕದಲ್ಲಿರಬಹುದಾದ ನ್ಯೂನತೆಗಳನ್ನು ಸರಿಪಡಿಸಿ, ವಿಷಯಗಳನ್ನು ಹಿಂದಿನಿಂದ ಇಂದಿನವರೆಗೆ ವಿಸ್ತಾರವಾಗಿ ಬೆಳೆಯಿಸಿ, ಜಾಗ್ರತೆಯಾಗಿ ಪುಸ್ತಕವು ಪುನರ್ಮುದ್ರಣವಾಗಲು ನಮ್ಮ ಸಮುದಾಯದ ಮಹಾಜನರೆಲ್ಲರೂ ಸಹಕರಿಸಬೇಕಾಗಿ ಪ್ರಾರ್ಥನೆ.

ಮೈಸೂರು,
ಡಿಸೆಂಬರ್, 1953

ಮಂಡಯಂ ಜಟಾವಲ್ಲಭ
ತೆಂಗಯ್ಯಂಗಾರ್ಯ ದಾಸ.



ಮಂಡಯಂ ಜಟಾವಲ್ಲಭ ಶಿಂಗ್ರೈಂಗಾರ್ಯರು

(ಗ್ರಂಥಕರ್ತರು)

ವಿಷಯ ಸೂಚಿಕೆ

ಪ್ರಕರಣ		ಪುಟ ಸಂಖ್ಯೆ
	ಸಮರ್ಪಣೆ	
	ವಿಜ್ಞಾಪನೆ	
1.	ಮಂಡಯಂ ಶ್ರೀವೈಷ್ಣವ ಮಹಾಜನಗಳೂ ಮಂಡಯಿದ ಪ್ರಾಚೀನತೆಯೂ	1
2.	ಶ್ರೀ ಉ. ಅನಂತಾರ್ಯರ ಮತ್ತು ಶ್ರೀ ಉ. ಗೋವಿಂದರಾಜ ಉಡೈಯವರವರ ವೈಭವ	8
3.	ರಾಮಾನುಜಪುರದ ಪ್ರತಿಷ್ಠಾಪಕರು ಶ್ರೀ ಉ. ಅಪ್ಪಯಾ ಚಾರ್ಯರ ವೈಭವ	17
4.	ಮಂಡಯ ಮತ್ತು ರಾಮಾನುಜಪುರದವರ ವಿಸ್ತಾರ	21
5.	ಶತಮಾನ ಶತಮಾನವರದಿಗಳು	31
6.	ಶ್ರೀ ಯದುಗಿರಿ ಯತಿರಾಜಮಠದ ಸ್ವಾಮಿಗಳು	41
7.	ಕೆಲವು ಧರ್ಮಗಳು	62
8.	ಮಂಡಯಂ ಶ್ರೀವೈಷ್ಣವ ಮಹಾಜನರ ಗ್ರಂಥಕರ್ತೃತ್ವವು	72
9.	ಮಿಶ್ರವಿಷಯಗಳು	92, 172
10.	ಮಂಡಯಂ ಶ್ರೀವೈಷ್ಣವರ ಮಹಾಸಭೆಗಳು	109

ಪರಿಶಿಷ್ಟಗಳು

ಪ್ರಕರಣ	ಪುಟ ಸಂಖ್ಯೆ
(i) ಕೆಲವು ಶಾಸನಗಳು	113
(ii) ಮಂಡಯಂ ಮಹಾಜನಗಳ ಹೆಸರುಗಳ ಪಟ್ಟಿ	134
(iii) ನಾಡೀಗ್ರಂಥದ ಜಾತಕದ ಫಲಗಳು	165
(iv) ಇಳೆಯ ಮಂಡಯದ ವಿಚಾರಗಳು	169
(9)ನೆಯ ಪ್ರಕರಣ, ಮಿಶ್ರವಿಷಯಗಳು (ಮುಂದುವರಿದುದು) ಗೌತಮಾಶ್ರಮ.	172
(v) ಛಾಯಾಚಿತ್ರಗಳು	

॥ ಶ್ರೀಮತೇ ರಾಮಾನುಜಾಯ ನಮಃ ॥

ಪ್ರಕರಣ ೧

ಮಂಡಯಂ ಶ್ರೀ ವೈಷ್ಣವ ಮಹಾಜನಗಳೂ ಮಂಡಯೆದ ಪ್ರಾಚೀನತೆಯೂ

ಮಾಂಡವ್ಯ ಋಷಿಗಳಿಂದ ಸ್ಥಾಪಿತವಾದ **ಮಂಡಯ**ದಲ್ಲಿಯೂ ಮಂಡಯದ ಪ್ರಾಂತದಲ್ಲಿಯೂ ಅನೇಕ ಶತಮಾನಗಳಿಂದ ನೆಲೆಸಿದ **ಅಧಿಕ ಸಂಖ್ಯೆಯ** ಶ್ರೀ ವೈಷ್ಣವ ಪಂಗಡದವರನ್ನೇ ಸಾಮಾನ್ಯವಾಗಿ ಮಂಡಯಂ ಶ್ರೀ ವೈಷ್ಣವ ಮಹಾಜನರೆಂದು ಹೇಳುವ ಪ್ರತೀತಿ ಇದೆ. ಆಲದ ಗೋವಿಂದ ರಾಜರ ಹಿಂಬಾಲಿಕರಾಗಿ ಹದಿನಾರನೆಯ ಶತಮಾನದಲ್ಲಿ ಬಂದ ಶ್ರೀ ವೈಷ್ಣವ ಪಂಗಡದವರನ್ನೂ ಮುಂದೆ ವಿವರಿಸುವಂತೆ ಇನ್ನೂ ಕೆಲವರನ್ನೂ ಮಂಡಯಂ ಶ್ರೀ ವೈಷ್ಣವರೆಂದು ನಿರ್ಧರವಾಗಿ ಹೇಳಬಹುದು.

ಮೈಸೂರು ದೇಶದಲ್ಲಿ ಸಾಮಾನ್ಯವಾಗಿ ಈಗ ನೆಲೆಸಿರುವ ಶ್ರೀ ವೈಷ್ಣವ ಮಹಾಜನರನ್ನು ಈ ಕೆಳಗೆ ವಿವರಿಸಿರುವ ಮುಖ್ಯ ಪಂಗಡಗಳಾಗಿ ವಿಂಗಡಿಸ ಬಹುದು :

ಮಂಡಯಂ ಶ್ರೀ ವೈಷ್ಣವ ಮಹಾಜನಗಳು.
ಹೆಬ್ಬಾರ್ ಶ್ರೀ ವೈಷ್ಣವ ಮಹಾಜನಗಳು.
ಕೇಳ್ನಾಟ್ ಶ್ರೀ ವೈಷ್ಣವ ಮಹಾಜನಗಳು.
ಶ್ರೀ ಜೋಳೀಯ ಶ್ರೀ ವೈಷ್ಣವ ಮಹಾಜನಗಳು.
ಮತ್ತೂ ಆಂಧ್ರ ಶ್ರೀ ವೈಷ್ಣವ ಮಹಾಜನಗಳು.

ಮಂಡಯಪೆಂಬ ಹೆಸರಿನ ಪ್ರಾಚೀನತೆ

ಮಂಡಯದ ಸ್ಥಳಪುರಾಣದ ವಿಷಯಗಳು ಯುಗಾಂತರದ ಮಾತು ಗಳು. ಸ್ಥಳಪುರಾಣವೆಂದು ಮಂಡಯದ ಶ್ರೀವೈಷ್ಣವರಲ್ಲಿ ಒಂದು ಓಲೆಯ ಪ್ರತಿಯೂ ಸ್ಮಾರ್ತಬ್ರಾಹ್ಮಣರಲ್ಲಿ ಒಂದು ಕಡತು ಪ್ರತಿಯೂ ಇದ್ದುವು. ಇವುಗಳಲ್ಲಿನ ವಿಷಯಗಳೂ ಹೆಸರುಗಳೂ ಕೆಲವೆಡೆಗಳಲ್ಲಿ ಒಂದಕ್ಕೊಂದು

ಆಷ್ಟಾಗಿ ಹೋಲುವುದಿಲ್ಲ. ಕ್ರಿ.ಶ ೧೯೮೯ನೆಯ ಇಸವಿಯಲ್ಲಿ ಮೈಸೂರು ಸರ್ಕಾರವು ಆಚ್ಚು ಮಾಡಿಸಿರುವ ಮೈಸೂರು ಡಿಸ್ಟ್ರಿಕ್ಟ್ ಗೆಜೆಟಿಯರ್‌ನಲ್ಲಿ ಈ ಎರಡು ಪ್ರತಿಗಳಿಗೂ ಹೋಲಿಕೆ ಇರುವ ಅಂಶಗಳೇ ನಮೂದಾಗಿವೆ.

ಕೃತಯುಗದಲ್ಲಿ ಈ ಸ್ಥಳವು ಆರಣ್ಯವಾಗಿದ್ದಿತೆಂದೂ, ಇಲ್ಲಿ ತಪಸ್ಸು ಮಾಡುತ್ತಿದ್ದ ಟಂಕ ಮಹರ್ಷಿಗಳು ಈ ಆರಣ್ಯದ ಮೃಗಗಳಿಗೆಲ್ಲಾ 'ವೇದ' ಶಬ್ದವನ್ನು ಉಚ್ಚರಿಸುವಂತೆ ಬೋಧಿಸಿದ್ದರೆಂದೂ, ಆದುದರಿಂದ ಈ ಸ್ಥಳಕ್ಕೆ 'ವೇದರಣ್ಣೂರ್' (ವೇದಾರಣ್ಯ) ಎಂಬ ಹೆಸರಾಯಿತೆಂದೂ ಹೇಳಿದೆ. ಈ ಮಹರ್ಷಿಗಳೇ ಶ್ರೀಲಕ್ಷ್ಮೀಜನಾರ್ದನ ಸ್ವಾಮಿಯನ್ನು ಇಲ್ಲಿ ಪ್ರತಿಷ್ಠಿಸಿದರಂತೆ. ಆ ಕಾಲದಲ್ಲೇ 'ಮತಗಳೂರ್' (ಮಾತಂಗ) ಎಂಬ ಋಷಿಗಳು ಈ ಊರಿನಲ್ಲಿರುವ ಶ್ರೀ ಸಕಲೇಶ್ವರ ಸ್ವಾಮಿಯನ್ನು ಪ್ರತಿಷ್ಠಿಸಿದರಂತೆ. ಈ ಋಷಿಗಳಿಗೆ ಶ್ರೀ ಮಹಾವಿಷ್ಣುವು ಪ್ರತ್ಯಕ್ಷನಾದುದರಿಂದ 'ವೇದಾರಣ್ಯ'ಕ್ಕೆ 'ವಿಷ್ಣುಪುರ' ವೆಂದು ಹೆಸರಿಟ್ಟರಂತೆ.

ದ್ವಾಪರ ಯುಗಾಂತದಲ್ಲಿ ಇಂದ್ರವರ್ಮನೆಂಬ ರಾಜನು ಸಂತಾನಾರ್ಥಿಯಾಗಿ ಇಲ್ಲಿಗೆ ಬಂದು ದೇವರನ್ನು ಪ್ರಾರ್ಥಿಸಿ, ಸೋಮವರ್ಮನೆಂಬ ಪುತ್ರನನ್ನು ಪಡೆದನಂತೆ. ಈ ಸೋಮವರ್ಮನು ಇಲ್ಲಿನ ಅಗ್ರಹಾರವನ್ನೂ ಕೋಟೆಯನ್ನೂ ಕಟ್ಟಿಸಿ, ವಿಷ್ಣುಪುರಕ್ಕೆ 'ಮನದೈವಮು' (ನನ್ನ ದೇವರು) ಎಂದು ನಾಮಕರಣ ಮಾಡಿದನಂತೆ. ಈ 'ಮನದೈವಮು' ಎಂಬ ಶಬ್ದದ ವಿಪರೀತವೇ 'ಮಂಡಯ' ವೆಂದಾಯಿತಂತೆ.

ಮಾಂಡವ್ಯ ಋಷಿಗಳು ಇಲ್ಲಿ ತಪಸ್ಸು ಮಾಡುತ್ತಿದ್ದು ಈ ಕ್ಷೇತ್ರವನ್ನು ಸ್ಥಾಪಿಸಿದ್ದರಿಂದ **'ಮಂಡಯ'** ವೆಂದು ಹೆಸರಾಯಿತೆಂದು ಪ್ರತೀತಿ ಬಹಳವಾಗಿದೆ. ಇದು ಬಹುಸಮ್ಮತವಾಗಿ ತೋರುತ್ತಿದೆ.

ಮಂಡಯದ ಪ್ರಾಚೀನತೆಯ ವಿಚಾರದಲ್ಲಿ ಮಂಡಯದ ಶ್ರೀ ವೈಷ್ಣವ ಮಹಾಜನರು ಅನೇಕರಲ್ಲಿ ಸಾಮಾನ್ಯವಾಗಿದ್ದ ತಿಳಿವಳಿಕೆಯು ಈ ರೀತಿ ಇತ್ತು:

ತಿರುಪತಿಯ ಬಳಿ **'ಇಳಯ ಮಂಡಯ'** ವೆಂಬ ಗ್ರಾಮದಲ್ಲಿ ವಾಸವಾಗಿದ್ದ ಶ್ರೀ॥ ಅಂ॥ ತಿರುಮಲೈ ಗೋವಿಂದರಾಜ ಉಡೈಯವರಿಗೆ

ಕ್ರಿ. ಶ. ೧೫೧೬ ನೆಯ ಇಸವಿಯಲ್ಲಿ ವಿಜಯನಗರದ ರಾಜನಾದ ಕೃಷ್ಣದೇವ ರಾಯನು ಶ್ರೀರಂಗಪಟ್ಟಣದ ಹತ್ತಿರ ಕೆಲವು ಗ್ರಾಮಗಳನ್ನು ದಾನ ಮಾಡಿದ ನೆಂದೂ, ಈ ಗ್ರಾಮಗಳಿಗೆ '**ಕೃಷ್ಣರಾಯಪುರ**' ವೆಂಮ ಪ್ರತಿನಾಮವನ್ನು ಕೊಟ್ಟನೆಂದೂ, ೨ರುವಾಯ ಶ್ರೀ॥ ಉ॥ ತಿರುಮಲೈ ಗೋವಿಂದರಾಜ ಉಡ್ಯೆಯರವರು ಇಲ್ಲಿಗೇ ತಮ್ಮ ಬಂಧು ಮಿತ್ರ ವರ್ಗದವರೊಡನೆ ಬಂದು ವಾಸಮಾಡಿದರೆಂದೂ, 'ಇಳಯ ಮಂಡಯ' ದ ಜ್ಞಾಪಕಾರ್ಥವಾಗಿ ತಾವು ಈಚೆಗೆ ನೆಲೆಸಿದ ಈ ಊರಿಗೆ '**ಮಂಡಯ**' ವೆಂದು ನಾಮಕರಣ ಮಾಡಿದ ರೆಂದೂ ಸಾಮಾನ್ಯ ತಿಳಿವಳಿಕೆ; ಎಂದರೆ ಕ್ರಿ. ಶ. ೧೫೧೬ ರಿಂದೀಚೆಗೆ '**ಮಂಡಯ**' ವೆಂಬ ಹೆಸರು ಬಂದಿತೆಂದು ಅಭಿಪ್ರಾಯ.

ಆದರೆ ನಮ್ಮ ಹಿರಿಯರು ಅನೇಕರಲ್ಲಿ ಮಂಡಯವೆಂಬ ಹೆಸರು ಕ್ರಿ.ಶ. ೧೫೧೬ ಕ್ಕಿಂತಲೂ ಬಹಳ ಹಿಂದೆಯೇ ಇದ್ದಿರಬೇಕೆಂಬ ಅಭಿಪ್ರಾಯವೇನೋ ಇದ್ದಿತು. ಈ ಅಭಿಪ್ರಾಯಕ್ಕೆ ತಕ್ಕ ಆಧಾರವನ್ನು ವ್ಯಕ್ತವಾಗಿ ಹೇಳಿಲ್ಲ.

ಮಂಡಯವೆಂಬ ಹೆಸರು ಶ್ರೀ ಭಾಷ್ಯಕಾರರ ಕಾಲದಲ್ಲೇ ಇದ್ದಿತೆಂದೂ, ಇದಕ್ಕೆ ಬಹಳ ಹಿಂದೆಯೇ ಮಾಂಡವ್ಯ ಋಷಿಗಳಿಂದ ನಿರ್ಮಿತವಾದ ಈ ಕ್ಷೇತ್ರಕ್ಕೆ **ಮಂಡಯ**ವೆಂಬ ಹೆಸರು ಅನಾದಿಯಾಗಿ ಬಂದಿರಬಹುದೆಂದೂ ಊಹೆಯಾಗುತ್ತದೆ. ಕೆಲವು ಕಾರಣಗಳನ್ನು ಈ ಕೆಳಗೆ ವಿವರಿಸಿದೆ.

1. ಶ್ರೀ ರಾಮಾನುಜರು ಮೊದಲನೆಯ ಸಲ ತಿರುಪತಿಗೆ ಬಿಜಯ ಮಾಡಿದಾಗ ವಿಠ್ಠಲದೇವನೆಂಬ ರಾಜನು ಶ್ರೀ ರಾಮಾನುಜರ ಶಿಷ್ಯನಾದನು. ಆಗ ತಿರುಪತಿ ಕ್ಷೇತ್ರದಲ್ಲಿ ವಾಸಮಾಡುತ್ತಿದ್ದ ಶ್ರೀ॥ ಉ॥ ತಿರುವನನ್ತಾಳ್ವಾರ್ ಸ್ವಾಮಿಗಳ್ ಮೊದಲಾದ ಕರ್ನಾಟಕ ದೇಶದಿಂದ ಬಂದಿದ್ದ ಶ್ರೀ ರಾಮಾನುಜರ ಶಿಷ್ಯವೃಂದದ ಉಪಯೋಗಕ್ಕಾಗಿ ಒಂದು ಗ್ರಾಮವನ್ನು ಅರ್ಪಿಸಿದ ನೆಂದು ತಿಳಿಯಬರುತ್ತದೆ. ಈ ಗ್ರಾಮಕ್ಕೆ ಶ್ರೀ ವೈಷ್ಣವ ಮಹಾಜನರ ಕೋರಿಕೆಯಂತೆ '**ಬಾಲ ಮಂಡಯ**' ವೆಂದು ನಾಮಕರಣ ಮಾಡಿದನೆಂದು ಪ್ರತೀತಿಯಿದೆ. ಆದುದರಿಂದ ಶ್ರೀರಂಗಪಟ್ಟಣದ ಹತ್ತಿರ ಹಿಂದೆಯೇ ಇದ್ದಿರ ಬೇಕಾದ '**ಮಂಡಯ**' ವೆಂಬ ಅಗ್ರಹಾರದ ಜ್ಞಾಪಕಾರ್ಥವಾಗಿ ತಿರು

ಪತಿಯ ಬಳಿಯ ಅಗ್ರಹಾರಕ್ಕೆ 'ಇಳಿಯ ಮಂಡಯ' ವೆಂದು ಹೆಸರಿಟ್ಟ ರೆಂದು ಊಹಿಸಬಹುದು.

೭. ಶ್ರೀಮದಿತ್ಯಾದಿ ನ್ಯಾಯವೇದಾನ್ತ ವಿದ್ವಾನ್ ಆರ್. ಎ. ಅಯ್ಯ ನ್ಗೈಯ್ಯಂಗಾರ್ ಸ್ವಾಮಿಗಳು ರಾಮಾನುಜಪುರಂ ಆನಂದಾಣ್ ಪಿಳ್ಳೈಗಳ ವಂಶವೃಕ್ಷವನ್ನು ಸಂಪಾದಿಸಿರುವುದೊಂದರಲ್ಲಿ ಸುಮಾರು ಕ್ರಿ.ಶ. ೧೮೦೦ ನೇ ಇಸವಿಯಲ್ಲಿಯೇ 'ಮಂಡಯತ್ತ್ ಆಪ್ಪನ್' ಎಂಬೊಬ್ಬ ಮಹನೀಯರ ಹೆಸರಿದೆ. ಇದೂ 'ಮಂಡಯ' ವೆಂಬ ಹೆಸರನ್ನು ಬಹಳ ಹಿಂದಣ ಶತ ಮಾನಗಳಿಗೆ ತಳ್ಳುತ್ತದೆ.

೫. ಮಂಡಯದ ಲೋಹಿತ ಗೋತ್ರದವರ ಕೂಟಸ್ಥರಲ್ಲಿ ನಾಗಮಂ ಗಲಾಧಿಪ ತಿಮ್ಮಣ್ಣ ದಣ್ಡನಾಯಕರು (ತಿರುಮಲಾಚಾರ್ಯರು, ತಿಮ್ಮರಸ ಒಡೆಯರು, ಶಿಂಗರಸ ಒಡೆಯರ ಮಕ್ಕಳು) ಕ್ರಿ. ಶ. ೧೪೫೮ ಕ್ಕೆ ಹಿಂದೆಯೇ ನಾಗಮಂಗಲದಲ್ಲಿ ಆಳುತ್ತಿದ್ದರೆಂಬುದು ಶ್ರೀರಂಗಪಟ್ಟಣದ ತಾಲ್ಲೂಕು ೧೪೫೮ ನೇ ನಂಬರು ಶಾಸನದಿಂದ ವ್ಯಕ್ತಪಡುತ್ತದೆ. ಅಂದಮೇಲೆ ಮಂಡಯದ ಶ್ರೀ ವೈಷ್ಣವ ಮಹಾಜನರು ಕ್ರಿ.ಶ. ೧೪ನೇ ಶತಮಾನದಲ್ಲೂ ಇನ್ನೂ ಹಿಂದೆಯೂ ಕರ್ಣಾಟಕ ಪ್ರಾಂತದಲ್ಲಿ ನೆಲಸಿದ್ದರೆಂಬುದನ್ನು ಸ್ಥಿರಪಡಿಸುತ್ತದೆ.

೪. ಕ್ರಿ. ಶ. ೧೫೧೮ ನೆಯ ಇಸವಿಯಲ್ಲಿ ವಿಜಯನಗರದ ಅರಸು 'ಕೃಷ್ಣ ದೇವ ರಾಯನು ಶ್ರೀ|| ಉ|| ತಿರುಮಲೈ ಗೋವಿಂದರಾಜ ಉಡೈಯವರಿಗೆ ಕೊಟ್ಟ ದಾನಶಾಸನದ ನಕಲು ಈ ಲೇಖನದ ಬೇರೆ ಪ್ರಕರಣದಲ್ಲಿ ಬರೆಯಿದೆ. ಇದು ಮಂಡಯದ ತಾಲ್ಲೋಕಿನ ೧೫೫೯ ನೇ ನಂಬರು ಶಾಸನವಾಗಿ 'ಎಪಿಗ್ರಾಫಿಕಾ ಕರ್ಣಾಟಕ'ದಲ್ಲಿ ಮುದ್ರಿತವಾಗಿದೆ. ಈ ಶಾಸನದಲ್ಲೇ 'ಕೃಷ್ಣ ರಾಯಪುರ' ವೆಂದು ಪ್ರತಿನಾಮ ಕೋಭಿತವಾದ ಗ್ರಾಮಗಳ ಎಲ್ಲೆಯನ್ನು ತೋಳಿ, 'ಚಿಕ್ಕ ಮಂಡೀಯ, ಕಲ್ಲಹಳ್ಳಿ, ಹೊಸಹಳ್ಳಿ, ತಂಡಸೇಹಳ್ಳಿ, ಕೋಣ ಹಳ್ಳಿ, ಮಂಡಯ' ಎಂಬವೇ ಆ ಗ್ರಾಮಗಳೆಂದು ಹೇಳಿದೆ. ಆದುದರಿಂದ ಕ್ರಿ. ಶ. ೧೫೧೮ ಕ್ಕೆ ಮುಂಚೆಯೇ 'ಮಂಡಯ', 'ಚಿಕ್ಕ ಮಂಡೀಯ' ಎಂಬ ಹೆಸರುಗಳು ಇದ್ದಿವೆ ಎಂಬುದು ಸ್ಪಷ್ಟವಾಗುತ್ತದೆ.

5. 'The Mysore Pradhans' (**ಮೈಸೂರು ಪ್ರಧಾನರು**) ಎಂಬ ಪುಸ್ತಕವನ್ನು ಕ್ರಿ. ಶ. ೧೯೩೨ ನೇ ಇಸವಿಯಲ್ಲಿ ಶ್ರೀಮದಿತ್ಯಾದಿಗಳಾದ ಅಣ್ಣಾದೊರೈ ಶ್ರೀನಿವಾಸಾಚಾರ್ಯರು, **ಮತ್ತು ಎಂ. ಎ. ನಾರಾಣ್ಯೈಯಂ** ಗಾರ್ಯರೂ (ಶ್ರೀ ಶ್ರೀವಾಸಾನಂದ ಸ್ವಾಮಿಗಳವರು) ಅಚ್ಚು ಮಾಡಿಸಿದರು. ಮೈಸೂರು ಪ್ರಧಾನರ ವಂಶೀಯರಾದ ಈ ಮಹನೀಯರು ಅನೇಕ ಅಸಲು ಪತ್ರಗಳಿಂದಲೂ ಇತರ ನಿರ್ಧಾರವಾದ ಆಧಾರಗಳಿಂದಲೂ ವಿಶೇಷ ಪರಿಶೋಧನೆಯಿಂದ ಬರೆದ ಪುಸ್ತಕವಿದು. ಈ ಪುಸ್ತಕದಲ್ಲಿ ಈ ರೀತಿ ಬರೆದಿದೆ: ಕ್ರಿ. ಶ. ೧೬೧೭ ನೇ ಇಸವಿಯಲ್ಲಿ ವಿಷ್ಣುವರ್ಧನ ರಾಯನು ಕಾವೇರೀ ತೀರದಲ್ಲಿನ ಅಷ್ಟಗ್ರಾಮ (ಎಂಟುಗ್ರಾಮ) ಗಳನ್ನು ಶ್ರೀ|| ಉ|| ಅನನ್ತಾಚಾರ್ಯರಿಗೂ ಇತರ ಬ್ರಾಹ್ಮಣರಿಗೂ ಜಹಗೀರಾಗಿ ಕೊಟ್ಟನೆಂದೂ, ಕ್ರಿ. ಶ. ೧೬೬೬ ರಲ್ಲಿ ಈ ಜಹಗೀರು ಗ್ರಾಮಗಳು ಬಲ್ಲಾಳ ರಾಜಧಾನಿಯು ನಾಶವಾದಾಗ, ಪಾಳ್ಯಗಾರರ ಕೈಸೇರಿತೆಂದೂ ಹೇಳಿದೆ. ಕ್ರಿ. ಶ. ೧೬೬೦ ರಲ್ಲಿ ವಿಜಯನಗರದ ಚಕ್ರವರ್ತಿಯು ಶ್ರೀರಂಗಪಟ್ಟಣಕ್ಕೆ ಶ್ರೀರಂಗರಾಯರೆಂಬ ರಾಜಪ್ರತಿನಿಧಿಯನ್ನು ಕಳುಹಿಸಿದನೆಂದೂ, ಶ್ರೀ ಉ|| ಅನನ್ತಾಚಾರ್ಯರ ವಂಶೀಯರಾದ ಗೋವಿಂದರಾಜ ಉಡೈಯರೆಂಬುವರಿಗೆ **ಮಂಡಯ**, ಅತ್ತಿಗುಪ್ಪೆ ತಾಲ್ಲೋಕುಗಳಲ್ಲಿ ಇಪ್ಪತ್ತೊಂದು ಗ್ರಾಮಗಳನ್ನು ಜಹಗೀರಾಗಿ ಕೊಟ್ಟನೆಂದೂ, ಈ ಉಡೈಯನವರು ಕ್ರಮೇಣ ರಾಜಪ್ರತಿನಿಧಿಗೆ ಗುರುಗಳಾದರೆಂದೂ, ಬರೆದಿದೆ. ಮಂಡಯವೆಂಬ ಗ್ರಾಮವು ಆ ಹೆಸರಿನ ತಾಲ್ಲೋಕಿನಲ್ಲಿ ಸೇರಿದ್ದಾಗಿರಬಹುದು.

6. ಇವೆಲ್ಲಕ್ಕಿಂತಲೂ ಬಹು ಮುಖ್ಯವಾದ ಆಧಾರವಾದ ಶಾಸನವು ಗ್ರಂಥಕರ್ತನ ಗಮನಕ್ಕೆ ಬಂದಿದೆ. ಮಂಡಯ ತಾಲ್ಲೋಕಿನ ೭೦ ನೇ ನಂಬರಾಗಿ '**ಎಪಿಗ್ರಾಫಿಕಾ ಕರ್ಣಾಟಕ**' ದಲ್ಲಿ ನಮೂದಾಗಿದೆ. ಮಂಡಯದ ಹತ್ತಿರವಿರುವ ಹೊಸ ಬೂದನೂರು ಗ್ರಾಮದ ಕೇಶವದೇವಸ್ಥಾನವೆಂದು ಕರೆಯಲ್ಪಡುತ್ತಿರುವ ಅನಂತಪದ್ಮನಾಭದೇವರ ಗುಡಿಯ ಒಳಪಾರ್ಶ್ವ ದಕ್ಷಿಣ ಕಡೆಯಲ್ಲಿ ಈ ಶಾಸನವಿದೆ. ಇದರ ಅಳತೆ ೪ ಅಡಿ ೭ ಅಂಗುಲ × ೧ ಅಡಿ ೧೧ ಅಂಗುಲ. ಇದರ ಕಾಲವು ಕ್ರಿ. ಶ. ೧೩೭೬ ನೇ ಇಸವಿಗೆ ಸರಿಹೋಗು

ತ್ತದೆ. ಈ ಶಾಸನವನ್ನು ಪೂರ್ತಿಯಾಗಿ ಅನುಬಂಧದಲ್ಲಿ ಕೊಟ್ಟಿದೆ.* ಆದುದರಿಂದ ಕನಿಷ್ಠಪಕ್ಷ ಕ್ರಿ. ಶ. ೧೩೭೬ಕ್ಕೆ ಕೆಲವು ಶತಮಾನಗಳ ಹಿಂದೆ ಯಾದರೂ ಪ್ರಖ್ಯಾತಿಯಾಗಿದ್ದಿರಬೇಕು. ಇದು ನಾವು ಹಿಂದೆ ಹೇಳಿದಂತೆ, 'ಬಾಲಮಂಡಯ'ವೆಂಬ ಹೆಸರು ಬಂದುದಕ್ಕೆ ಕಾರಣವನ್ನು ಸ್ಥಿರಪಡಿಸುತ್ತದೆ.

'ಇಳಯ ಮಂಡಯ' ದ ವಿಚಾರವನ್ನು ತಿರುಪತಿಯ ಸರಹದ್ದಿನಲ್ಲೇ ಹೋಗಿ ತಿಳಿಯಬೇಕು. ಕಾಗದಗಳನ್ನು ಬರೆದು ತಿಳಿಯಲು ಪ್ರಯತ್ನ ಪಟ್ಟದ್ದು ಅಷ್ಟು ಫಲಕಾರಿಯಾಗಲಿಲ್ಲ. ತಿರುಪತಿಯ ಬಳಿ 'ಮಂಡಯ' ವೆಂಬ ಹೆಸರುಳ್ಳ ಗ್ರಾಮಗಳಿದ್ದಿವೆ ಎಂದು ತಿಳಿಯಬಂದಿದೆ. ಊರಿನ ವಿವರಣೆಯೂ ತಿಳಿದಿದೆ. ಪ್ರತ್ಯಕ್ಷವಾಗಿ ನೋಡಿ ವಿಚಾರಿಸಲು ಅನುಕೂಲವಾಗದುದರಿಂದ ಇಲ್ಲಿ ವಿವರಿಸಿಲ್ಲ.

7. 'ಮಂಡಯ' ವೆಂಬ ಹೆಸರಿನ ಪ್ರಾಚೀನತೆಯ ವಿಚಾರದಲ್ಲಿ ಈ ಕೆಳಗೆ ವಿವರಿಸಿರುವ ಅಂಶವು ಎಲ್ಲರಿಂದಲೂ ನಂಬಲ್ಪಡುತ್ತದೋ ಇಲ್ಲವೋ ಹೇಳಲಾಗುವುದಿಲ್ಲ. ಬಹಳ ಆಶ್ಚರ್ಯವಾಗಿಯೂ ನಮ್ಮ ಸಮುದಾಯದ ಚರಿತ್ರೆಗೆ ಬಹುಮಟ್ಟಿಗೆ ಅನ್ವಯಿಸತಕ್ಕುದಾಗಿಯೂ ಇರುವುದರಿಂದ ಬರೆದಿದೆ.

ಮೈಸೂರು ರಾಜಧಾನಿಯಲ್ಲಿ ಕ್ರಿ. ಶ. ೧೯೪೯ನೇ ಇಸವಿಯ ಫೆಬ್ರವರಿ ತಿಂಗಳವರೆಗೂ ಶ್ರೀಯುತ ಎಸ್. ವೆಂಕಟದಾಸ್ ಎಂಬ ಮಹನೀಯರೊಬ್ಬರು ಪರಮೇಶ್ವರ ನಾಡಿ ಜೋತಿಷ ಓಲೆ ಗ್ರಂಥಗಳಿಂದ ಜಾತಕ ಫಲಗಳನ್ನು ಬರೆದು ಕೊಡುತ್ತಿದ್ದರು. ಇವರಲ್ಲಿ ಅನೇಕ ಓಲೆ ಗ್ರಂಥಗಳಿದ್ದುವು. ಈ ಗ್ರಂಥವು ಶ್ರೀ ಪಾರ್ವತೀ ಪರಮೇಶ್ವರ ಸಂವಾದ ರೂಪವಾಗಿದೆ. ಅನೇಕಾನೇಕ ವ್ಯಾಕರಣ ದೋಷ, ಭಾಷಾ ದೋಷಗಳಿಂದ ಕೂಡಿದ ಸಂಸ್ಕೃತ ಗದ್ಯರೂಪದಲ್ಲಿದೆ. ಈ ಗ್ರಂಥದ ಒಂದು ಆಶ್ಚರ್ಯವಾದ ವಿಶೇಷವೇನೆಂದರೆ, ಜಾತಕನ ವಂಶದವರನೇಕರ ಹೆಸರುಗಳು, ಅವರ ಸ್ಥಳದ ಹೆಸರು, ಅವರ ಗುಣ ಮತ್ತು ಕಾರ್ಯಗಳು ತಪ್ಪಿಲ್ಲದೆ ನಿರೂಪಿತವಾಗಿವೆ. ಇವ್ಲು ಸರಿಯಾಗಿದ್ದ ಮೇಲೆ ಅಲ್ಲಿಂದ ಹಿಂದಕ್ಕೂ ಹೇಳಿರುವ ಹೆಸರು ಇತ್ಯಾದಿಗಳೂ ಸಹ ಸರಿ

---

* ಈ ಶಾಸನದಲ್ಲಿ ಪ್ರಸ್ತಾಪವಿರುವ ಶ್ರೀಮದನಾದಿ ಅಗ್ರಹಾರವೆಂದು ಹೇಳಿದೆ.

ಯಾಗಿರಬಹುದೆಂದು ನಂಬಿಕೆ ಹುಟ್ಟುವುದಕ್ಕೆ ಅವಕಾಶವಿದೆ. ನಮ್ಮ ಮಂಡಯದವರು ಕೆಲವರು ಜಾತಕಗಳನ್ನು ಬರೆಯಿಸಿದ್ದಾರೆ. ಅವರವರ ವಂಶಗಳ ವಿವರಣೆಯು ಬಹಳ ಆಶ್ಚರ್ಯವಾಗಿರುವುದಲ್ಲದೆ, ನಮ್ಮ ಹಿಂದಣ ಮಹಾಮಹಿಮರ ಚರಿತ್ರೆಯೂ ಗೊತ್ತಾಗುತ್ತದೆ. ಕೆಲವು ಜಾತಕಗಳಿಂದ ನಮ್ಮ ಹಿರಿಯರ ಚರಿತ್ರೆಗೆ ಸಂಬಂಧಪಟ್ಟ ಅಂಶಗಳಷ್ಟು ಮಾತ್ರ ಇಲ್ಲಿ ಇದ್ದುದು ಇದ್ದಂತೆ ಸಂಗ್ರಹಿಸಿದೆ. ಈ ಸಂಗ್ರಹವನ್ನು ಅನುಬಂಧದಲ್ಲಿ ಕೊಟ್ಟಿದೆ.

ಈ ನಾಡಿ ಗ್ರಂಥದಿಂದ ಸಂಗ್ರಹಿಸಿರುವ ವಿಷಯಗಳಿಂದ ಈ ಕೆಳಗೆ ಸೂಚಿಸಿರುವ ಅಂಶಗಳು ಮುಖ್ಯವಾಗಿ ಗೋಚರವಾಗುತ್ತವೆ :

1. ತಿರುಪತಿಯಿಂದ ಹಿಂತಿರುಗಿ ಬಂದ ಶ್ರೀ ವೈಷ್ಣವರು ಮಾಂಡವ್ಯ ಋಷಿಗಳಿಂದ ನಿರ್ಮಿತವಾದ ಸ್ಥಳಗಳಲ್ಲಿ ನೆಲೆಸಿದರು.

2. ಶ್ರೀ ರಾಮಾನುಜರು ತಮ್ಮ ಶಕ್ತಿಪೂರಿತವಾದ ವಿಗ್ರಹವನ್ನು ಯಾದವಗಿರಿಯಲ್ಲಿ ಪ್ರತಿಷ್ಠಿಸಿದರು.

3. ಶ್ರೀರಂಗಪಟ್ಟಣದಲ್ಲಿ ಪೂಜೆಯನ್ನು ನಡೆಸುತ್ತಿದ್ದ ಮಹನೀಯರ ವಂಶದಲ್ಲಿ ಒಬ್ಬರು ತಿರುಪತಿಗೆ ದಯಮಾಡಿಸಿದರು. ಹಿಂತಿರುಗಿ ಮಾಂಡವ್ಯ ಋಷಿಗಳಿಂದ ಆರಾಧಿಸಲ್ಪಡುತ್ತಿದ್ದ ಪವಿತ್ರವಾದ ಸ್ಥಳಕ್ಕೆ ಬಂದದ್ದು ಇತ್ಯಾದಿ ವಿಷಯ ; **ಮಂಡಯ**ದ ಪಾರಿಶುದ್ಧತೆ :

4. **ಬೇರೆ ಮಂಡಯ**ಕ್ಕೆ ಹೋಗಿ ನೆಲೆಸಿದ್ದು

5. ಪುನಃ ಶತಮಾನಗಳ ಅನಂತರ **ಮೇಲಿನ** ವಂಶದವರಲ್ಲಿ **ಮತ್ತೊಬ್ಬರು** ಮಂಡಯಕ್ಕೆ ಬಂದದ್ದು.

6. ಯಾದವಗಿರಿಯ ಶ್ರೀ ರಾಮಾನುಜ ಶಿಲಾಮೂರ್ತಿಯ ವೈಭವ.

7. ಶ್ರೀ॥ ಉ॥ ಅಪ್ಪಯಾಚಾರ್ಯಸ್ವಾಮಿಗಳವರು ತಿರುವಲ್ಲಿಕ್ಕೇಣಿಗೆ ಬಿಜಯಮಾಡಿಸಿ ಶ್ರೀ ಪಾರ್ಥಸಾರಥಿ ಸ್ವಾಮಿಗಳವರ ಅಭಿಷೇಕದಲ್ಲಿ ಅನ್ವಯಿಸಿ ಕಲ್ಯಾಣಿಯ ಉಪ್ಪು ನೀರನ್ನು ಸಿಹಿ ನೀರನ್ನಾಗಿ ಮಾರ್ಪಡಿಸಿದ್ದು.

8. ಕೆಲಕಾಲಾನಂತರ ಮತ್ತೊಬ್ಬ ಶ್ರೀ॥ ಉ॥ ಅಪ್ಪಯಾಚಾರ್ಯರೆಂಬ ಮಹಾಮಹಿಮರು ಮೂಲಮಂಡಯಕ್ಕೆ ಬಿಜಯಂಗೈದು ಭಗವದ್ದರ್ಶನ ಮಾಡುತ್ತಿರುವ ಸಮಯದಲ್ಲೇ ಪರಮಪದವನ್ನೈದಿದ್ದು; ಇದು ನಡೆದಿದ್ದು ಸುಮಾರು ಕಲಿಯುಗದ ೪೫೦೦–೫೦೦೦ ವರುಷಗಳ ಅಂತರದಲ್ಲಿ;

9. ಇದರಿಂದ ಬಹಳ ಕಾಲ ಕಳೆದ ಅನಂತರ ವಿಜಯನಗರಾಧಿಪತಿಗಳಿಂದ ಮೈಸೂರು ಪ್ರಾಂತದಲ್ಲಿ ಶ್ರೀ॥ ಉ॥ ಗೋವಿಂದರಾಜರು 'ಮಂಡಯ' ವೆಂಬ ಕೃತಕ ನಾಮಕ ಗ್ರಾಮವನ್ನು ಪಡೆದು, ಅಲ್ಲಿ ನಮ್ಮವರನ್ನು ಸ್ಥಾಪಿಸಿದ್ದು; ಇತ್ಯಾದಿ ವಿಷಯಗಳು ನಿರೂಪಿತವಾಗಿವೆ.

ಪ್ರಕರಣ ೨

ಶ್ರೀ॥ ಉ॥ ಅನಂತಾರ್ಯರ ಮತ್ತು ಶ್ರೀ॥ ಉ॥ ತಿರುಮಲೈ ಗೋವಿಂದರಾಜ ಉಡೈಯವರ ವೈಭವ

ಶ್ರೀ ರಾಮಾನುಜರು ಅವತರಿಸಿದ ಮೂವತ್ತಾರನೆಯ ವರುಷದಲ್ಲಿ ಎಂದರೆ ಕ್ರಿ. ಶ. ೧೦೫೬ ನೇ ಇಸವಿಯಲ್ಲಿ ಶ್ರೀರಂಗಪಟ್ಟಣದ ಸಮೀಪ ಗ್ರಾಮವಾದ, ಈಗ ಹಳೆಯ ಕಿರಂಗೂರು ಎಂದು ಕರೆಯಲ್ಪಡುತ್ತಿರುವ ('ಶಿರು ಪುತ್ತೂರ್' ಎಂದೂ 'ಲಘು ನೂತನಪುರಿ' ಎಂದೂ ಹಿಂದಣ ಹೆಸರು) ಗ್ರಾಮದಲ್ಲಿ ತಿರುವನನ್ತಾಳ್ವಾರ್ ಸ್ವಾಮಿಗಳು ಶ್ರೀ॥ ಉ॥ ಕೇಶವಾಚಾರ್ಯ ಸ್ವಾಮಿಗಳವರ ಪುತ್ರರಾಗಿ ಅವತರಿಸಿದರು ಈ ಮಹಾತ್ಮರು ಶ್ರೀರಂಗದಲ್ಲಿ ಬಿಜಯಮಾಡಿಸಿದ್ದ ಶ್ರೀ ರಾಮಾನುಜರ ಶಿಷ್ಯರಾಗಬೇಕೆಂಬ ಹಂಬಲಿಕೆಯಿಂದ ಅಲ್ಲಿಗೆ ದಯಮಾಡಿಸಿದರು. ಶ್ರೀ ರಾಮಾನುಜರು ತಿರುವಾಯ್ಮೊಳಿ ಕಾಲಕ್ಷೇಪವನ್ನು ಅಪ್ಪಣೆ ಕೊಡಿಸುತ್ತಿದ್ದಾಗ, ಅವರ ಶಿಷ್ಯವರ್ಗವನ್ನು ಕುರಿತು 'ನಿಮ್ಮಲ್ಲಿ ಯಾರು ತಿರುಮಲೆಗೆ ಹೋಗಿ ಅಲ್ಲಿ ನೆಲೆಸಿ, ಶ್ರೀನಿವಾಸನ ಕೈಂಕರ್ಯವನ್ನು ಮಾಡಬಲ್ಲಿರಿ' ಎಂದು ಕೇಳಲು, ಮಿಕ್ಕ ಜನರು ಅಲ್ಲಿಯ ಚಳಿಗೆ ಹೆದರಿ ಸುಮ್ಮನಿದ್ದಾಗ, ತಾವು ಹೊರಡುವುದಾಗಿ ಅನಂತಾರ್ಯರು ಒಪ್ಪಿಕೊಂಡರು. ಅದಕ್ಕೆ ರಾಮಾನುಜರು ಸಂತೋಷಪಟ್ಟು, ಅವರಿಗೆ 'ಅಣ್ಣ'

ಪಿಳ್ಳೈ' ಎಂಬ ಬಿರುದನ್ನು ಕೊಟ್ಟರೆಂದು ಪ್ರಸಿದ್ಧಿ. ಈ ಮಹನೀಯರು ತಿರುಪತಿಯಲ್ಲಿ ಶ್ರೀ ಶ್ರೀನಿವಾಸನ ಕೈಂಕರ್ಯಕ್ಕಾಗಿ ಸುಮಾರು ಮೂವತ್ತು ಮಂದಿ ವೈಷ್ಣವರೊಂದಿಗೆ ಹೋಗಿ, ಅಲ್ಲಿ ರಾಜನಿಂದ ಪಡೆದ 'ಇಳಯ ಮಂಡಯ' ದಲ್ಲಿ ವಾಸಮಾಡಿಕೊಂಡು, ಶ್ರೀ ಶ್ರೀನಿವಾಸನ ಕೈಂಕರ್ಯ ನಿರತರಾಗಿದ್ದರು. ಇವರು **'ತಿರುಮಲೈ ಅನಂದಾಣ್ ಪಿಳ್ಳೈ'** ಎಂಮೂ **'ಅನಂತಪುರುಷಾರ್ಯ'** ರೆಂದೂ ಪ್ರಖ್ಯಾತರಾದರು. ಇವರು ಭಾರದ್ವಾಜ ಗೋತ್ರದವರು ಈ ವಂಶೀಯರಿಗೆಲ್ಲಾ ಈಗಲೂ 'ತಿರುಮಲೈ ಅನಂದಾಣ್ ಪಿಳ್ಳೈ' ಗಳೆಂದು ಪ್ರಸಿದ್ಧಿ ಇದೆ. ಈ ಮಹನೀಯರೇ ಮುಂಡಯದ ಶ್ರೀ ವೈಷ್ಣವರ ಒಂದು ಹಿರಿಯ ಪಂಗಡದ ಮೂಲಪುರುಷರು. ಶ್ರೀ ರಾಮಾನುಜರ ಅನಂತರ ಈಗಲೂ **'ಶ್ರೀ ಶೈಲಾನಂತಾರ್ಯ ಮಹಾಗುರುವೇನಮಃ'** ಎಂದು ಈ ಮಹಾತ್ಮರಿಗೇ ಗೌರವವನ್ನು ಸಲ್ಲಿಸುತ್ತಾರೆ.

ಅದ್ಭುತ ಪ್ರಖ್ಯಾತಿಯನ್ನು ಪಡೆದಿರುವ ಶ್ರೀವೆಂಕಟಗಿರಿ (ತಿರುಪತಿ) ಯ ಶ್ರೀ ವೆಂಕಟನಾಥನ (ಶ್ರೀ ಶ್ರೀನಿವಾಸನ) ಮಹಾ ಮಹಿಮೆಯನ್ನು ಜಗತ್ತಿಗೆ ಸಾರಿ ಬೆಳಗಿಸಿದ ಮಹನೀಯರು ಶ್ರೀಮದನನ್ತಾರ್ಯರು. ಇವರು ಇಟ್ಟ ಕಟ್ಟಳೆಯಂತೆಯೇ ಇಂದಿಗೂ ತಿರುಪತಿ ಕ್ಷೇತ್ರದಲ್ಲಿ ಕೈಂಕರ್ಯಾದಿಗಳು ನಡೆದುಬರುತ್ತಿರುವುದು. ಶ್ರೀ ವೆಂಕಟೇಶ ಭಕ್ತಾಗ್ರಣಿ ಶ್ರೀ ಮದನನ್ತಾರ್ಯರ ಚರಿತ್ರೆಯನ್ನು ಕ್ರಿ. ಶ. ೧೯೪೨ನೇ ಇಸವಿಯಲ್ಲಿ ಯಶಶ್ಶೇಷರಾಗಿದ್ದ ಶ್ರೀಮಾನ್ ಅಣ್ಣಾ ಧೊರೈ ಶ್ರೀನಿವಾಸಸ್ವಾಮಿಗಳವರ ಪ್ರೋತ್ಸಾಹದಿಂದ ಶ್ರೀಮದಿತ್ಯಾದಿ ಎಸ್. ಜಿ. **ಗೋವಿಂದರಾಜಯ್ಯಂಗಾರ್ಯರವರು** ಕನ್ನಡದಲ್ಲಿ ರಚಿಸಿ ಲೋಕೋಪಕಾರ ಮಾಡಿದ್ದಾರೆ. ಈ ಮಹಾಮಹಿಮ ಅಂಶಪುರುಷ ಶ್ರೀ ಮದನನ್ತಾರ್ಯರ ಚರಿತ್ರೆಯ ವಿಷಯವನ್ನು ತಿರುವಲ್ಲಿಕ್ಕೇಣಿಯಲ್ಲಿರುವ ಶ್ರೀಮದಿತ್ಯಾದಿ **ಮಳೂರು ಸಂಪತ್ಕುಮಾರನ್** ಅವರು ಬಹಳ ವಿಸ್ತಾರವಾಗಿ ಸಕಾರಣವಾಗಿ ಕ್ರಿ. ಶ. ೧೯೫೫ನೇ ಇಸವಿಯಲ್ಲಿ **'ಕಲ್ಯಾಣ ಕಲ್ಪತರು'** ಗ್ರಂಥಮಾಲೆಯಲ್ಲಿ ವಿಮರ್ಶಿಸಿ ಯಶಸ್ಸನ್ನು ಗಳಿಸಿದರು.

ತಿರುಪತಿ ಕ್ಷೇತ್ರದ ಪವಿತ್ರತೆಯನ್ನು ಜಗತ್ತಿಗೆಲ್ಲಾ ಬೆಳಗಿಸಿರುವ ಅವತಾರಪುರುಷರ ಜನ್ಮಸ್ಥಳವನ್ನು ಕರ್ನಾಟಕ ರತ್ನಸಿಂಹಾಸನಾಧೀಶ್ವರರ

ರಾಜಧಾನಿಯ ಸಮೀಪದಲ್ಲಿರುವುದು ಬಹಳ ಹೆಮ್ಮೆಯ ವಿಷಯ. ಈ ಮಹಾತ್ಮರ ಜನ್ಮಸ್ಥಳವಾದ ತಿರುಕ್ಕುರಿನಲ್ಲಿ ಒಂದು ಮಂಟಪವನ್ನು ನಿರ್ಮಿಸಿ ಶ್ರೀ ರಂಗನಾಥನನ್ನು ಇಲ್ಲಿಗೆ ಆಗಾಗ್ಗೆ ಬಿಜಯಮಾಡಿಸುವಂತೆ ಏರ್ಪಡಿಸಲು ಶ್ರೀ॥ ಉ॥ ಆರ್. ತಿರುನಾರಾಯಣಯ್ಯೆಯಂಗಾರ್ ಸ್ವಾಮಿಗಳವರು ಬಹಳ ಪ್ರಯತ್ನ ಮಾಡಿದ ಈ ಮಹಾಕಾರ್ಯವು ನೆರವೇರಿ, ಶ್ರೀ ಅನಂತಾರ್ಯ ಮಹಾತ್ಮರ ಜ್ಞಾಪಕವು ಸ್ಥಿರವಾಗಿ ನಿಲ್ಲುವಂತೆ ನಮ್ಮ ಸಮುದಾಯದ ಮಹನೀಯರೂ, ಕರ್ನಾಟಕ ದೇಶದ ಎಲ್ಲಾ ಆಸ್ತಿಕ ಮಹಾಶಯರೂ ಸಹಕರಿಸಬೇಕಾಗಿದೆ.

ಶ್ರೀಮದನಂತಾರ್ಯರ ಪೂಜಾವಿಗ್ರಹಗಳು ಕೆಳಗಣ ತಿರುಪತಿಯ ಶ್ರೀ ಗೋವಿಂದರಾಜ ಸ್ವಾಮಿಯವರ ದೇವಸ್ಥಾನದಲ್ಲಿಯೂ, ನಮ್ಮ ಪೂರ್ವಾಶ್ರಮ ಸ್ಥಾನವಾದ ಮಂಡಯದ ಶ್ರೀ ಲಕ್ಷ್ಮೀ ಜನಾರ್ದನ ಸ್ವಾಮಿಯವರ ದೇವಸ್ಥಾನದಲ್ಲಿಯೂ, ಕಾಂಚೀನಗರದಲ್ಲಿಯೂ ಪ್ರತಿಷ್ಠಿತವಾಗಿ ನಿತ್ಯಾರಾಧನೆಯು ನಡೆಯುತ್ತಲಿದೆ. ಕೆಳತಿರುಪತಿಯಲ್ಲಿ ಶ್ರೀ ಗೋವಿಂದರಾಜರ ದೇವಸ್ಥಾನದ ಶ್ರೀ ಕೂರತ್ತಾಳ್ವಾನ್ ಸನ್ನಿಧಿಯ ಇದಿರಿಗೆ ಶ್ರೀ ಮಧುರಕವಿಯಾಳ್ವಾರ್‌ರವರ ಪಕ್ಕದಲ್ಲಿ ಶ್ರೀ ಮದನಂತಾರ್ಯರು ನಿಂತಿರುವರು. ನಮ್ಮ ಮಂಡಯದಲ್ಲಿ ಶ್ರೀ ಜನಾರ್ದನ ಸ್ವಾಮಿಯವರ ದೇವಸ್ಥಾನದಲ್ಲಿ ಶ್ರೀ ವೇದವಲ್ಲಿ ತಾಯಾರವರ ಸನ್ನಿಧಿಯ ಎಡಗಡೆಯ ಆಳ್ವಾರ್ ಸನ್ನಿಧಿಯಲ್ಲಿ ಶ್ರೀ ತಿರುಮಂಗೈ ಆಳ್ವಾರ್ ಮತ್ತು ಶ್ರೀ ಪಿಳ್ಳೈಲೋಕಾಚಾರ್ಯರುಗಳ ಮಧ್ಯೆ ಕುಳಿತು ಸೇವೆಯನ್ನು ಕರುಣಿಸುತ್ತಲಿದ್ದಾರೆ. ಕಾಂಚೀಪುರದಲ್ಲೂ ವರದರಾಜ ಸ್ವಾಮಿಯ ದೇವಸ್ಥಾನದ ಹತ್ತಿರ ಈಚೆಗೆ ಒಂದು ಸನ್ನಿಧಿಯನ್ನು ಕಟ್ಟಿಸಿ ಶ್ರೀನಿವಾಸನನ್ನೂ ಅನಂತಾರ್ಯರನ್ನೂ ಪ್ರತಿಷ್ಠೆ ಮಾಡಿದ್ದಾರೆ. ಇವರ ಭಾವಚಿತ್ರವು ಈ ಗ್ರಂಥದ ಆದಿಯಲ್ಲಿ ಕಂಗೊಳಿಸುತ್ತಲಿದೆ. ಮಂಡಯದ ದೇವಸ್ಥಾನದ ಸರ್ಕಾರದ ವೆಚ್ಚದಲ್ಲಿ ಶ್ರೀ ಅನಂತಾಳ್ವಾರ್ ಸ್ವಾಮಿಗಳವರ ತಿಥಿ ನಕ್ಷತ್ರದ ಪವಿತ್ರ ದಿನದಲ್ಲಿ ಕೈಂಕರ್ಯವು ಬಹಳ ಹಿಂದಿನಿಂದಲೂ ನಡೆದು ಬರುತ್ತಿದೆ.

ಇವರ ಸಂತತಿಯವರು ಐದು ಗ್ರಾಮಗಳಲ್ಲೂ ವಾಸಮಾಡುತ್ತಿದ್ದುದರಿಂದ

ಈ ಗ್ರಾಮಗಳ ಹೆಸರನ್ನು ಕ್ರ ಕುನ್ನೆಪಾಕಂ, ಕುಣಕರಪಾಕಂ, ಕುನ್ನತ್ತೂರು, ವೆಳ್ಳಚ್ಚೇರಿ, ಪುರಿಶೈ ಎಂದು ಐದು ಪಂಗಡವಾಗಿವೆರೆಂದು ತಿಳಿದುಬರುತ್ತದೆ.

ಇವರ ಕುಲದಲ್ಲಿ ಶ್ರೀ॥ ಉ॥ ಪೆರಿಯ ಗೋವಿಂದರಾಜ ಉಡ್ಡೈಯರ್ ಎಂಬ ಮಹನೀಯರು ಅವತರಿಸಿ ಸ್ವಲ್ಪಕಾಲ 'ಪುರಿಶೈ' ಎಂಬ ಸ್ಥಳದಲ್ಲಿ ವಾಸವಾಗಿದ್ದರು. ಇವರು ಶ್ರೀ ಮಣವಾಳ ಮಾಮುನಿಗಳವರ ಶಿಷ್ಯರಾಗಿದ್ದು, ಅವರಿಂದ 'ಉಭಯ ವೇದಾನ್ತಾಚಾರ್ಯ' ರೆಂಬ ಬಿರುದನ್ನು ಪಡೆದು, ಅನಂತರ ತಿರುಪತಿಯಲ್ಲಿಯೇ ಶ್ರೀ ಶ್ರೀನಿವಾಸನ ಕೈಂಕರ್ಯದಲ್ಲಿರುತ್ತ, ಉಭಯ ವೇದಾಂತ ಕಾಲಕ್ಷೇಪನಿರತರಾಗಿದ್ದರು.

ಶ್ರೀ ವೈಷ್ಣವ (ರಾಮಾನುಜೀಯ) ಆಚಾರ್ಯರುಗಳ ಪರಂಪರೆಯಲ್ಲಿ ನಮ್ಮಾಳ್ವಾರ್‌ರವರ ಪ್ರಥಮ ಪೀಠದಿಂದ ಶ್ರೀ ರಾಮಾನುಜರು ಏಳನೆಯವರು. ಮಣವಾಳ ಮಾಮುನಿಗಳು ಹದಿನಾಲ್ಕನೆಯವರು. ಮಣವಾಳ ಮಾಮುನಿಗಳ ಕಾಲ ಕ್ರಿ. ಶ. ೧೫೭೦–೧೬೪೩.

ಶ್ರೀ॥ ಉ॥ ಪೆರಿಯ ಗೋವಿಂದರಾಜ ಉಡ್ಡೈಯರವರ ಕುಮಾರರು ಶ್ರೀ॥ ಉ॥ ಅಪ್ಪಯಾಚಾರ್ಯರು. ಇವರಿಗೆ 'ಕುಮಾರೋಭಯ ವೇದಾಂತಾಚಾರ್ಯ' ರೆಂಬ ಪ್ರಶಸ್ತಿ ಇತ್ತು. ಈ ಮಹಾನುಭಾವರು 'ಅನನ್ತಾರ್ಯದಶಕ' ವೆಂಬ ಸ್ತೋತ್ರವನ್ನು ರಚಿಸಿರುವರು. ಈ ಅಪ್ಪಯಾಚಾರ್ಯರ ಕುಮಾರರೇ ಶ್ರೀ॥ ಉ॥ ಚಿಕ್ಕ ತಿರುಮಲೈ ಗೋವಿಂದರಾಜ ಉಡ್ಡೈಯರೆಂಬ ಮಹಾತ್ಮರು. ಇವರು ಸಕಲವಿದ್ಯಾ ಪ್ರವೀಣರಾಗಿ ತಿರುಮಲೆಯಲ್ಲಿರುವ ಕಾಲದಲ್ಲಿ, ಆನೆಗೊಂದಿ ಸಂಸ್ಥಾನಾಧಿಪತಿಯಾದ ಮಹಾರಾಜನ ಸದಸ್ಸಿನಲ್ಲಿ ರಾಮಾನುಜ, ಮಧ್ವ, ಶಂಕರ ಮತವಿಷಯವಾದ ಮತತ್ರಯ ತಾಂಬೂಲ ವೃತ್ತಾಂತವು ಪ್ರಸ್ತುತವಾಗುವ ಸಮಯದಲ್ಲಿ, ಆ ಸ್ಥಳದ ಪ್ರಬಲ ವಿದ್ವಾಂಸನಾದ ಆರಾಧ್ಯನೆನ್ನುವ ಒಬ್ಬ ವೀರಶೈವನು 'ಆದು ಮತತ್ರಯ ತಾಂಬೂಲವಿಲ್ಲ. ಬ್ರಹ್ಮ, ವಿಷ್ಣು, ಮಹೇಶ್ವರ ವಿಷಯವಾದ ತಾಂಬೂಲವಾದುದರಿಂದ ಬ್ರಹ್ಮ, ವಿಷ್ಣು ವಿಷಯಗಳೆರಡೂ ಸ್ಮಾರ್ತ ಮಾಧ್ವರಿಗೆ ಸೇರತಕ್ಕದ್ದು, ಮಹೇಶ್ವರ ವಿಷಯವು ತನಗೆ ಸೇರತಕ್ಕದ್ದು, ಶ್ರೀ ವೈಷ್ಣವರಿಗೆ ಕೊಡಕೂಡದು' ಎಂದು

ವಿದ್ಯಾ ಮದದಿಂದ ಘೋಷಿಸಿದನು. ಅದನ್ನು ಕಂಡು ಮಹಾರಾಜನು ಎಂಬೆರುಮಾನಿಗೆ ಸಂಬಂಧ ಪಡೆದಿದ್ದುದರಿಂದಲೂ, ಪ್ರಾಮಾಣಿಕನಾದುದರಿಂದಲೂ, ಬಹಳ ವ್ಯಾಕುಲಚಿತ್ತನಾಗಿ ಒಂದು ವರುಷಕಾಲ ಅವಧಿಯನ್ನು ಕಲ್ಪಿಸಿ, ಪ್ರತಿದಿನವೂ ಪ್ರಾತಃಕಾಲದಲ್ಲಿ ಹತ್ತು ಘಳಿಗೆ ಕಾಲ ವಿದ್ಯಾಸಭೆಯನ್ನು ಸೇರಿಸಬೇಕೆಂದು ನಿಶ್ಚಯಿಸಿ, ತನ್ನ ದೇಶದಲ್ಲೆಲ್ಲಾ ಈ ವೃತ್ತಾಂತವನ್ನು ಪ್ರಸಿದ್ಧಪಡಿಸಿದನು. ಆ ಆರಾಧ್ಯನು ಅಲ್ಲಿಯ ಶ್ರೀ ವೈಷ್ಣವ ವಿದ್ವಾಂಸರುಗಳನ್ನು ತಿರಸ್ಕರಿಸಿ, ತನಗೆ ಒಂದು ವಿದ್ಯಾ ಪೀಠವೆನ್ನುವ ಆಸನವನ್ನು ಕಲ್ಪಿಸಿಕೊಂಡು ಸಂತೋಷಚಿತ್ತನಾಗಿದ್ದನು. ಈ ವೃತ್ತಾಂತವನ್ನು ತಿರುಮಲೈ ಗೋವಿಂದರಾಜರು ಕೇಳಿ, ಆ ಕ್ಷಣವೇ ತಿರುಮಲೈಯಿಂದ ಹೊರಟು, ಆನೆಗೊಂದಿಯನ್ನು ಸೇರಿ, ಆರಾಧ್ಯನು ಕಲ್ಪಿಸಿದ್ದ ವಿದ್ಯಾಪೀಠದಲ್ಲಿ ತಾವೇ ಕುಳಿತು, ರಾಜಸಕ್ಕೃತರಾಗಿ, ರಾಜನನ್ನು ಅನುಗ್ರಹಿಸಿ, ಆ ವಿದ್ವಾಂಸನನ್ನು ಕರೆಸಿ, ೮ ದಿನಗಳ ಅವಧಿಯನ್ನು ಕಲ್ಪಿಸಿ, ತಮ್ಮ ವಿದ್ಯಾ ಮಹಾತ್ಮ್ಯದಿಂದ ಅವನನ್ನು ಸೋಲಿಸಿದರು. ಆದರಿಂದ ರಾಜನು ಪರಮಸಂತುಷ್ಟನಾಗಿ, ಇವರಿಗೆ ಕನಕಾಭಿಷೇಕವನ್ನು ಮಾಡಿ, ಪಟ್ಟದಾನೆಯ ಮೇಲೆ ಅವರನ್ನು ಕುಳ್ಳಿರಿಸಿ, ತಾನೂ ಪರಾಜಿತನಾದ ಆರಾಧ್ಯನೂ ಉಭಯ ಪಾರ್ಶ್ವಗಳಲ್ಲಿ ಚಾಮರವನ್ನು ಬೀಸುತ್ತಾ, ಊರಮೆರವಣಿಗೆ ಮಾಡಿಸಿದನು. (ಸಂಪ್ರದಾಯ ದೀಪಿಕೆಯಿಂದ ಸಂಗ್ರಹಿಸಲ್ಪಟ್ಟಿದೆ.) ವಿಜಯನಗರದ ಸಂಸ್ಥಾನಾಧಿಪತಿಯಾದ ಕೃಷ್ಣದೇವರಾಯನು ಈ ವೈಷ್ಣವಾಗ್ರೇಸರರಿಗೆ 'ಸಹಿರಣ್ಯಪಯೋಧಾರಾ' ಪೂರ್ವಕವಾಗಿ 'ಕೃಷ್ಣರಾಯಪುರ' ವೆಂಬ ಪ್ರತಿನಾಮ ಶೋಭಿತವಾದ, ಚಿಕ್ಕಮಂಡಯ, ಕಲ್ಲಹಳ್ಳಿ, ಹೊಸಹಳ್ಳಿ, ತಂಡಸೇಹಳ್ಳಿ, ಕೋಡಿಹಳ್ಳಿ, ಮಂಡಯವೆಂಬ ೬ ಗ್ರಾಮಗಳನ್ನು ಕ್ರಿ. ಶ. ೧೫೧೬ನೆಯ ಇಸವಿಯಲ್ಲಿ ದಾನ ಮಾಡಿದನು. ಇದು ಮಂಡಯದ ತಾಲ್ಲೂಕು ೧೫೫ನೆಯ ನಂಬರು ಶಾಸನವಾಗಿ 'ಎಪಿಗ್ರಾಫಿಕಾ ಕರ್ಣಾಟಕ' ದಲ್ಲಿ ಅಚ್ಚಾಗಿದೆ. ಇದು ಬಹು ದೀರ್ಘವಾದ ಶಾಸನ. ಈ ಲೇಖನದ ಬೇರೆ ಪ್ರಕರಣದಲ್ಲಿ ಇದನ್ನು ನಕಲು ಮಾಡಿದೆ.

ಈ ಗ್ರಾಮಗಳು ದೊರೆತ ಅನಂತರ ಶ್ರೀ॥ ಶಾ॥ ತಿರುಮಲೈ ಗೋವಿಂದ

ರಾಜ ಉಡೈಯರವರು ತಿರುಪತಿಯ ಬಳಿ 'ಇಳಯ ಮಂಡಯ' ದಿಂದ ತಮ್ಮ ಕೆಲವು ಬಂಧು, ಶಿಷ್ಯ ವರ್ಗದವರೊಡನೆ ಮಂಡಯಕ್ಕೆ ಬಿಜಯಮಾಡಿ ಉಭಯ ವೇದಾಂತ ಕಾಲಕ್ಷೇಪನಿರತರಾಗಿದ್ದರು.

ಇವರೊಡನೆ ಮಂಡಯದಲ್ಲಿ ನೆಲೆಸಿದವರು ಹದಿಮೂರು ಗೋತ್ರದ ಕುಟುಂಬದವರು; ಶ್ರೀವತ್ಸ ಗೋತ್ರ, ವಾಧೂಲ ಗೋತ್ರ, ಭಾರದ್ವಾಜ ಗೋತ್ರ, ಗರ್ಗ್ಯ ಭಾರದ್ವಾಜ ಗೋತ್ರ, ಗೌತಮ ಗೋತ್ರ, ಹಾರೀತ ಗೋತ್ರ, ಕೌಶಿಕ ಗೋತ್ರ, ಲೋಹಿತ ಗೋತ್ರ, ಆತ್ರೇಯ ಗೋತ್ರ, ಶಾಂಡಿಲ್ಯ ಗೋತ್ರ, ವಾಸಿಷ್ಠ ಗೋತ್ರ, ಕೌಂಡಿನ್ಯ ಗೋತ್ರ ಮತ್ತು ಶತಮರ್ಷಣ ಗೋತ್ರ. ಶತಮರ್ಷಣ ಗೋತ್ರದವರು ಮಾತ್ರ ಈಗ ಇಲ್ಲವೆಂದು ತಿಳಿಯ ಬರುತ್ತದೆ. ಮಂಡಯಂ ಸಮುದಾಯದಲ್ಲಿ ಈಗಲೂ ಮಿಕ್ಕ ಹನ್ನೆರಡು ಗೋತ್ರದವರು ಬೆಳೆದುಬರುತ್ತಲಿದ್ದಾರೆ.

ಶ್ರೀ॥ ಉ॥ ಗೋವಿಂದರಾಜ ಉಡೈಯರವರು ತಮ್ಮ ತಾತಂದಿರಾದ ಶ್ರೀ॥ ಉ॥ ಪೆರಿಯ ಗೋವಿಂದರಾಜ ಉಡೈಯರವರ ದಿನಚರಿಯನ್ನು 'ಉಭಯ ವೇದಾನ್ತಾಚಾರ್ಯರ ದಿನಚರ್ಯೆ' ಎಂಬ ಗ್ರಂಥವನ್ನಾಗಿ ಬರೆದಿದಾರಂತೆ.

ಈ ಶ್ರೀ॥ ಉ॥ ತಿರುಮಲೈ ಗೋವಿಂದರಾಜ ಉಡೈಯರವರ ವಂಶೀಯರಿಗೆ **'ಮಂಡಯಂ ಅನಂದಾಣ್ ಪಿಳ್ಳೈಗಳ್'** ಎಂಬ ನಾಮಧೇಯವು ಪ್ರಖ್ಯಾತವಾಗಿದೆ. ಈ ವಂಶದವರಲ್ಲಿ ಅನೇಕರು ಸ್ವಯಂ ಆಚಾರ್ಯಪುರುಷರಾಗಿದ್ದರು, ಅವರಲ್ಲಿ ಕೆಲವರು ಈಗ ಮಠಾಧಿಪತಿಗಳನ್ನು ಆಶ್ರಯಿಸಿರುತ್ತಾರೆ. ಮಠಾಧಿಪತಿಗಳನ್ನು ಆಶ್ರಯಿಸದೇ ಕೆಲವರು ಇರುತ್ತಾರೆ. ಮಂಡಯದ ಶ್ರೀ ಜನಾರ್ದನ ಸ್ವಾಮಿಯವರ ದೇವಸ್ಥಾನದಲ್ಲಿ ಇಂದಿಗೂ **'ತಿರುಮಲೈ ಅನಂದಾಣ್ ಪಿಳ್ಳೈ ಗೋವಿಂದರಾಜ ಉಡೈಯರ್'** ರವರಿಗೆ ಅರುಳಪ್ಪಾಡು ನಡೆಯುತ್ತಿದೆ.

ಹದಿಮೂರು ಗೋತ್ರಗಳ ಮಹನೀಯರೊಡನೆ ಮಂಡಯದಲ್ಲಿ ನೆಲೆಸಿದ ಶ್ರೀ॥ ಉ॥ ತಿರುಮಲೈ ಗೋವಿಂದರಾಜ ಉಡೈಯರವರು ಒಂದು ಸಂಕೇತ

ನಿಬಂಧವನ್ನು ಏರ್ಪಡಿಸಿ, ಆ ಹದಿಮೂರು ಗೋತ್ರದವರೂ ಆದನ್ನು ಪರಿಪಾಲನೆ ಮಾಡಿಕೊಂಡು ಬಂದರು. ಈಗಲೂ ಮಂಡಯದ ಶ್ರೀ ವೈಷ್ಣವರಲ್ಲಿ ಇದು ಆದಷ್ಟುಮಟ್ಟಿಗೆ ನಡೆದುಬರುತ್ತಿದೆ. "ನಾವು ಹದಿಮೂರು ಗೋತ್ರಗಳಿಗೆ ಸೇರಿದವರಾದುದರಿಂದ ಈ ನಮ್ಮ ಸಮುದಾಯದಲ್ಲಿಯೇ ಈ ಬೇರೆ ಬೇರೆ ಗೋತ್ರಗಳಿಗೆ ಪರಸ್ಪರ ವಿವಾಹ ಕ್ರಮವನ್ನು ಪೂರ್ವ ಪದ್ಧತಿಯಂತೆ ಶಾಸ್ತ್ರಾನುಸಾರವಾಗಿ ನಡೆಸಿಕ್ಕೊಂಡು ಈ ದೇಶದಲ್ಲಿಯೇ ಸಹ ಪಙ್ಕ್ತಿ ಭೋಜನಾದಿ ವ್ಯವಹಾರವನ್ನು ನಡೆಸುತ್ತಾ, ಸತ್ಸಂಪ್ರದಾಯ ಸದಾಚಾರ ಸಂಪನ್ನರಾಗಿ ವಾಸಮಾಡೋಣ. ಈ ಸಮಯಬಂಧಕ್ಕೆ ನಾವ್ಗಳೆಲ್ಲರೂ ಸಮ್ಮತಿಸಿ ಈ ಸಂಕೇತವನ್ನು ಪರಿಪಾಲಿಸೋಣ" ಎಂದು ನಿಬಂಧನೆ ಮಾಡಿದರು. ಇದು ಶ್ರೀ॥ ಉ॥ ಕಲ್ಕಿ ಸ್ವಾಮಿಗಳವರ ಕರಡಿನಿಂದ ಕೃತಜ್ಞತಾಪೂರ್ವಕವಾಗಿ ಆರಿಸಿ ಬರೆಯಿಲ್ಪಟ್ಟಿದೆ. ಈ ಪಂಗಡದಲ್ಲಿ ಯಾರಾದರೂ ಪರಮಪದಿಸಿದರೆ, ಎಲ್ಲರೂ ಸ್ನಾನಮಾಡಿ ಶುಚಿರ್ಭೂತರಾಗಬೇಕೆಂಬ ಕಟ್ಟಳೆಯೂ ಇತ್ತು.

ಹೀಗೆ ಮಂಡಯದಲ್ಲಿದ್ದುಕೊಂಡು ತಮಗೆ ಲಭಿಸಿದ ಗ್ರಾಮಗಳನ್ನು ಎಲ್ಲರಿಗೂ ಅನುಕೂಲವಾಗುವುದಕ್ಕಾಗಿ ಈ ಕೆಳಗೆ ಕಂಡಂತೆ ೫ಳ ಭಾಗಮಾಡಿಕೊಟ್ಟರು:

ಯಾರಿಗೆ	ಭಾಗ	ಗ್ರಾಮ
೧. ತಮಗೆ	೨೩	ಕಲ್ಲಪಳ್ಳಿ, ಮಂಡಯ, ಚಿಕ್ಕಮಂಡಯ
೨. ತಮ್ಮ ತಮ್ಮ ತಿಮ್ಮಯ್ಯಂಗಾರ್ಯರಿಗೆ	೧೪	ಕೋಣಪಳ್ಳಿ
೩. ತಮ್ಮ ಚಿಕ್ಕಮ್ಮನ ಕುಮಾರರಾದ ಹೊಟ್ಟೆಕುಮಾರ ತಿರುಮಲೈಯ್ಯಂಗಾರ್ಯರಿಗೆ	೧೦	ತಂಡಸೇಹಳ್ಳಿ (ದಂಡಪಳ್ಳಿ)

ಯಾರಿಗೆ	ಭಾಗ	ಗ್ರಾಮ
೪. ತಮ್ಮ ಮಿತ್ರರಾದ ಕುನ್ರೆಪಾಕಂ ಅಪ್ಪಯಾಚಾರ್ಯರಿಗೆ	೧	೭ ಪುದುಪಳ್ಳಿ (ಹೊಸಹಳ್ಳಿ)
೫. ತಮ್ಮ ಅಳಿಯಂದಿರು – ಪೆರುಂಬೂದೂರಯ್ಯನ್–ಕೋನಪ್ಪನ್ ಇಬ್ಬರಿಗೂ	೨	
೬. ಈ ಪ್ರಾಂತ್ಯದಲ್ಲಿ ತಮ್ಮ ಮುಖ್ಯ ಶಿಷ್ಯರಾದ ಢಣಾಕರ ತಿಮ್ಮಯ್ಯಂಗಾರ್ಯರಿಗೆ	೨	
೭. ಶ್ಯಾನುಭೋಗರಿಗೆ	೨	
ಒಟ್ಟು....	೫೪	

ಮೇಲೆ ವಿವರಿಸಿದಂತೆ ಶ್ರೀ॥ ಉ॥ ತಿರುಮಲೈ ಗೋವಿಂದರಾಜ ಉಡ್ಡೈಯರವರ ನಿಬಂಧನೆಗಳನ್ನು ಪರಿಪಾಲಿಸಿಕೊಂಡು ಬಂದವರೇ ಮಂಡಯದ ಶ್ರೀ ವೈಷ್ಣವರೆಂದಾದರು.

ಶ್ರೀ॥ ಉ॥ ತಿರೆಮುಲೈ ಗೋವಿಂದರಾಜ ಉಡ್ಡೈಯರವರ ಶಿಷ್ಯರಲ್ಲಿ ಮುಡುಂಬೈ, ಕಡಾಂಬಿ, ಸೇಟ್ಟೂರ್, ಕುಮಾಂಡೂರ್, ಆಸೂರಿ, ಗೋಮಠಂ, ನಲ್ಲಾನ್, ಕಂದಾಡೈ, ಮಾಡಪೂಶಿ, ಸೋಮಾಶಿಯಾಂಡಾನ್ ಮತ್ತು ವಿಂಜಿಮೂರು ಎಂಬ ಮಂಡಯ ಪಂಗಡಕ್ಕೆ ಸೇರದ ಪಂಗಡದವರು ಇರುವರೆಂದು ಲೂಯಿರೈಸ್‌ರವರು ಮಂಡಯದ ೧೫೫ನೇ ನಂಬರು ಶಾಸನದ ಮೇಲೆ ಬರೆದಿರುವ ಟೀಕೆಯಿಂದ ತಿಳಿದುಬರುತ್ತದೆ.

ಮಂಡಯಂ ಅನಂದಾಣ್ ಪಿಳ್ಳೈಗಳ ಹಿಂದಣವರಾದ ಶ್ರೀ॥ ಉ॥ ಅನಂದಾಳ್ವಾರ್ ಸ್ವಾಮಿಗಳು, ಶ್ರೀ॥ ಉ॥ ಪೆರಿಯ ಗೋವಿಂದರಾಜ ಉಡ್ಡೈಯರ್, ಇವರ ಮಕ್ಕಳು ಶ್ರೀ॥ ಉ॥ ಅಪ್ಪಯಾಚಾರ್ಯರು, ಅವರ

ಮಕ್ಕಳು ಶ್ರೀ॥ ಉ॥ ತಿರುಮಲೈ ಗೋವಿಂದರಾಜ ಉಡೈಯರ್, ಈ ಮಹಾತ್ಮರ ತನಿಯನ್‌ಗಳು ಈ ಕೆಳಗೆ ಬರೆಯಲ್ಪಟ್ಟಿವೆ.

ಶ್ರೀ॥ ಉ॥ ಅನಂತಾರ್ಯ ಸ್ವಾಮಿಗಳ್ ತನಿಯನ್ :—

ಅಖಿಲಾತ್ಮಗುಣಾವಾಸಮಜ್ಞಾನತಿಮಿರಾಪಹಂ ।
ಆಶ್ರಿತಾನಾಂ ಸುಶರಣಂ ವಂದೇ ಽನಂತಾರ್ಯ ದೇಶಿಕಮ್ ॥
ಶ್ರೀಮದ್ರಾಮಾನುಜಾಚಾರ್ಯ ಶ್ರೀಪದಾಂಭೋರುಹದ್ವಯಂ ।
ಸದುತ್ತಮಾಂಗಸಂಧಾರ್ಯ ಮನಂತಾರ್ಯಮಹಂ ಭಜೇ ॥

ಶ್ರೀ॥ ಉ॥ ಪೆರಿಯ ಗೋವಿಂದರಾಜ ಉಡೈಯರ್‌ರವರ ತನಿಯನ್:

ಸಕಲನಿಗಮಸಾರಂ ಯದ್ವಪುರ್ಭೋಭಾಸನೀಯಂ ।
ಫಣಿಶಶಿವರದಾಚಾರ್ಯಾತ್ಮಜಂ ತತ್ಪದಾಬ್ಜಮ್ ।
ವರವರಮುನಿವೀಕ್ಷಾ ಪೂರ್ಣಪಾತ್ರಂ ಗುಣಾಬ್ಧಿಂ ।
ಶ್ರುತಿಯುಗಶಿಖಿರಾರ್ಯಂ ಸಂಶ್ರಯೇ ಸತ್ಸುಲಾರ್ಯಂ ॥
ಶ್ರೀಮದ್ವೀರಮಹಾಯೋಗಿ ಶ್ರೀಪಾದಾಂಭೋರುಹದ್ವಯಂ ।
ಅನಂತಾರ್ಯಾಪರಂ ವಂದೇ ಯುಗ್ಮವೇದಾಂತದೇಶಿಕಮ್ ॥

ಶ್ರೀ॥ ಉ॥ ಅಪ್ಪಯಾಚಾರ್ ತನಿಯನ್ :—

ಶ್ರೀಮದ್ವಿತಯ ವೇದಾಂತ ದೇಶಿಕೇಂದ್ರಸುತಂ ಗುರುಂ ।
ದೇವರಾಜಮನಂತಾರ್ಯವಂಶಮೌಕ್ತಿಕಮಾಶ್ರಯೇ ॥

ಶ್ರೀ॥ ಉ॥ ತಿರುಮಲೈ ಗೋವಿಂದರಾಜ ಉಡೈಯರ್‌ರವರ ತನಿಯನ್ :—

ಶ್ರೀಮತ್ಕುಮಾರಯುಗ ವೇದಶಿಖಾರ್ಯಪುತ್ರಂ ।
ತದ್ವೈಭವಂ ಶ್ರುತಿಯುಗಾರ್ಥಸುಧಾಂಬುವಾಹಂ ।
ಶ್ರೀಮದ್ಯತೀಂದ್ರಮತಿಶಾರ್ಯ ಪರಾವತಾರಂ ।
ಗೋವಿಂದರಾಜ ಗುರುವರ್ಯಮಹಂ ಪ್ರಪದ್ಯೇ ॥

ಈ ತನಿಯನ್ನಿನ ಕಡೆಯ ಪಾದದ ಪಾಠಾಂತರವು ಈ ರೀತಿ ಇದೆ: "ಗೋವಿಂದರಾಜ ಯತಿರಾಡ್ಗುರುಮಾಶ್ರಿತೋಸ್ಮಿ" ಇದು ಇವರು ಕಡೆಯಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದರೆಂಬುದನ್ನು ವ್ಯಕ್ತಪಡಿಸುತ್ತದೆ.

ಮೊನ್ನೆ ಮೊನ್ನೆವರೆಗೂ ತಿರುಪತಿಯ ದೇವಸ್ಥಾನದಲ್ಲಿ ಶ್ರೀ॥ ಉ॥ ಅನಂವಾಳ್ವಾರ್ ಸ್ವಾಮಿಗಳವರ ವಂಶಸ್ಥರಾದ ಮಂಡಯದ ಸ್ವಾಮಿಗಳೊಬ್ಬರಿಗೆ ಮಾತ್ರ ಮಾಲೆಯನ್ನು ಹಾಕುವ ಸಂಪ್ರದಾಯವಿತ್ತು. ಈ ಮರ್ಯಾದೆಯು ಮತ್ತೆ ಯಾರಿಗೂ ಇರಲಿಲ್ಲ.

ಶ್ರೀ॥ ತಿರುಮಲೈ ಗೋವಿಂದರಾಜ ಉಡೈಯರ್‌ರವರು ತಮಗೆ ಲಭಿಸಿದ ಆಸ್ತಿಯನ್ನು ಭಾಗ ಮಾಡಿರುವುದು ಅವರ ಮಹಿಮೆಯನ್ನು ತೋರಿಸುತ್ತದೆ. ತಮ್ಮ ಬಂಧುಗಳು, ಮಿತ್ರರು, ಶಿಷ್ಯರು ಇವರಿಗೆ ಹಂಚಿದುದಲ್ಲದೆ ಶ್ವಾನುಭೋಗನಿಗೂ ಭಾಗವನ್ನು ಕೊಟ್ಟರೆಂದರೆ, ಆಗಿನ ಕಾಲದ ಲೌಕಿಕ ಮರ್ಯಾದೆಯು ಹೇಗಿದ್ದಿರಬಹುದೆಂಬುದು ಗೋಚರವಾಗುತ್ತದೆ.

ಇವರು ಮಹಾಪುರುಷರು. ಮಂಡಯದ ಶ್ರೀ ವೈಷ್ಣವ ಮಹಾಜನರಿಂದ ಎಂದೆಂದಿಗೂ ಆರಾಧಿಸಲ್ಪಡತಕ್ಕ ಮಹಾನುಭಾವರು.

ಈ ಮಹಾಮಹಿಮರ ವಂಶಸ್ಥರಾದ ಅನೇಕರು ಈಗ ನಮ್ಮ ಸಮುದಾಯದ ಕೆಲವು ಪ್ರಖ್ಯಾತ ಮನೆತನಗಳವರಾಗಿ ಬಳೆದುಬರುತ್ತಲಿದ್ದಾರೆ.

ಪ್ರಕರಣ ೩

ರಾಮಾನುಜಪುರದ ಪ್ರತಿಷ್ಠಾಪಕರು ಶ್ರೀ॥ ಉ॥ ಅಪ್ಪಯಾಚಾರ್ಯರ ವೈಭವ

ಶ್ರೀ॥ ಉ॥ ತಿರುಮಲೈ ಗೋವಿಂದರಾಜ ಉಡೈಯರವರು ತಮಗೆ ಲಭಿಸಿದ ಗ್ರಾಮಗಳನ್ನು ತಮ್ಮ ಬಂಧುಗಳಿಗೆ, ಮಿತ್ರರಿಗೆ, ಶಿಷ್ಯರಿಗೆ ಭಾಗ ಮಾಡಿ ಕೊಟ್ಟರೆಂದು ಹಿಂದೆ ಹೇಳಿದೆ. ಹೊಸಹಳ್ಳಿಯ ಪ್ರಾಂತ್ಯದಲ್ಲಿ ಒಂದು ಭಾಗವನ್ನು ತಮ್ಮ ಮಿತ್ರರಾದ ಕುನ್ರವಾಕ್ಕಂ ಅಪ್ಪಯಾಚಾರ್ಯರಿಗೆ (ವೆಂಕಟಾಚಾರ್ಯರು) ಕೊಟ್ಟದ್ದು ಸರಿಯಷ್ಟೆ. ಈ ಭಾಗವನ್ನು ಅನುಭವಿಸಿ

ಕೊಂಡು **ಶ್ರೀ॥ ಉ॥ ಅಪ್ಪಯಾಜಾರ್ಯ ಸ್ವಾಮಿಗಳು** ಸ್ವಲ್ಪಕಾಲ ಮಂಡಯದಲ್ಲಿಯೇ ವಾಸವಾಗಿದ್ದರು. ಆಳ್ವಾರ್ ತಿರುನಗರಿ ಪ್ರಾಂತದಲ್ಲೂ ಕೆಲಕಾಲ ವಾಸಿಸಿದರು. ಇವರೂ ಭಾರದ್ವಾಜ ಗೋತ್ರದವರು. ಶ್ರೀ॥ ಉ॥ ಅನನ್ತಾಳ್ವಾರ್ ಸ್ವಾಮಿಗಳವರ ವಂಶೀಯರು.

ಮಂಡಯದಿಂದ ಶ್ರೀರಂಗಕ್ಕೆ ದಯಮಾಡಿಸಿ ಶ್ರೀ॥ ಉ॥ ಕೋವಿಲ್ ಕನ್ನಾಡ್ಡೈಯಣ್ಣನವರ ವಂಶಸ್ಥರಲ್ಲಿ ಸಮಾಶ್ರಯಣವನ್ನು ಹೊಂದಿದರು. ಶ್ರೀ॥ ಉ॥ ಕೋವಿಲ್ ಕನ್ನಾಡ್ಡೈಯಣ್ಣನವರು ಶ್ರೀ ಮಣವಾಳಮಾಮುನಿಗಳ ಶಿಷ್ಯರೆಂಬುದು ಸರ್ವವಿದಿತವಾಗಿದೆ. ಅನಂತರ ಕಾಂಚೀಪುರದಲ್ಲಿ ಕೆಲಕಾಲ ವಾಸಮಾಡಿ ಪುನಃ ಮಂಡಯಕ್ಕೆ ದಯಮಾಡಿಸಿದರು.

ಕಾಂಚೀಪುರದಲ್ಲಿ ಹುಟ್ಟಿದ ಇವರ ಮೊದಲನೆಯ ಕುಮಾರರಿಗೆ **'ವರದಾಚಾರ್ಯ'** ರೆಂದು ಹೆಸರಿಟ್ಟರು. ಮಂಡಯಕ್ಕೆ ಹಿಂತಿರುಗಿದ ಅನಂತರ ಮತ್ತೊಬ್ಬ ಕುಮಾರರು ಜನಿಸಿದರು. ಇವರಿಗೆ **'ಗೋವಿಂದರಾಜ'** ರೆಂದು ಹೆಸರಿಟ್ಟರು. ಶ್ರೀ॥ ಉ॥ ತಿರುಮಲೈ ಗೋವಿಂದರಾಜ ಉಡ್ಡೈಯವರಿಂದ ತಮಗೆ ಆದ ಸಹಾಯವನ್ನು ಸ್ಮರಿಸಿ ಕೃತಜ್ಞತೆಯಿಂದ ತಮ್ಮ ಎರಡನೆಯ ಕುಮಾರರಿಗೆ ಗೋವಿಂದರಾಜರೆಂದು ನಾಮಕರಣಮಾಡಿರಬೇಕು.

ಮೊದಲನೆಯ ಕುಮಾರರಾದ ವರದಾಚಾರ್ಯರ ಜ್ಯೇಷ್ಠಪುತ್ರರೇ **ಶ್ರೀ॥ ಉ॥ ಅಪ್ಪಯಾಚಾರ್ಯ ಸ್ವಾಮಿಗಳು** (ಶ್ರೀನಿವಾಸಾಚಾರ್ಯರು) ಎಂಬ ಮಹಾತ್ಮರು. ಇವರು ತಮ್ಮ ಚಿಕ್ಕಪ್ಪಂದಿರಾದ ಶ್ರೀ॥ ಉ॥ ಗೋವಿಂದಾಚಾರ್ಯರಲ್ಲಿ ಚಕ್ರಾಂಕನಾದಿಗಳನ್ನು ಮಾಡಿಸಿಕೊಂಡರು. **ಶ್ರೀ॥ ಉ॥ ವೇದಾನ್ತ ರಾಮಾನುಜಸ್ವಾಮಿ**ಗಳವರು ಇವರ ವಿದ್ಯಾಗುರುಗಳು. ಶ್ರೀ॥ ಉ॥ ಅಪ್ಪಯ್ಯಾಚಾರ್ಯ ಮಹಾತ್ಮರು ವಿಜಯನಗರಾಧಿಪತಿ ಸದಾಶಿವರಾಯನಿಂದ ಕ್ರಿ. ಶ. ೧೫೫೫ನೆಯ ಇಸವಿಯಲ್ಲಿ ಚನ್ನಪಟ್ಟಣ ತಾಲ್ಲೂಕ್ಕು ಮಳೂರು ಹೋಬಳಿ **'ಮಾಜೇನಹಳ್ಳಿ'** ಎಂಬ ಗ್ರಾಮವನ್ನು ದಾನವಾಗಿ ಪಡೆದರು. ಇದು ಚನ್ನಪಟ್ಟಣದ ೧೨ ನೇ ನಂಬರು ಶಾಸನದಲ್ಲಿ ವ್ಯಕ್ತವಾಗಿದೆ. ಈ ಶಾಸನದ ನಕಲನ್ನು ಈ ಲೇಖನದ ಬೇರೊಂದು ಪ್ರಕರಣದಲ್ಲಿ ಬರೆದಿದೆ.

ಈ ಮಾಜೀನಹಳ್ಳಿಗೆ 'ರಾಮಾನುಜಪುರ' ಎಂದು ನಾಮಧೇಯವನ್ನು ಕೊಟ್ಟು ಶ್ರೀ॥ ಉ॥ ಅಪ್ಪಯಾಚಾರ್ಯ ಸ್ವಾಮಿಗಳವರು ಅಲ್ಲಿಯೇ ತಮ್ಮ ಒಂಭಗಳೊಡನೆ ವಾಸಮಾಡಿಕೊಂಡು ಉಭಯವೇದಾನ್ತ ಕಾಲಕ್ಷೇಪ ನಿರತ ರಾಗಿದ್ದರು. ಈ ಮಹನೀಯರ ವಂಶದವರೆಲ್ಲಾ **'ರಾಮಾನುಜಪುರಂ ಅನಂದಾಣ್ ಪಿಳ್ಳೈಗಳ್'** ಎಂದು ಕರೆಯಲ್ಪಡುತ್ತಾರೆ. ಶ್ರೀ॥ ಉ॥ ಅಪ್ಪಯಾಚಾರ್ಯರು 'ಅಷ್ಟಶ್ಲೋಕಿಯ' ಮೇಲೆ 'ಆರಾಯಿರಪ್ಪಡಿ' ವ್ಯಾಖ್ಯಾನವನ್ನು ರಚಿಸಿರುವರು.

ಮಂಡಯಂ ಅನಂದಾಣ್ ಪಿಳ್ಳೈಗಳಿಗೂ ರಾಮಾನುಜಪುರಂ ಅನಂದಾಣ್ ಪಿಳ್ಳೈಗಳಿಗೂ ಹಿಂದಿನಿಂದಲೂ ಸಂಬಂಧವಿದ್ದಿತೆಂದೇ ಹೇಳಬೇಕಾಗಿದೆ.

ಈ ರಾಮಾನುಜಪುರದ ಸ್ವಾಮಿಗಳವರ ತನಿಯನ್‌ಗಳನ್ನು ಇಲ್ಲಿ ಬರೆದಿವೆ:

1. ಶ್ರೀ॥ ಉ॥ ಕುನ್ರಪಾಕ್ಕಂ ಅಪ್ಪಯಾಚಾರ್ಯಸ್ವಾಮಿಗಳ (ವೆಂಕಟಾಚಾರ್ಯರ್) ತನಿಯನ್—

ವಾಧೂಲವರದಾಚಾರ್ಯ ಕೃಪಾಪಾತ್ರ ಮಕಲ್ಮಷಂ ।
ಶೇಷಾರ್ಯ ಕುಲಜೀವಾತುಂ ವೆಂಕಟಾಚಾರ್ಯಮಾಶ್ರಯೇ ॥

2. ಇವರ ಮಕ್ಕಳು ಶ್ರೀ॥ಉ॥ ವರದಾಚಾರ್ಯಸ್ವಾಮಿಗಳ ತನಿಯನ್–

ವೇಂಕಟಾಚಾರ್ಯ ತನಯಂ ತತ್ಪಾದಾಂಭೋಜಷಟ್ಪದಮ್ ।
ಅನಂತಾರ್ಯ ಕುಲಾಬ್ಧೀಂದುಂ ವರದಾರ್ಯ ಮಹಂ ಭಜೇ ॥

3. ಇನೇ ಯವರ ತಮ್ಮಂದಿರು ಶ್ರೀ। ಉ॥ ಗೋವಿಂದರಾಜ ಸ್ವಾಮಿಗಳ ತನಿಯನ್—

ಅನಂತಾರ್ಯ ಕುಲಾಕಲ್ಪಂ ವೇಂಕಟಾರ್ಯ(ಅಪ್ಪಯಾರ್ಯ) ತನೂಭವಂ ।
ವರದಾರ್ಯ ಕೃಪಾಪಾತ್ರಂ ಗೋವಿಂದ ಗುರುಮಾಶ್ರಯೇ ॥

4. ಇನೇ ಯವರ ಮಕ್ಕಳು ಎಂದರ ಶ್ರೀ॥ ಉ॥ ವರದಾಚಾರ್ಯರ ಕುಮಾರರು ಶ್ರೀ॥ ಉ॥ ಅಪ್ಪಯಾಚಾರ್ಯ ಸ್ವಾಮಿಗಳವರ (ಶ್ರೀನಿವಾಸಾಚಾರ್ಯರ) ತನಿಯನ್ (ರಾಮಾನುಜಪುರ ಪ್ರತಿಷ್ಠಾಪಕರು)—

ಶೇಷಾರ್ಯ ವಂಶಾಂಬುಧಿ ಪೂರ್ಣಚಂದ್ರಂ ।
ಗೋವಿಂದರಾಜಾರ್ಯ ದಯೈಕಪಾತ್ರಂ ॥
ವೇದಾಂತಿ ರಾಮಾನುಜ ಲಬ್ಧಬೋಧಂ ।
ಶ್ರೀ ಶ್ರೀನಿವಾಸಾರ್ಯಮಹಂ ಪ್ರಪದ್ಯೆ ॥
ಚಕಾರ ಭಟ್ಟೋಪಪದಾರ್ಯಸೂಕ್ತ ।
ಶ್ಲೋಕಾಷ್ಟಕ ವ್ಯಾಕೃತಿ ಮಾರ್ಯಸೇವ್ಯಾಮ್ ॥
ಯಸ್ತಂ ಫಣೀಂದ್ರಾರ್ಯ ಕುಲಾವತಂಸಂ ।
ಶ್ರೀ ಶ್ರೀನಿವಾಸಾರ್ಯ ಮಹಂ ಪ್ರಪದ್ಯೇ ॥

ಶ್ರೀ॥ ಉ॥ ಅಪ್ಪಯಾಚಾರ್ಯ ಸ್ವಾಮಿಗಳವರಿಂದ ಇಂದಿನವರೆಗೆ ರಾಮಾನುಜಪುರದ ಮಹನೀಯರ ವಂಶವೃಕ್ಷವು ಬೇರೆ ಪ್ರಕರಣದಲ್ಲಿ ಬರೆಯಲ್ಪಟ್ಟಿದೆ.

ರಾಮಾನುಜಪುರದ ಪ್ರತಿಷ್ಠಾಪಕರಾದ ಶ್ರೀ॥ ಉ॥ ಅಪ್ಪಯಾಚಾರ್ಯ ಸ್ವಾಮಿಗಳು ಶ್ರೀಯದುಗಿರಿ ಯತಿರಾಜ ಮಠದ **ಶ್ರೀ॥ ಉ॥ ವೇದಾಂತಿ ರಾಮಾನುಜ ಜೀಯರ್ ಸ್ವಾಮಿಗಳವರಲ್ಲಿ** ವಿದ್ಯಾರ್ಜನೆಯನ್ನು ಮಾಡಿದರಿಂದು ಹಿಂದೆಯೇ ತಿಳಿಸಿದೆ. ಶ್ರೀ॥ ಉ॥ ಅಪ್ಪಯಾಚಾರ್ಯರು ತಾವು ಈ ಪ್ರಾಂತಕ್ಕೆ ಬಂದಾಗ ತಮ್ಮೊಡನೆ ತಮ್ಮ ವಿದ್ಯಾಗುರುಗಳಾದ ಶ್ರೀ॥ ಉ॥ ವೇದಾಂತಿ ರಾಮಾನುಜರನ್ನು ಕರೆತಂದರೆಂದು ಪರಂಪರಾಗತವಾಗಿ ತಿಳಿದು ಬಂದಿದೆ.

ಈ ಸ್ವಾಮಿಗಳು ರಾಮಾನುಜಪುರದ ಲೋಹಿತ ಗೋತ್ರದವರಿಗೆಲ್ಲಾ ಮೂಲಪುರುಷರು. ಇವರ ಮಕ್ಕಳಲ್ಲೊಬ್ಬರಾದ ಶ್ರೀ॥ ಉ॥ ವೆಂಕಟಾಚಾರ್ಯರವರು ಈಗಿನ ಆಜಿವಂಶದವರಿಗೆಲ್ಲಾ ಮೂಲಪುರುಷರು. ಈಚೆಗೆ ಆಜಿಯವರು ಮಂಡ್ಯದ ಆಜಿ, ಮೈಸೂರು ಆಜಿ ಮತ್ತು ಮಳೂರು ಆಜಿಯವರೆಂದು ಮೂರು ಗುಂಪಾದರು.

ಶ್ರೀ॥ ಉ॥ ವೇದಾಂತಿ ರಾಮಾನುಜರ ಇನ್ನೊಬ್ಬ ಕುಮಾರರು ಈಗಿನ ಅಪ್ಪಚ್ಚಾರ್ ವಂಶಕ್ಕೆ ಮೂಲಪುರುಷರು. ಕರೀಘಟ್ಟದವರೂ, ಛತ್ರಪತಿಯವರೂ ಸಹ ಶ್ರೀ॥ ಉ॥ ವೇದಾಂತಿ ರಾಮಾನುಜರ ವಂಶಸ್ಥರು.

ರಾಮಾನುಜಪುರದ ಪ್ರತಿಷ್ಠಾಪಕರಾದ ಶ್ರೀ॥ ಉ॥ ಶ್ರೀನಿವಾಸಾಚಾರ್ಯರವರು ಮಹಾತ್ಮರು, ಬಹುಶೀಲರು, ಘನಪಂಡಿತರು. ಅವರಿಂದಲೇ ಇವರ ವಿದ್ಯಾಗುರುಗಳ ಪುತ್ರರಾದ ಆಜಿಯವರ ಮೂಲಪುರುಷರು. ಶ್ರೀ॥ ಉ॥ ವೆಂಕಟಾಚಾರ್ಯರವರು ಶ್ರೀ॥ ಉ॥ ಶ್ರೀನಿವಾಸಾಚಾರ್ಯರವರಿಂದಲೇ ಪಂಚಸಂಸ್ಕಾರವನ್ನು ಹೊಂದಿರಬೇಕು.

ಶ್ರೀ॥ ಉ॥ ಅಪ್ಪಯಾಚಾರ್ಯ ಸ್ವಾಮಿಗಳವರು ಅಂಶಪುರುಷರು. ಮಂಡಯದ ಶ್ರೀ ವೈಷ್ಣವ ಮಹಾಜನರಿಂದ ಎಂದೆಂದಿಗೂ ಆರಾಧಿಸಲ್ಪಡತಕ್ಕವರು.

ಪ್ರಕರಣ ೪

ಮಂಡಯ ಮತ್ತು ರಾಮಾನುಜಪುರದವರ ವಿಸ್ತಾರ

ಮೇಲುಕೋಟೆಯಲ್ಲಿ (ತಿರುನಾರಾಯಣಪುರಂ) ಬಹಳ ಹಿಂದಿನಿಂದಲೇ ನಮ್ಮವರು ನೆಲಸಿದ್ದರು. ನಮ್ಮವರ ಆಚಾರವಂತೆಯೇ ಅನುಸರಿಸುತ್ತಿದ್ದ ಇತರ ಶ್ರೀ ವೈಷ್ಣವ ಮಹಾಜನಗಳೂ ಅಲ್ಲಿಯೇ ಇರುತ್ತಿದ್ದರು. ತಿರುನಾರಾಯಣಪುರದ ಸುತ್ತಮುತ್ತಲ ಗ್ರಾಮಗಳಾದ ನಾಗಮಂಗಲ, ಕುಣಿಗಲ್, ಹಾಮಸಮುದ್ರ. ಕ್ಯಾತನಹಳ್ಳಿ ಇತ್ಯಾದಿ ಗ್ರಾಮಗಳ ಶ್ರೀ ವೈಷ್ಣವ ಮಹಾಜನಗಳು ಮಂಡಯದವರು. ಈ ಶ್ರೀ ವೈಷ್ಣವರಲ್ಲೆಲ್ಲಾ ವಿವಾಹ ಸಂಬಂಧವನ್ನು ಆಗಿನಕಾಲಕ್ಕೆ ಬೆಳಿಯಿಸಲಿಲ್ಲವೆನ್ನುತ್ತಾರೆ. ಇದು ನಿರ್ಧರದ ಮಾತಾಗಿ ದೃಢೀಕರಿಸಲಾಗುವುದಿಲ್ಲವೆಂದು ಕಾಣುತ್ತದೆ. ಆದರೆ ಚಿಕ್ಕದೇವರಾಜ ಒಡೆಯರವರ (ಕ್ರಿ. ಶ. ೧೬೭೨–೧೭೦೪) ಮಂತ್ರಿ ಶ್ರೀ॥ ಉ॥ ತಿರುಮಲೈಯ್ಯಂಗಾರ್ಯರು (ಶ್ರೀ॥ ಉ॥ ಗೋವಿಂದರಾಜ ಉಡೈಯರವರ ವಂಶಸ್ಥರು. ಪ್ರಧಾನ್ ಅಪ್ಪಾಜಯ್ಯ ಅಥವಾ ಗೋವಿಂದರಾಜಯ್ಯನವರ ಮಗಳ ಮಗ; ಪ್ರಧಾನ ವಂಶವೃಕ್ಷದಲ್ಲಿ ಬೇರೆ ಪ್ರಕರಣದಲ್ಲಿ ನಿರೂಪಿಸಿದೆ.) ಈ ಸಮುದಾಯದ ಸಂಕುಚಿತ ಭಾವನೆಯನ್ನು ಹೋಗಲಾಡಿಸಿ, ಅದನ್ನು ವಿಸ್ತರಿಸಲು ಏಕ ಕಾಲದಲ್ಲಿ ಐದು ಹೆಂಡಿರನ್ನು ಮದುವೆಯಾದರೆಂದು ಸಾಂಪ್ರದಾಯಿಕ

ವರ್ತಮಾನವು ನೆಲಸಿದೆ—ಮಂಡಯ, ರಾಮಾನುಜಪುರ, ಕುಣಿಗಲ್, ನಾಗಮಂಗಲ ಮತ್ತು ಕ್ಯಾತನಹಳ್ಳಿಯ ಶ್ರೀ ವೈಷ್ಣವ ಹೆಂಗಸರು.

ಹೀಗೆ ವಿಶಾಲವಾದ ಸಮುದಾಯದವರು ಮಂಡಯ, ಮೈಸೂರು, ಮದ್ರಾಸು, ಶ್ರೀರಂಗಪಟ್ಟಣ, ರಾಮಾನುಜಪುರ, ಮಂಡಯದ ಕೊಪ್ಪಲು, ಮಳೂರು, ಹೊನ್ನಲಗೆರೆ, ಬೆಂಗಳೂರು ಮುಂತಾದ ಊರುಗಳಲ್ಲಿಲ್ಲಾ ವಾಸಮಾಡುತ್ತಿರುವರು. ಇನ್ನೂ ದೂರ ದೇಶಗಳಿಗೆ ಕೆಲವರು ಹೋಗಿ ನೆಲೆಸಿರುತ್ತಾರೆ.

'ಹೆರಿಯಹಾಂ' ಎಂದು ಪ್ರಸಿದ್ಧಿ ಪಡೆದಿರುವ ನಮ್ಮವರ ಮನೆಯು ತಿರುವಲ್ಲಿಕ್ಕೇಣಿಯಲ್ಲಿ ಈಸ್ಟ್ ಇಂಡಿಯಾ ಕಂಪೆನಿಯವರಿಂದ ಪ್ರಧಾನ ತಿರುಮಲರಾಯರಿಗೆ ಕೊಡಲ್ಪಟ್ಟಿತು. ಅವರ ವಂಶಸ್ಥರೂ ನಂಟರೂ ಮದ್ರಾಸಿನಲ್ಲಿಯೇ ನೆಲೆಸಿದರು.

ಕ್ರಿ. ಶ. ೧೭೯೯ ರಲ್ಲಿ ಹೈದರ್, ಟಿಪ್ಪೂ ಇವರುಗಳು ನಾಶವಾದಮೇಲೆ ಅವರುಗಳ ಕಾಲದಲ್ಲಿ ನಾನಾ ಹಿಂಸೆಗಳಿಗೆ ಗುರಿಯಾಗಿದ್ದ ನಮ್ಮ ಜನಗಳು ಸುರಕ್ಷಿತರಾಗಿ ಮತ್ತೆ ಮೈಸೂರುದೇಶಕ್ಕೆ ಹೋಗಿ ನಿಂತರು. ೧೮೫೧ ನೆಯ ಇಸವಿಯಿಂದೀಚೆಗೆ ಬೆಂಗಳೂರು ಸರಕಾರದ ಪ್ರಧಾನ ನಗರವಾದುದರಿಂದಲೂ, ವಿದ್ಯಾಭ್ಯಾಸ ಮುಂತಾದುವುಗಳಿಗೆ ಹೆಚ್ಚು ಸೌಕರ್ಯಗಳು ಏರ್ಪಟ್ಟುದುದರಿಂದಲೂ, ಬೆಂಗಳೂರು ನಗರದಲ್ಲಿ ಈಗ ನಮ್ಮವರ ಮನೆಗಳು ಹೆಚ್ಚು ಸಂಖ್ಯೆಯಿಂದಿವೆ (೧೯೫೦ ರಲ್ಲಿ ಸುಮಾರು ೨೦೩ ಮನೆಗಳು).

ಕ್ರಿ. ಶ. ೧೮ ನೆಯ ಶತಮಾನದಲ್ಲಿ ಮಂಡಯದ ಕೊಪ್ಪಲಿನಲ್ಲಿ ನಮ್ಮವರ ಮನೆಗಳು ಸುಮಾರು ೨೪ ಇದ್ದುವಂತೆ. ಹೆಚ್ಚು ಸಂಖ್ಯೆಯವರು ರಾಮಾನುಜಪುರದ ಶಾಖೆಯವರು. ಈಗ ಕ್ರಿ. ಶ. ೧೯೫೦ ರಲ್ಲಿ ಎರಡು ಮೂರು ಮನೆಗಳು ಮಾತ್ರ ಇವೆ.

ಮಳೂರಿನಲ್ಲೂ ನಮ್ಮವರು ನೆಲೆಸಿದ್ದುದು ೧೮ ನೆಯ ಶತಮಾನದಲ್ಲೇ ಎಂದು ತಿಳಿದುಬರುತ್ತದೆ. ಇವರ ಸಂತತಿಯವರು ಮದರಾಸಿನ ನಾಯಕ ವಂಶಸ್ಥರು; ಶ್ರೀ ಅಪ್ರಮೇಯ ಸ್ವಾಮಿಯವರ ದೇವಸ್ಥಾನದ ಅಡಳಿತ

ಗಣ್ಯರು ನೋಡಿಕೊಳ್ಳುತ್ತಿದ್ದರೆಂದು ಪ್ರತೀತಿ ಇದೆ. ಇವರುಗಳಿಗೆ ಅಗ್ರ ಮರ್ಯಾದೆ ಇದ್ದಿತಂತೆ.

೧೯ನೆಯ ಶತಮಾನದಲ್ಲಿ ಹೊನ್ನಲಗೆರೆಯು ರಾಮಾನುಜಪುರದವರಿಂದ ನಿರ್ಮಿತವಾಯಿತೆನ್ನಬಹುದು. ಈಗ ಕ್ರಿ. ಶ. ೧೯೫೦ ರಲ್ಲಿ ರಾಮಾನುಜಪುರದಲ್ಲಿ ನಮ್ಮವರ ಮನೆಯೇ ಇಲ್ಲವಿರುವುದೂ. ಹೊನ್ನಲಗೆರೆಯಲ್ಲಿ ಒಂದೇ ಒಂದು ಮನೆಯಿರುವುದೂ ಬಹಳ ವಿಷಾದವಾಗಿದೆ. ಇನ್ನೆರಡು ಗ್ರಾಮಗಳಲ್ಲೂ ಮುಂದಯಂ ಶ್ರೀ ವೈಷ್ಣವ ಮಹಾಜನರ ಬಹಳ ಗಣ್ಯರಾದ ಮಹಾಜನರು ನೆಲಸಿದ್ದರು.

ಶ್ರೀ ಎಸ್. ಜಿ. ನರಸಿಂಹಾಚಾರ್ಯರ ವಂಶಸ್ಥರು ಬೂನಿಹಾಳಿಂಬ ಗ್ರಾಮದವರೆಂದು ಶ್ರೀರಂಗಪಟ್ಟಣದ ಕ್ರಿ.ಶ. ೧೬೧೪ನೆಯ ಇಸವಿಯ ಶಾಸನದಿಂದ ತಿಳಿದುಬರುತ್ತದೆ. ಇದಲ್ಲದೆ ಕನ್ನಂಬಾಡಿ, ಸಂಪಳ್ಳಿ, ಕೊತ್ತೇಗಾಲ ಇವ್ಲೆಯವರೂ ಮುಂಡಯದ ಸಮುದಾಯಕ್ಕೇ ಸೇರಿದವರು.

ಒಟ್ಟಿನಲ್ಲಿ ಈಗ (ಕ್ರಿ. ಶ. ೧೯೫೦ ರಲ್ಲಿ) ಸುಮಾರು ೧೪೦ ಮುಂಡಯಂ ಶ್ರೀ ವೈಷ್ಣವ ಮಹಾಜನರ ಪ್ರಧಾನ ಕುಟುಂಬದವರು ಇರುವರು. ಅವರ ಗೋತ್ರಗಳ ಪಿನರ್ ಕುಟುಂಬದ ವಾಡಿಕೆಯಾದ ಹೆಸರುಗಳು ಮುಂದೆ ಬರೆದಿದೆ. ಇವು ಮನೆತನದ ಹೆಸರುಗಳು ಮಾತ್ರವಾಗಿವೆ. ಈ ೧೪೦ ಮನೆತನಗಳವರು ಸುಮಾರು ೬೦೦ ಕ್ಕೆ ಮೇಲ್ಪಟ್ಟು ಪ್ರತ್ಯೇಕ ಮಹಾಜನರ ಒಕ್ಕಲುತನವನ್ನು ಬೆಳಗಿಸುತ್ತಿದ್ದಾರೆ. ಪ್ರಜಾ ಸಂಖ್ಯೆ ಸುಮಾರು ೩೮೦೦ ಈ ಸುಮಾರು ೬೦೦ ಕುಟುಂಬಗಳ ಹೆಸರುಗಳನ್ನು ಈ ಪ್ರಕರಣದಲ್ಲಿ ಸೇರಿಸಿದೆ. ಕೆಲವು ಹೆಸರುಗಳು ಬಿಟ್ಟುಹೋಗಿವೆ. ಹೆಸರುಗಳನ್ನು ನಿರೂಪಿಸುವುದರಲ್ಲಿಯೂ ವ್ಯತ್ಯಾಸಗಳಿರಬಹುದು. ಕೆಲವು ಕುಟುಂಬಗಳು ಇರುವ ಸ್ಥಳಗಳು ಸಕಾಲಕ್ಕೆ ತಿಳಿಯಲಿಲ್ಲ. ಹೆಸರುಗಳೂ ತಿಳಿಯಲಿಲ್ಲ. ಇದಕ್ಕಾಗಿ ಲೇಖಕನು ಕ್ಷಮಾಪಣೆಯನ್ನು ಬೇಡುವುದಲ್ಲದೆ, ಇದನ್ನು ಮುಂದೆ ತಿದ್ದಿ ಸರಿಪಡಿಸುವ ಸುಯೋಗವನ್ನು ದಯೆಯಿಟ್ಟು ಕಲ್ಪಿಸಿಕೊಡಬೇಕೆಂದು ನಮ್ಮ ಮಹಾಜನರನ್ನು ವಿನಯದಿಂದ ಪ್ರಾರ್ಥಿಸುತ್ತಾನೆ.

ಗೋತ್ರಗಳ ರೀತಿಯಾಗಿ ಮಂಡಯಂ ಸಮುದಾಯಕ್ಕೆ ಸೇರಿದ ಪ್ರಧಾನ ಕುಟುಂಬಗಳ ಹೆಸರುಗಳು—

I. **ಭಾರದ್ವಾಜ ಗೋತ್ರ:**

ಆಂಗೀರಸ, ಬಾರ್ಹಸ್ಪತ್ಯ, ಭಾರದ್ವಾಜ ಋಷಿಗಳು.

ರಾಮಾನುಜಪುರಂ ಆಸಂದಾಣ್ ಪಿಳ್ಳೈಗಳು.

1. ಅಯ್ಯಾಪಾಟರ್
2. ಅಣ್ಣಪಾಟರ್ (ಅರಕೆರೆಗಳು)
3. ಹೊನ್ನಲಗೆರೆ
4. ಮಣಿಕರ್ಣಿಕೆ
5. ಕುಟ್ಯತ್ತಂಬಿ
6. ಚಕ್ರಾಳ್ವಾರ್
7. ಅಣ್ಣಯ್ಯಪ್ಪನ್
8. ಕುಟ್ಟಿಯಪ್ಪಾಜಿ
9. ಅಮ್ಮಾಂಜಿ

II. **ಗಾರ್ಗ್ಯ ಭಾರದ್ವಾಜ ಗೋತ್ರ:**

(a) **ಸಾಮಶಾಖೆ–**

ಆಂಗೀರಸ, ಗಾರ್ಗ್ಯ, ತೈಬ್ಯ ಋಷಿಗಳು.

1. ಗುಂಜಾ ಜೋಸ್ಯರ್.

(b) **ಯಜುಶ್ಶಾಖೆ–**

1. ಬಳ್ಳೀಕೆರೆ
2. ಮುದ್ರೆ
3. ಇಯಲ್ ಪಿಳ್ಳೈ
4. ವಜ್ರಕಂತಂ
5. ರಾಮಾನುಜ ಮುನಿ
6. ಜೀಯರ್ ಸನ್ನಿಧಿ
7. ಕಂಚಿ ರಾಮಾನುಜರ್
8. ಗರಕಹಳ್ಳಿ

III. **ಮಂಡಯಂ ಭಾರದ್ವಾಜ:**

1. ತಾತಾಚಾರ್
2. ರಂಗಯ್ಯನ್
3. ಅಣ್ಣಾಧೊರೆ
4. ಪೆರಿಯ ತಿರುಚಾರಾಯಣಾ

ಚಾರ್ಯರ್

5. ಮದರಾಸ್ ಪೆರಿಯಹಾತ್ ಶಿಂಗ್ಲಾಚಾರ್
6. ಮಳೂರು ಅನಂದಾಳ್ವಾರ್
7. ಭೀಮನ್ ವಂಶಸ್ಥರು
8. ಅನಂದಾಳ್ವಾರ್ ನರಸಿಂಹಾಚಾರ್ಯರು
9. ನಾಟಂಪಳ್ಳಿ ವಂಶಸ್ಥರು
10. ರಂಗಧಾಮನ್
11. ಚನ್ನು ವಂಶಸ್ಥರು
12. ಮಾದ್ರಿ ವಂಶಸ್ಥರು
13. ಜೊಕ್ಕಣ್ಣನ್
14. ಕೋಪೇ ವಂಶಸ್ಥರು
15. ಬುಡಗನ್
16. ಒಂಭತ್ತುವೃತ್ತಿ (ಕನ್ನಿ)
17. ಜಯರಾಮನ್
18. ಮುಕ್ಕಟ್ಟಿ
19. ಭೂಲೋಕನ್
20. ನಾಯಕರ್
21. ಕೊಮಾರ್
22. ಚಿಂತಾಮಣಿ
23. ಬೂದನೂರ್
24. ದೊಡ್ಡಮನೆ
25. ಸಂಪಳ್ಳಿ
26. ಕೋಯಿಲ್ ವಾಶಲ್
27. ಹರವು ವಂಶಸ್ಥರು
28. ಧಾಟ
29. ಅಪ್ಪನ್
30. ಅಮ್ಮಂಗಾತಂಬು
31. ಪಾಲಹಳ್ಳಿ

IV. ಶ್ರೀವತ್ಸ ಗೋತ್ರ:

ಭಾರ್ಗವ, ಚ್ಯವನ, ಆಪ್ಲವಾನ, ಔರ್ವ, ಜಾಮದಗ್ನಿ ಋಷಿಗಳು.

(a) ಪ್ರತಿವಾದಿ ಭಯಂಕರಂ ಶ್ರೀವತ್ಸ:

1. ತೊಂಡನೂರು ಕಲ್ಕಿ ನರಸಿಂಹಯಂಗಾರ್ಯರೂ ನಾರಾಯಣಯ್ಯಂಗಾರ್ಯರೂ
2. ನಂಬಿತಂಬಿರಾನ್
3. ಕಣ್ಣಪ್ಪನ್
4. ಮುತ್ತೀಗೆರೆ
5. ಮಕರನ್
6. ಮಳೂರು ಅಜಿ
7. ಜಟಾವಲ್ಲಭರ್
8. ಅಪ್ಪಚ್ಚಾರ್
9. ನಾರಾಯಣಾಚಾರ್ಯರ್

(b) ಚಕ್ರವರ್ತಿ ಶ್ರೀವತ್ಸ:

1. ಪೆಂಯಸ್ವಾಮಿ
2. ಪರಮೈಕಾಂತಿ
3. ಐಶಾಮಿ
4. ಚಿನ್ನ ನರಸಿಂಹಾಚಾರ್
5. ಸಣ್ಣಯ್ಯನ್
6. ಬಿಪ್ಪಹಟ್ಟಿ
7. ಗಂಟಿ
8. ಮೂಕ್ಕನ್ನಾಡಿ
9. ಮೈಸೂರು ರಂಗಾಚಾರ್ಯರು
10. ನಲ್ಲಾನ್
11. ಮಿಳಹಾಳ್ವಾರ್

(c) ಇತರ ಶ್ರೀವತ್ಸ (ಮೂರು ಪಂಗಡ):

1. ದಾಮೋದರಂ 2. ಅಂಬೂ 3. ಮುಡುಂಬೈ

V. ಲೋಹಿತ ಗೋತ್ರ:

ವಿಶ್ವಾಮಿತ್ರ, ಅಘಮರ್ಷಣ, ಕೌಶಿಕ ಋಷಿಗಳು.

(a)

1. ಜೊಕ್ಕಮಾಮನ್
2. ಮಿನ್ನಾಣಿ
3. ಚಿಕ್ಕಾಳಿ
4. ಆಣ್ಣಾಸಾಮಿ

ನಾರಸಿಂಹ ಒಡೆಯರ್

5. ಆನನ್ದಾಣ್ ಪಿಳ್ಳೈ
6. ಬಸವೇರಾಜ
7. ಇಕ್ಕಳಕ್ಕಿ
8. ಭಗವದ್ಗೀತೆ

(b)

1. ಮಂಡಯಂ ಆಜಿ
2. ಮೈಸೂರು ಆಜಿ
3. ಅಪ್ಪಚ್ಚಾರ್

ಲೋಹಿತ ಗೋತ್ರದವರು ಹಿಂದಿನಿಂದಲೂ ಎರಡು ಗುಂಪಿನವರಾಗಿ ಹೇಳಲ್ಪಟ್ಟಿರುವುದಕ್ಕೆ ಕಾರಣ, ದಂಡನಾಯಕನ ವಂಶವೊಂದು, ವೇದಾಂತಿ ರಾಮಾನುಜರ ಪಂಗಡವೊಂದು ಎಂದು ತಿಳಿಯಬರುತ್ತದೆ.

VI. ವಾಸಿಷ್ಠ ಗೋತ್ರ:

ವಾಸಿಷ್ಠ, ಮೈತ್ರಾವರುಣ, ಕೌಂಡಿನ್ಯ ಋಷಿಗಳು.

1. ಬಿಡಿಮಣ್ಣಂ

VII. ಶಾಂಡಿಲ್ಯ ಗೋತ್ರ:

ಶಾಂಡಿಲ್ಯ, ಅಸಿತ, ದೈವಲ ಋಷಿಗಳು.

1. ಭಾರತಿ

VIII. ಗೌತಮ ಗೋತ್ರ:

ಆಂಗೀರಸ, ಆಪಿಲ್ಯ, ಗೌತಮ ಋಷಿಗಳು.

1. ಪೂಂಚಾಳಂ

IX. ಕೌಂಡಿನ್ಯ ಗೋತ್ರ:

ವಾಸಿಷ್ಠ, ಮೈತ್ರಾವರುಣ, ಕೌಂಡಿನ್ಯ ಋಷಿಗಳು.

1. ಗೋಮಠಂ (ಶ್ರೀನಿವಾಸ ಜೋಸ್ಯರ್)
2. ತೋಳಿ
3. ಕೇಶವಾಚಾರ್
4. ಪಾಮಸಮುದ್ರಂ
5. ಗ್ರಾಮಣಿ
6. ಮಕರನ್

X. ಹಾರೀತ ಗೋತ್ರ:

ಆಂಗೀರಸ, ಆಂಬರೀಷ, ಯೌವನಾಶ್ವ ಋಷಿಗಳು.

1. ಹೊನ್ನಲಗೆರೆ ಅಸೂರಿ
2. ಪೂಜಾಂಡಿ
3. ಎಂ. ಓ. ಪಾರ್ಥಸಾರಥಿ ಅಯ್ಯಂಗಾರ್
4. ಜೊಕ್ಕತಂಬು
5. ಪೆರಿಯಣ್ಣಾಜಿ
6. ವೀರಾಂಬುಧಿ
7. ಹಾಳಿ
8. ಅಗ್ರಹಾರಂ

XI. ಆತ್ರೇಯ ಗೋತ್ರ:

ಆತ್ರೇಯ, ಅರ್ಚನಾಶನ, ಶಾದಶ್ವ ಋಷಿಗಳು.

1. ಸುಮಾನಿ
2. ಕೋಪೆ (ಶಿಂಗ್ಲಾಚಾರ್)
3. ತಿರುಪತಿ ಕುಟ್ಟಿಯಪ್ಪಾಜಿ
4. ನಾರಾಯಣ ಜೋಸ್ಯರ್
5. ಕೋಟಿ ಜೋಸ್ಯರ್(ಕ್ಯಾತನಹಳ್ಳಿ)
6. ಪರಶುರಾಮನ್

XII. ವಾಧೂಲ ಗೋತ್ರ:

ಭಾರ್ಗವ, ಪಾರಾಶರ್ಯ, ಸಾಮರಸ ಋಷಿಗಳು.

1. ಜೊತ್ತಿಕೊಳಂ
2. ಕೂತಾಡಿ
3. ಬುರುಡು
4. ಪಶಲ್
5. ಕೋಪೆ ನಾರಾಯಣನ್
6. ಮಡಕೆಹುಳಿ (ಕೃಷ್ಣಕುಮಾರನ್)
7. ಗಿಡ್ಡಯ್ಯನ್
8. ವೀಣೆ
9. ಕನ್ನಂಬಾಡಿ

ಕೋಪೆಯವರ ಕುಟುಂಬಗಳು ಮೂರು ಗೋತ್ರಗಳಲ್ಲಿ ಬಂದಿರುವುದಕ್ಕೆ ಕಾರಣವು ತಿಳಿದಿಲ್ಲ.

XIII. ಕೌಶಿಕ ಗೋತ್ರ:

ವಿಶ್ವಾಮಿತ್ರ, ಅಘಮರ್ಷಣ, ಕೌಶಿಕ ಋಷಿಗಳು.

(a) ಯಾಜುಷ:

1. ನಾಟಂಪಳ್ಳಿ
2. ಕೊಮಾರ್
3. ಬಿಂದಿಗೆ
4. ಮುದಿಗುಂಬಂ
5. ಕಾಯಿಬಜ್ಜಿ
6. ನಳ್ಳಿ
7. ಮನ್ನೆ
8. ಅಧ್ಯಾಪಕರ್
9. ಪುದುಚೇರಿ
10. ಗೋಧಿ

(b)

1. ದೇವಶಿಖಾಮಣಿ
2. ಮಾತ್ರೆ
3. ಚಂದಣಂ
4. ತಾಮರಾಯರ್
5. ಟಪ್ಪಣಿ
6. ಗ್ರಾಮಣಿ
7. ಕರೂಹಟ್ಟಿ
8. ಒಂಬಾ ಶಿಂಗ್ರಿ
9. ಕೊತ್ತಾಗಾಲ
10. ಒಕ್ಕರಣೆ
11. ಒಂಟೆ
12. ಜಗ್ಗು

(c) ಸಾಮಕರು:

1. ಥಾಟ
2. ಮೈಸೂರು ಮುದ್ರೆ
3. ಪುಸ್ತಕಂ

ಒಂದೆ ನಿರೂಪಿಸಿದಂಗೆ ಮಂಡಯದ ಪ್ರಾಂತದಲ್ಲಿ ನೆಲಸಿದ ಮಹನೀಯರು ಹದಿಮೂರು ಗೋತ್ರಗಳವರಲ್ಲಿ ಶಠಮರ್ಷಣ ಗೋತ್ರದವರು ಈಚಿಗೆ ಯಾರೂ ಇಲ್ಲವೆಂದು ತಿಳಿದುಬಂದಿದೆ.

ಗಾರ್ಗ್ಯ ಭಾರದ್ವಾಜ ಸಾಮಶಾಖೆಯಲ್ಲಿ ವಾಸಿಷ್ಠ ಗೋತ್ರದಲ್ಲಿ, ಶಾಂಡಿಲ್ಯ ಗೋತ್ರದಲ್ಲಿ ಮತ್ತು ಗೌತಮ ಗೋತ್ರದಲ್ಲಿ ಒಂದೊಂದೇ ಮನೆ ತನವರು ಇರುವುದಾಗಿ ತಿಳಿದುಬಂದಿದೆ. ಇದು ಸರಿಯಾಗಿದೆಯೇ ಎಂಬುದು ನಿರ್ಧರವಾಗಬೇಕು.

ಮಂಡಯಂ ಶ್ರೀ ವೈಷ್ಣವರಲ್ಲಿ ಹದಿಮೂರು ಗೋತ್ರಗಳನ್ನು ಮೇಲೆ ನಿರೂಪಿಸಿದೆಯಷ್ಟೆ. ಈ ಹದಿಮೂರು ಗೋತ್ರಗಳವರ ಮತ್ತು ಕೆಲವು ಗೋತ್ರಗಳ ಶಾಖೆಗಳವರ ವಂಶವೃಕ್ಷಗಳನ್ನು ಪೂರ್ತಿಯಾಗಿ ಸಂಗ್ರಹಿಸಲು ಆಗಿಲ್ಲ. ಸುಮಾರು ಕ್ರಿ. ಶ. ೧೯೦೦ ನೇ ಇಸವಿಗಿಂತಲೂ ಬಹಳ ಹಿಂದೆಯೇ ಶ್ರೀ|| ಉ|| ಆಸೂರಿ ಅನಂದಾಳ್ವಾರ್ ಸ್ವಾಮಿಗಳವರು ನಮ್ಮ ಸಮುದಾಯದವರ ವಂಶವೃಕ್ಷಗಳು ಕೆಲವನ್ನು ತಯಾರಿಸಿದ್ದರು. ಬಹಳ ಪ್ರಯತ್ನದಿಂದ ಪ್ರತಿವಾದಿ ಭಯಂಕರಂ ಶ್ರೀವತ್ಸ ಗೋತ್ರದವರ ವಂಶವೃಕ್ಷ ಒಂದು ಆಚ್ಚು ಮಾಡಿಸಿದ್ದು ಶಿಥಿಲವಾಗಿ ಅಸಂಪೂರ್ಣವಾಗಿ ದೊರೆತಿದೆ. ಶ್ರೀ|| ಉ|| ಆಸೂರಿ ಅನಂದಾಳ್ವಾರ್ ಸ್ವಾಮಿಗಳು ಈ ಕೆಳಗೆ ವಿವರಿಸಿರುವ ವಂಶವೃಕ್ಷಗಳನ್ನು ಬರೆಯಲು ನಿರ್ಧರ ಮಾಡಿದ್ದುದು ಮಾತ್ರ ಆ ಮಹಾನುಭಾವರ ಕೈ ಬರೆಹದಲ್ಲಿಯೇ ಒಂದು ಪಟ್ಟಿಯು ದೊರೆತಿದೆ. ಇವುಗಳಲ್ಲಿ ಯಾವುದನ್ನು ಮುಗಿಸಿದ್ದರೋ ತಿಳಿಯದಾಗಿದೆ.

"ವಂಶವೃಕ್ಷ ಬರೆಯಲು ತಯಾರಾಗಿದ್ದ ಗೋತ್ರಗಳ ಪಟ್ಟಿ"

1. ಮಂಡಯದ ಭಾರದ್ವಾಜ
2. ರಾಮಾನುಜಪುರಂ ಭಾರದ್ವಾಜ
3. ಚಕ್ರವರ್ತಿ ಶ್ರೀವತ್ಸ
4. ಪ್ರತಿವಾದಿ ಭಯಂಕರಂ ಶ್ರೀವತ್ಸ
5. ಇತರ ಶ್ರೀವತ್ಸ
6. ಲೋಹಿತ ೧ನೇ ಆಜಿ
7. ಲೋಹಿತ ೨ನೇ ಆಜಿ
8. ಇತರ ಆಜಿ
9. ಆತ್ರೇಯ (೩ ಗುಂಪು)
10. ವಾಧೂಲ

11. ಕೌಂಡಿನ್ಯ
12. ಕೌಶಿಕ (ಮಂಡಯ)
13. ಕೌಶಿಕ (ಟಪ್ಪಣಿ)
14. ಇತರೆ ಕೌಶಿಕ
15. ಶಾಂಡಿಲ್ಯ
16. ವಾಸಿಷ್ಠ
17. ಗೌತಮ
18. ಹಾರೀತ
19. ಸಾಮ ಕೌಶಿಕ
20. ಸಾಮ ಭಾರದ್ವಾಜ
21. ಇತರ ಗರ್ಗ

ಈಗ ದೊರೆತಿರುವ ಈ ಕೆಳಗೆ ವಿವರಿಸಿರುವ ವಂಶವೃಕ್ಷಗಳನ್ನು ಪ್ರತ್ಯೇಕವಾಗಿ ಮುದ್ರಿಸಿದೆ.

1. ಹಾರೀತ ಗೋತ್ರ
2. ರಾಮಾನುಜಪುರಂ ಭಾರದ್ವಾಜ
3. ಮಂಡಯಂ ಭಾರದ್ವಾಜ (ಸ್ವಲ್ಪಭಾಗ ಮಾತ್ರ)
4. ಮಂಡಯಂ ಭಾರದ್ವಾಜ (ಸ್ವಲ್ಪ ಭಾಗ)
5. ಪ್ರತಿವಾದಿ ಭಯಂಕರಂ ಶ್ರೀವತ್ಸ
6. ಚತ್ರವರ್ತಿ ಶ್ರೀವತ್ಸ
7. ಕೌಶಿಕ (ರಾಯಪ್ಪನ್, ಮನ್ನಿ ಮುಂತಾದವರು)
8. ಕೌಶಿಕ (ದಿವಾನ್ ತಿರುಮಲೈಯ್ಯಂಗಾರ್ಯನ್, ಕಾಯ ಬಜ್ಜಿ ಮುಂತಾದವರು)
9. ಲೋಹಿತ ಗೋತ್ರ (ಭಾಗ)
10. ಕೌಂಡಿನ್ಯ ಗೋತ್ರ (ಭಾಗ)

ನಮ್ಮವರ ಗಳಂ ಪ್ರಧಾನ ಕುಟುಂಬಗಳ ಹೆಸರುಗಳನ್ನು ಗೋತ್ರ ರೀತಿಯಾಗಿ ಬರೆದಿದೆ. ಈ ಮೇಲ್ಕಂಡ ವಂಶವೃಕ್ಷಗಳನ್ನೂ ಆಯಾ ಗೋತ್ರಗಳ ಪ್ರಧಾನ ಕುಟುಂಬಗಳ ಹೆಸರುಗಳನ್ನೂ ಸರಿಹೋಲಿಸಿ ನೋಡಿದರೆ ಆಯಾ ವಂಶವೃಕ್ಷದ ಕುಟುಂಬದ ಶಾಖೆಗಳು ವ್ಯಕ್ತವಾಗುವುವು.

ಇನ್ನು ಮುಂದೆ ಕ್ರಿ. ಶ. ೧೯೩೦ ನೇ ಡಿಸಂಬರ್ ತಿಂಗಳ ಸುಮಾರಿನಲ್ಲಿ ನಮ್ಮ ಮಹಾಜನಗಳ ಪ್ರತ್ಯೇಕವಾದ ಸುಮಾರು ೭೦೦ ಒಕ್ಕಲುತನಗಳು

ಯಾವ ಯಾವ ಊರಿನಲ್ಲಿ ನೆಲಸಿದ್ದಾರೆ ಎಂಬುದನ್ನು ಪರಿಶಿಷ್ಟ ೧ ರಲ್ಲಿ ನಿರೂಪಿಸಿದೆ. ಒಬ್ಬೊಬ್ಬರೇ ಪ್ರತ್ಯೇಕವಾಗಿ ವಾಸಮಾಡುತ್ತಿದ್ದರೂ ಅವರನ್ನು ಒಂದು ಒಕ್ಕಲಾಗಿ ಪರಿಗಣಿಸಿದೆ. ಈ ಗಣತಿಯು ಖಂಡಿತವಾಗಿ ಪೂರ್ತಿಯಾಗಿಲ್ಲ. ಸರಿಯಾಗಿಯೂ ಇಲ್ಲ. ಆದರೂ ಮುಂದೆ ನಮ್ಮ ಮಹಾಜನರು ತಿದ್ದಿ ಸರಿಪಡಿಸಲು ಸ್ವಲ್ಪ ಅನುಕೂಲವಾಗುವುದೆಂದು ಬರೆದಿದೆ.

ಪ್ರಕರಣ ೫

ಶತಮಾನ ಶತಮಾನ ವರದಿಗಳು

ಮಂಡಯಂ ಶ್ರೀ ವೈಷ್ಣವ ಮಹಾಜನಗಳ ಆದಿಕಾಲದ ವರದಿಗಳು, ಹಿಂದೆಯೇ ತಕ್ಕಮಟ್ಟಿನ ಆಧಾರಗಳೊಡನೆ ವಿವರಿಸಿದಂತೆ, ಶ್ರೀ ರಾಮಾನುಜಾಚಾರ್ಯರು ಮಹದವತಾರ ಮಾಡಿದ (ಕ್ರಿ. ಶ. ೧೦೧೭) ಹನ್ನೊಂದನೆಯ ಶತಮಾನದಿಂದ ಈಚೆಗೆ ಸ್ವಲ್ಪ ಹೆಚ್ಚಾಗಿ ತಿಳಿದಿದೆ. ಆದುದರಿಂದ ೧೧ ನೆಯ ಶತಮಾನದಿಂದೀಚೆಗೆ ಆಯಾ ಶತಮಾನಗಳಲ್ಲಿ ನಡೆದ ವಿಷಯಗಳನ್ನು ತಿಳಿದಷ್ಟುಮಟ್ಟಿಗೆ ಬರೆದಿದೆ.

೧೧ ನೆಯ ಶತಮಾನ:—ಶ್ರೀ ತಿರುವನಂತಾಳ್ವಾರ್ ಸ್ವಾಮಿಗಳವರು ಕ್ರಿ. ಶ. ೧೦೫೩ ರಲ್ಲಿ ಶ್ರೀರಂಗಪಟ್ಟಣದ ಹತ್ತಿರ ಹಳೆಯ ಕಿರಂಗೂರಿನಲ್ಲಿ ಅವತರಿಸಿದುದು. ಈ ಮಹಾತ್ಮರಿಂದಲೇ ನಮ್ಮವರ ಈಚಿನ ಚರಿತ್ರೆಯು ಆರಂಭವಾಗಿದೆ.

೧೨ ನೆಯ ಶತಮಾನ:—ಈ ಶತಮಾನವು ಬಹಳ ಮುಖ್ಯವಾದುದು. ಶ್ರೀ ರಾಮಾನುಜರು ಯಾದವಪುರಿಯನ್ನು (ಮೇಲುಕೋಟೆ) ಸ್ಥಾಪಿಸಿದುದು. ಬಲ್ಲಾಳ ರಾಜನಾದ ಬಿಟ್ಟಿದೇವನು ಶ್ರೀ ರಾಮಾನುಜರ ಶಿಷ್ಯನಾಗಿ ವಿಷ್ಣುವರ್ಧನನೆಂಬ ನಾಮಧೇಯವನ್ನು ಪಡೆದು, ಕ್ರಿ. ಶ. ೧೧೧೭ ರಲ್ಲಿ ಶ್ರೀ ವೈಷ್ಣವ ಬ್ರಾಹ್ಮಣರಿಗೆ 'ಅಷ್ಟಗ್ರಾಮ' ಗಳೆಂಬ ಕಾವೇರೀ ತೀರದ ಎಂಟು ಗ್ರಾಮಗಳ ಜಹಗೀರನ್ನು ದಾನಮಾಡಿದನು.

ಹಿಂದೆಯೇ ವಿವರಿಸಿದಂತೆ, ಮಂಡಯದ ಅಗ್ರಹಾರವು ಈ ಶತಮಾನದಲ್ಲೇ ಇದ್ದಿತೆಂದು ಹೇಳಬೇಕಾಗಿದೆ.

೧೩ನೆಯ ಶತಮಾನ:—ಕ್ರಿ. ಶ. ೧೨೭೬ ರಲ್ಲಿ ಸ್ಥಾಪಿತವಾದ ಹೊಸ ಬೂದನೂರು ಗ್ರಾಮದ ಶಾಸನದಲ್ಲಿ (ಮಂಡಯದ ೭೦ ನೇ ನಂಬರ್ ಶಾಸನ) ಮಂಡಯವು '**ಶ್ರೀಮದನಾದಿ ಅಗ್ರಹಾರ**' ವೆಂದು ನಿರೂಪಿಸಲ್ಪಟ್ಟಿದೆ.

೧೪ನೆಯ ಶತಮಾನ:—ಕ್ರಿ. ಶ. ೧೩೦೬ ರಲ್ಲಿ ಬಲ್ಲಾಳ ರಾಜಧಾನಿಯಾದ ದ್ವಾರಸಮುದ್ರವು ನಶಿಸಿದಾಗ ಹಿಂದೆ ಬಂದಿದ್ದ ಜಹಗೀರುಗಳು ಕೈಬಿಟ್ಟುಹೋದುವು.

ಕ್ರಿ. ಶ. ೧೩೮೦ ರಲ್ಲಿ ವಿಜಯನಗರದ ಚಕ್ರವರ್ತಿಯು ತನ್ನ ಬಂಧುವನ್ನು ಶ್ರೀ ರಂಗಪಟ್ಟಣದ ಶ್ರೀ ರಂಗರಾಯನನ್ನಾಗಿ ಎಂದರೆ ರಾಜಪ್ರತಿನಿಧಿಯಾಗಿ ಕಳುಹಿಸಿ ತಿರುವನಂತಾಚಾರ್ಯ ಸ್ವಾಮಿಗಳ ವಂಶದವರಾದ ಶ್ರೀ॥ ಉ॥ ಗೋವಿಂದರಾಜ ಉಡೈಯರೆಂಬುವರಿಗೆ ಮಂಡಯ, ಅತ್ತಿಗುಪ್ಪೆ (ಈಗಿನ ಕೃಷ್ಣರಾಜಪೇಟೆ) ತಾಲ್ಲೋಕುಗಳಲ್ಲಿ ಇಪ್ಪತ್ತೊಂದು ಗ್ರಾಮಗಳನ್ನು ಜಹಗೀರಾಗಿ ಕೊಟ್ಟನು. ಇವರು ಕ್ರಮೇಣ ಶ್ರೀರಂಗರಾಯರಿಗೆ ಗುರುಗಳಾದರು.

೧೫ನೆಯ ಶತಮಾನ:—ಗೋವಿಂದರಾಜ ಉಡೈಯರ ಅನಂತರ ಇವರ ತಮ್ಮ ತಿರುಮಲೈಯ್ಯಂಗಾರ್ಯರೆಂಬುವರು ಗುರುಪೀಠವನ್ನಲಂಕರಿಸಿದರು.

ಈ ಶತಮಾನದ ನಮ್ಮ ಶಕಪುರುಷರು ನಾಗಮಂಗಲಾಧಿಪತಿ ತಿಮ್ಮಣ್ಣ ದಂಡನಾಯಕರು (ತಿರುಮಲಾಚಾರ್ಯರು) ಕಾಲಕ್ರಮದಿಂದ ವಿಜಯನಗರದ ಆಗಿನ ರಾಜಪ್ರತಿನಿಧಿಯ ಮಂತ್ರಿಗಳಾಗಿದ್ದರು. ಇವರು ಲೋಹಿತ ಗೋತ್ರದವರು.

ಶ್ರೀ ರಾಮಾನುಜರಿಂದ ಉದ್ಧಾರವಾದ ತಿರುನಾರಾಯಣಪುರವು ೧೪ನೆಯ ಶತಮಾನದಲ್ಲಿ ದ್ವಾರಸಮುದ್ರವು ನಾಶವಾದನಂತರ ಅಲ್ಲಿಂದ ತೊಂಡನೂರಿಗೆ ಓಡಿಬಂದು, ಹೊಯ್ಸಳ ರಾಯನನ್ನು ಅಟ್ಟಿಸಿಕೊಂಡು

ಬಂದಾಗ, ಮುಸಲ್ಮಾನರ ಕೋಪಕ್ಕೆ ಈಡಾಗಿ ಹಾಳಾಯಿತು. ಹೀಗೆ ಹಾಳಾದ ತಿರುನಾರಾಯಣಪುರವನ್ನು ತಿಮ್ಮಣ್ಣ ದಂಡನಾಯಕರು ಜೀರ್ಣೋದ್ಧಾರ ಮಾಡಿದರು. ತಿರುನಾರಾಯಣಪುರದ ಶಾಸನ ಒಂದರಲ್ಲಿ (ಕ್ರಿ. ಶ. ೧೪೫೮, ಶ್ರೀರಂಗಪಟ್ಟಣದ ತಾಲ್ಲೋಕು ಶಾಸನ ೮೯) ತಮ್ಮನ್ನು **'ಯಾದವ ಗಿರಿ ಜೀರ್ಣೋದ್ಧಾರಕ'** ಎಂದು ಕರೆದುಕೊಂಡಿದ್ದಾರೆ. ಇವರು ಕ್ರಿ. ಶ. ೧೪೩೭ ರಲ್ಲೇ ನಾಗಮಂಗಲದಲ್ಲಿ ಆಳುತ್ತಿದ್ದರೆಂದು ತಿಳಿಯುತ್ತದೆ. ಈ ಶಾಸನವು ನಮ್ಮ ಸಮುದಾಯಕ್ಕೆ ಬಹಳ ಮುಖ್ಯವಾದದ್ದು.

ಇವರನ್ನು ಈಗಲೂ ನಮ್ಮವರಲ್ಲಿ 'ತಿಮ್ಮಣ್ಣ ದಂಡಾನಾಯಕರು' ಎನ್ನುವುದಕ್ಕೆ ಬದಲಾಗಿ 'ಡಣಾಯಕರು' ಎಂದು ಕರೆಯುವ ಅಭ್ಯಾಸವಾಗಿ ಹೋಗಿದೆ.

೧೬ನೇಯ ಶತಮಾನ:—ಈ ಶತಮಾನದಲ್ಲೇ ಮಂಡಯವು ಸ್ಥಿರವಾಗಿ ಸ್ಥಾಪಿತವಾದದ್ದು. ಕ್ರಿ. ಶ. ೧೫೧೬ ರಲ್ಲಿ ವಿಜಯನಗರಾಧಿಪತಿ ಕೃಷ್ಣದೇವರಾಯನು ಮಂಡಯವನ್ನೊಳಗೊಂಡ ಆರು ಗ್ರಾಮಗಳನ್ನು ತಿರುಮಲೈ ಆಸನವ್ವಾಣ್ ಪಿಳ್ಳೈ ಗೋವಿಂದರಾಜ ಉಡೈಯರಿಗೆ ದಾನಮಾಡಿದ್ದು. ತಿರುವನನ್ವಾಳ್ವಾರ್ ಸ್ವಾಮಿಗಳ ೧೭ನೇಯ ತಲೆಯವರೆಂದು ಹೇಳುತ್ತಾರೆ.

ಕ್ರಿ. ಶ. ೧೫೫೮ ರಲ್ಲಿ ಮಾಜೇನಹಳ್ಳಿಯು ಶ್ರೀ ॥ ಉ ॥ ಶ್ರೀನಿವಾಸಾಚಾರ್ಯ ಅಥವಾ ಅಪ್ಪುವಾಚಾರ್ಯರಿಗೆ ವಿಜಯನಗರಾಧಿಪತಿ ಸದಾಶಿವರಾಯನಿಂದ ದೊರೆಯಿತು. ಮಾಜೇನಹಳ್ಳಿಗೆ ರಾಮಾನುಜಪುರವೆಂದು ನಾಮಕರಣಮಾಡಿದರು. ಮೇಲಿನ ಈ ಎರಡು ಶಾಸನಗಳ ವಿಚಾರವೂ ಹಿಂದೆಯೇ ನಿರೂಪಿತವಾಗಿದೆ.

ಕ್ರಿ. ಶ. ೧೬೬೬ನಲ್ಲಿ ಮೈಸೂರು ರಾಜಒಡೆಯರನರ ಶಾಸನದಲ್ಲಿ ಮಂಡಯಂ ಸಮುದಾಯದವರ ಹೆಸರುಗಳಿವೆ.

೧೭ನೇಯ ಶತಮಾನ:—ನಮ್ಮವರಿಗೆ ಮೈಸೂರು ಪ್ರಧಾನತ್ವವು ದೊರೆತಿದ್ದು ಈ ಶತಮಾನದಲ್ಲಿಯೇ. ಕ್ರಿ. ಶ. ೧೬೧೦ ರಲ್ಲಿ ಮೈಸೂರು ರಾಜ ಒಡೆಯರು ಶ್ರೀರಂಗಪಟ್ಟಣವನ್ನು ಆಕ್ರಮಿಸಿದರು. ಇದಕ್ಕೆ ವಿಜಯನಗ

ರದ ಒಪ್ಪಿಗೆಯು ಅವಶ್ಯವಾಗಿತ್ತು. ಈ ಒಪ್ಪಿಗೆಯನ್ನು ಗೋವಿಂದರಾಜ ಒಡೆಯರ ವಂಶೀಯರಾದ ಇನ್ನೊಬ್ಬ ತಿರುಮಲೈಯ್ಯಂಗಾರ್ಯರು ಪಡೆದು ತಂದು, ರಾಜ ಒಡೆಯರವರಿಗೆ ಒಪ್ಪಿಸಿದರು. ಇವಕ್ಕಾಗಿ ತಿರುಮಲೈಯ್ಯಂಗಾರ್ಯರಿಗೆ ಒಂದು ಜಹಗೀರಿಯೂ ದೊರೆಯಿತು. ರಾಜರ ಪ್ರಧಾನರಾಗಿಯೂ ನೇಮಿಸಲ್ಪಟ್ಟರು

ಕ್ರಿ. ಶ. ೧೬೫೯ ರಲ್ಲಿ ಮೈಸೂರು ರಾಜರಾದ ಕಂಠೀರವ ನರಸರಾಜ ಒಡೆಯರವರು ಸಂತತಿ ಇಲ್ಲದೆ ಪರಂಧಾಮವನ್ನೈದಿದರು. ಆಗ ಪ್ರಧಾನ ತಿರುಮಲೈಯ್ಯಂಗಾರ್ಯರ ಮಕ್ಕಳಾದ ಅಪ್ಪಾಜಯ್ಯ ಅಥವಾ ಗೋವಿಂದ ರಾಜಯ್ಯನವರು ದೊಡ್ಡದೇವರಾಜ ಒಡೆಯರವರಿಗೆ ಪಟ್ಟವಾಗಬೇಕೆಂದು ಸಾಧಿಸಿ ಜಯಿಸಿದರು. ಈ ಕಾರಣದಿಂದ ಪ್ರಧಾನರು ಮೊದಲಿಗಿಂತಲೂ ಹೆಚ್ಚಾಗಿ ಪ್ರಾಬಲ್ಯವನ್ನು ಹೊಂದಿದವರಾದರು.

ಕ್ರಿ. ಶ. ೧೬೭೨ ರಲ್ಲಿ ದೊಡ್ಡದೇವರಾಜ ಒಡೆಯರವರ ಮಕ್ಕಳು ಚಿಕ್ಕದೇವರಾಜ ಒಡೆಯರವರು ಅರಸರಾದರು. ಇವರ ಮಂತ್ರಿ ವಿಶಾಲಾಕ್ಷಪಂಡಿತರು ಕ್ರಿ. ಶ. ೧೬೭೬ ರಲ್ಲಿ ಗತಿಸಿದಾಗ, ಪ್ರಧಾನ ಅಪ್ಪಾಜಯ್ಯನವರಿಗೆ ರಾಜರು ಮಂತ್ರಿ ಪದವಿಯನ್ನು ಅಂಗೀಕರಿಸುವಂತೆ ಹೇಳಿದರು. ಆದರೆ ಪ್ರಧಾನ ಅಪ್ಪಾಜಯ್ಯನವರು ತಮ್ಮ ಮಗಳ ಮಗನಾದ ತಿರುಮಲೈಯ್ಯಂಗಾರ್ಯರನ್ನು ಮಂತ್ರಿಯನ್ನಾಗಿ ನೇಮಕಮಾಡಿಸಿದರು. ಇವರು ಬಹುಕಾಲ ಆ ರಾಜನ ಮಂತ್ರಿಯಾಗಿ ಅವನ ಯಶಸ್ಸಿಗೆ ಮುಖ್ಯಕಾರಣರಾದರು. ಆ ರಾಜನು ಕಾಲವಾದನಂತರ ಅವನ ಮೂಕ ಮಗನಿಗೆ ಪಟ್ಟವನ್ನು ಕಟ್ಟಿ ರಾಜ್ಯಸೂತ್ರವನ್ನು ಹಿಡಿದು ನಡೆಸಿದರು. ತಿರುಮಲೈಯ್ಯಂಗಾರ್ಯರು ರಾಜತಂತ್ರ ನಿಪುಣರುಮಾತ್ರವಲ್ಲದೆ ಘನಪಂಡಿತರು, ಮಹಾಕವಿಗಳು, ತತ್ವಜ್ಞರು, ಕನ್ನಡ ಮತ್ತು ಸಂಸ್ಕೃತ ಭಾಷೆಗಳಲ್ಲಿ ಪ್ರಖ್ಯಾತ ಗ್ರಂಥಕರ್ತರೂ ಆಗಿದ್ದರು.

ತಿರುಮಲಸಾಗರ, ಗ್ರಾಮ, ಛತ್ರಗಳನ್ನು ಇವರು ಕಟ್ಟಿಸಿದರು. ತಿರುನಾರಾಯಣಪುರದಲ್ಲಿ ಶ್ರೀರಾಮಾನುಜರ ಸನ್ನಿಧಿಯನ್ನು ಕಟ್ಟಿಸಿದ ಪುಣ್ಯಾತ್ಮರೂ ಇವರೇ.

ದಕ್ಷಿಣದೇಶದ ಯಾತ್ರೆಗೆ ಹೋಗಿದ್ದಾಗ ಇವರಿಗೆ ಮಧುರೆಯ ಅರಸು 'ಮಂತ್ರಿತ್ವ'ವನ್ನು ನೀಡಿ ಕರೆಸಿದನಂತೆ.

ಮೈಸೂರು ಅರಸರ ಹೆಚ್ಚಿಗೆಯನ್ನು ಸ್ಥಿರಪಡಿಸಿದವರಿವರು. ಮಂಡಯ ಸಮುದಾಯದಲ್ಲಿ ಬಹಳ ಪ್ರಖ್ಯಾತರು.

೧೮ನೆಯ ಶತಮಾನ:—ಈ ಶತಮಾನದ ಮುಖ್ಯ ಮಹಾಪುರುಷರು ಪ್ರಧಾನ ತಿರುಮಲರಾವ್ ಮತ್ತು ನಾರಾಯಣರಾವ್ ಎಂಬ ಸಹೋದರರು.

ಪ್ರಧಾನ ಅಪ್ಪಾಜಯ್ಯನವರೂ, ಮಂತ್ರಿ ತಿರುಮಲೈಯ್ಯಂಗಾರ್ಯರೂ ಈ ಶತಮಾನದ ಆದಿಯಲ್ಲೇ ಪರಮಪದಸಿದ್ದರು.

ಕ್ರಿ. ಶ. ೧೭೫೯ರಲ್ಲಿ ಇಮ್ಮಡಿ ಕೃಷ್ಣರಾಜ ಒಡೆಯರವರ ರಾಣಿ ಪ್ರಭುಮಣ್ಣಿಯವರು ಗತಿಸಿದರು. ಆಗ ಪ್ರಧಾನ ಅಪ್ಪಾಜಯ್ಯನವರ ಮೊಮ್ಮಗ ಪ್ರಧಾನ ಗೋವಿಂದರಾಜಯ್ಯನವರು ರಾಜರಿಗೆ ಲಕ್ಷ್ಮಮ್ಮಣ್ಣಿ ಮತ್ತು ದೇವಾಜಮ್ಮಣ್ಣಿಯವರನ್ನು ಮದುವೆ ಮಾಡಿಸಿದರು.

ಕ್ರಿ. ಶ. ೧೭೬೫ರಲ್ಲಿ ಹೈದರನು ಮೈಸೂರು ರಾಜ್ಯಸೂತ್ರವನ್ನು ಕಸಿದುಕೊಂಡದ್ದು ಎಲ್ಲರಿಗೂ ತಿಳಿದ ಅಂಶ. ಕ್ರಿ. ಶ. ೧೭೬೫ರಲ್ಲಿ ಹೈದರನು ಪ್ರಧಾನ ಗೋವಿಂದರಾಜಯ್ಯನವರ ಮನೆತನದ ಆಸ್ತಿಯನ್ನೆಲ್ಲಾ ದೋಚಲು ಯತ್ನಿಸಿ, ಕಡೆಗೆ ಪ್ರಧಾನರನ್ನೇ ಕೊಲ್ಲಿಸಿದನೆಂದೂ ತಿಳಿದು ಬರುತ್ತದೆ.

ಇವರು ತಿರುಮಲರಾವ್ ಮತ್ತು ನಾರಾಯಣರಾವ್ ಎಂಬಿಬ್ಬರು ಸುಕುಮಾರರನ್ನು ಪಡೆದಿದ್ದರು. ಈ ತಿರುಮಲರಾವ್ ನಾರಾಯಣರಾಯರೇ ಮಹಾರಾಣಿ ಲಕ್ಷ್ಮಮ್ಮಣ್ಣಿಯವರಿಗೆ ಪ್ರಧಾನರಾದರು.

ಇಮ್ಮಡಿ ಕೃಷ್ಣರಾಜ ಒಡೆಯರವರ ಕಾಲಾನಂತರ, ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಹೈದರ್ ಮತ್ತು ಟಿಪ್ಪುವಿನ ದರ್ಪವನ್ನು ಮುರಿದು, ಮೈಸೂರು ರಾಜ್ಯವು ಮೈಸೂರು ಒಡೆಯರವರ ಮನೆತನಕ್ಕೇ ಮತ್ತೆ

ಬರಲು, ಮರಾತೆಯವರೊಡನೆಯೂ ಇಂಗ್ಲೀಷರೊಡನೆಯೂ ಸಂಧಾನವನ್ನು ಬಹುವಾಗಿ ನಡೆಸಿದರು.

ಇಂಗ್ಲೀಷಿನವರೊಂದಿಗೆ ಪ್ರಧಾನ್ ತಿರುಮಲರಾವ್ ಮತ್ತು ನಾರಾಯಣರಾಯರು ಸಂಧಾನವನ್ನು ನಡೆಯಿಸಲು ನೇಮಿತರಾದರು. ಈ ಸಂಧಾನದ ಫಲಿತಾಂಶವು ಅನುಕೂಲವಾದಾಗ ಇವರ ಖರ್ಚನ್ನೂ, ವಂಶಪಾರಂಪರ್ಯವಾಗಿ ಮೈಸೂರು ಮಂತ್ರಿಪದವಿಯನ್ನೂ ಇವರಿಗೇ ಕೊಡುವದಾಗಿ ವಾಗ್ದಾನವಾಗಿತ್ತು.

ಇದಕ್ಕಾಗಿ ಪ್ರಧಾನ್ ಸಹೋದರರು ಇಂಗ್ಲೀಷರ ಸ್ನೇಹವನ್ನು ಬೆಳೆಯಿಸಿ, ಅನೇಕ ಕಷ್ಟಪರಂಪರೆಗಳನ್ನನುಭವಿಸಿ, ಕಡೆಗೆ ಕ್ರಿ. ಶ. ೧೭೯೯ ರಲ್ಲಿ ಟಪ್ಪುವು ಇಂಗ್ಲೀಷರಿಂದ ಕೊಲ್ಲಲ್ಪಟ್ಟ ಅನಂತರ ಮೈಸೂರುರಾಜ್ಯವು ಮೈಸೂರು ಒಡೆಯರವರ ಪ್ರಸಿದ್ಧ ವಂಶಕ್ಕೇ ಸೇರಿ ಮುಮ್ಮಡಿಕೃಷ್ಣರಾಜ ಒಡೆಯರವರು ಸಿಂಹಾಸನವನ್ನೇರಿದುದನ್ನು ನೋಡಿ ಆನಂದಿಸಿದ ಚರಿತ್ರೆಯು "The Mysore Pradhans" ಎಂಬ ಪುಸ್ತಕದಲ್ಲಿ ವಿವರವಾಗಿದೆ.

ಕ್ರಿ. ಶ. ೧೭೯೫ ರಲ್ಲಿ ಟಿಪ್ಪುವು ಪ್ರಧಾನ ತಿರುಮಲರಾಯರ ಮತ್ತು ಇತರರ ಸುಮಾರು ೭೦೦ ಸಂಸಾರಗಳನ್ನು ಕೊಲ್ಲಿಸಿ ಪ್ರಧಾನರ ಆಸ್ತಿ ಜಹಗೀರಿಗಳನ್ನೆಲ್ಲಾ ಕಸಿದುಕೊಂಡನೆಂದು ತಿಳಿದುಬರುತ್ತದೆ. ಈ ಭೀಕರ ಕೊಲೆಯು ನಡೆದದ್ದು ನರಕಚತುರ್ದಶಿಯ ದಿವಸ. ಆದುದರಿಂದ ಕೊಲೆಗೆ ಗುರಿಯಾವ ವಂಶದವರು ಈ ಹಬ್ಬವನ್ನು ಈಗಲೂ ಆಚರಿಸುವುದಿಲ್ಲವೆನ್ನುತ್ತಾರೆ.

ಪ್ರಧಾನ ತಿರುಮಲರಾಯರ ಸಾಹಸ, ಸಹಾಯಗಳಿಗೆ ಮೆಚ್ಚಿ ಇಂಗ್ಲೀಷರೇ ಇವರಿಗೆ ಮೈಸೂರು ದಿವಾನ್ ಗಿರಿಯನ್ನು ಕೊಡಲು ಏರ್ಪಡಿಸಿದ್ದರು. ಮಹಾರಾಣಿ ಲಕ್ಷ್ಮಮ್ಮಣ್ಣಿಯವರು ಇದಕ್ಕಾಗಿ ಬಹಳ ಒತ್ತಾಯಪಡಿಸಿದರು. ಆದರೂ ಇಂಗ್ಲೀಷರೇ ಕಾರಣಾಂತರಗಳನ್ನು ಕಲ್ಪಿಸಿಕೊಂಡು, ಕೊಟ್ಟ ಭಾಷೆಗೆ ತಪ್ಪಿ, ಪೂರ್ಣಯ್ಯನೆಂಬವರನ್ನು ದಿವಾನರನ್ನಾಗಿ ನೇಮಿಸಿ, ತಿರುಮಲರಾಯರಿಗೆ ಮಹಾನ್ಯಾಯವನ್ನು ಮಾಡಿ, ಮಹಾರಾಣಿಯವರಿಗೂ ಖೇದವನ್ನುಂಟುಮಾಡಿದರು.

ಪ್ರಧಾನ ಸಹೋದರರಿಗೆ ಇಂಗ್ಲೀಷರಿಂದಲೂ, ಮೈಸೂರು ಖಜಾನೆ ಯಿಂದಲೂ ವೇತನಗಳು ಮಾತ್ರ ಸಲ್ಲುತ್ತಿದ್ದುವು.

೧೯ನೆಯ ಶತಮಾನ :—ಕ್ರಿ. ಶ. ೧೮೧೧ ರಲ್ಲಿ ಪ್ರಧಾನ್ ನಾರಾಯಣರಾಯರು ಮೈಸೂರಿನಲ್ಲೂ, ೧೮೧೫ ರಲ್ಲಿ ಪ್ರಧಾನ ತಿರುಮಲರಾಯರು ಮದ್ರಾಸಿನಲ್ಲೂ ಪರಾಮರ್ಶಿಸಿದರು. ಇವರುಗಳಿಗೆ ಸಲ್ಲುತ್ತಿದ್ದ ವೇತನಗಳೂ ನಿಂತುಹೋದುವು. ಶ್ರೀ|| ಉ| ತಿರುಮಲರಾಯರ ದಹನಸ್ಥಳದ ವಿವರಗಳನ್ನು ಮುಂದಣ ಅಧ್ಯಾಯದಲ್ಲಿ ಕೊಟ್ಟಿದೆ.

ಮಂಡಯದ ಶ್ರೀ ಲಕ್ಷ್ಮೀಜನಾರ್ದನಸ್ವಾಮಿಯವರ ದೇವಸ್ಥಾನದ ಉಪಯೋಗಕ್ಕಾಗಿ ತಿರುಮಲರಾಯರು ಮಂಡಯದಲ್ಲಿ ಒಂದು ಕೊಳ, ಮಂಟಪ, ಮತ್ತು ಒಂದು ತೋಪು ಇವನ್ನು ಕ್ರಿ. ಶ. ೧೮೧೦ ರಲ್ಲಿ ನಿರ್ಮಿಸಿದರು. "ತಿರುಮಲಾಚಾರ್ ತೋಪು, ಕೊಳ" ಎಂದು ಈಗಲೂ ರೂಢಿಯಲ್ಲಿವೆ. ಕೊಳದ ನಾಲ್ಕು ಮೂಲೆಗಳಲ್ಲೂ ಕಲ್ಲಿನಲ್ಲಿ ಕೆತ್ತಲ್ಪಟ್ಟ ನಾಲ್ಕು ಶಾಸನಗಳಿವೆ. ಇವು ಗ್ರಂಥ, ತಿರುನ, ಕನ್ನಡ ಮತ್ತು ನಾಗರ ಅಕ್ಷರಗಳಲ್ಲಿವೆ. ಇವು ಮಂಡಯದ ತಾಲ್ಲೋಕು ೬೩,೬೪,೬೫ ಮತ್ತ ೬೬ನೇ ನಂಬರು ಶಾಸನಗಳಾಗಿ ಸರ್ಕಾರದಿಂದ "ಎಪಿಗ್ರಾಫಿಕಾ ಕರ್ಣಾಟಕ"ದಲ್ಲಿ ಅಚ್ಚಾಗಿವೆ.

ಕೊಳಕ್ಕೆ "ಗೋವಿಂದರಾಜ ಪುಷ್ಕರಿಣಿ" ಎಂದೂ ತೋಪಿಗೆ "ಗೋವಿಂದರಾಜೋದ್ಯಾನ" ವೆಂದೂ ಶಾಸನದಲ್ಲಿ ಹೆಸರುಗಳು ನಮೂದಾಗಿವೆ. ಈ ಶಾಸನಗಳ ನಕಲುಗಳನ್ನು ಬೇರೆ ಪ್ರಕರಣದಲ್ಲಿ ಕೊಟ್ಟಿದೆ. "ಶ್ರೀರಂಗಪಟ್ಟಣದ ತಿರುಮಲೆ ಆನಂದಾಂಪಿಳ್ಳೈ ಗೋವಿಂದರಾಜರ ಕುಮಾರರು ತಿರುಮಲಾಚಾರ್ಯರ ಧರ್ಮ" ಎಂದು ನಮೂದಿದೆ. ಗ್ರಂಥ ಮತ್ತು ತಿರುವ ಅಕ್ಷರಗಳಲ್ಲಿ ಇವರ ಮಂತ್ರಿತ್ವವು ಸೂಚಿತವಾಗಿದೆ.

ಈ ಕೊಳವೂ ಮಂಟಪವೂ ಅಂದಿನಿಂದ ಇಂದಿನವರೆಗೂ ಶ್ರೀ ಲಕ್ಷ್ಮೀ ಜನಾರ್ದನ ಸ್ವಾಮಿಯವರ ರಥೋತ್ಸವದಲ್ಲಿ ಜರುಗುವ ಗಜೇಂದ್ರಮೋಕ್ಷದ ಉತ್ಸವಕ್ಕಾಗಿ ಉಪಯೋಗಿಸಲ್ಪಡುತ್ತಿವೆ.

ಟಿಪ್ಪುವಿನ ಕಾಲಾನಂತರ ಮಂಡಯದ ಇನಾಮತಿಯನ್ನು ಪುನಃ ಸಂಪಾದಿಸಲು ನಮ್ಮವರು ಬಹಳ ಪ್ರಯತ್ನಪಟ್ಟರು. ಆಗ ಮಂಡಯದಲ್ಲಿದ್ದ ವರನ್ನು ಯುಕ್ತಿಯಿಂದ ಒಳಪಡಿಸಿ, ಸ್ಥಳವಾಸಿಗಳಿಗೆ ೩೨ ರೂಪಾಯಿಗಳ ಬೆಲೆಬಾಳುವಷ್ಟು ಅಕ್ಕಿಯನ್ನು ಪ್ರತಿ ತಿಂಗಳಲ್ಲೂ ಕೊಡುವಂತೆ ಮಾಪಾ ಡಾಯಿತು. ಈ ಸ್ಥಳವಾಸದ ಅಕ್ಕಿಯೂ ಈಗ (ಕ್ರಿ. ಶ. ೧೯೫೦) ಬಹಳ ಕಡಿಮೆ ದರ್ಜೆಗೆ ಇಳಿಸಲ್ಪಟ್ಟು ನಡೆದುಬರುತ್ತಿದೆ. ನಮ್ಮ ಮಹಾಜನಗಳ ಪ್ರಯತ್ನವು ನಡೆಯದಿದ್ದರೆ ಈ ಸ್ಥಳವಾಸದ ಅಕ್ಕಿಯೂ ನಿಂತುಹೋಗಿ, ಗೋವಿಂದರಾಜಪುಷ್ಕರಿಣಿಯ ಶಾಸನಗಳೂ ಮರೆಯಾಗಿ, ನಮ್ಮ ಹಿಂದಣ ಚರಿತ್ರೆಯೇ ಅಳಿಸಿಹೋಗುವ ಸಂಭವವು ತೋರಿಬರುತ್ತಿದೆ. ನಮ್ಮವರು : ನವಿ ಮಾಡಿಕೊಂಡದ್ದು ಫಲವಿಲ್ಲದೆ ಗೋವಿಂದರಾಜೋದ್ಯಾನವು ಮಂಡ್ಯದ ಸಕ್ಕರೆ ಕಾರ್ಖಾನೆಯ ಉಪಯೋಗಕ್ಕಾಗಿ ಸರ್ಕಾರದವರಿಂದ ತೆಗೆದುಕೊಳ್ಳ ಲ್ಪಟ್ಟಿತು. ಬದಲಾಗಿ ದೇವಸ್ಥಾನಕ್ಕೆ ಕೊಟ್ಟ ಬೆಲೆಯು ಸಾಲದೆಂದು ನ್ಯಾಯ ಸ್ಥಳದಲ್ಲಿ ನಮ್ಮವರು ಕೆಲ ಮಹನೀಯರು ನಿಂತು ವಾದ ನಡೆಯಿಸಿ ಅಲ್ಪ ಸ್ವಲ್ಪ ಹೆಚ್ಚಾಗಿ ಮೊಬಲಗನ್ನು ಈಗತಾನೇ ಪಡೆದದ್ದಾಯಿತು. ಚರಿತ್ರಾರ್ಹ ವಾದ ತೋಪನ್ನೂ ಕಳೆದುಕೊಂಡದ್ದಾಯಿತು. ಶಾಸನಗಳೂ, ಪುಷ್ಕರಿ ಣಿಯೂ, ಗಜೇಂದ್ರಮೋಕ್ಷದ ಮಂಟಪವೂ ಇವಾದರೂ ಸ್ಥಿರವಾಗಿ ನಿಲ್ಲು ವಂತೆಯೂ, ಸ್ಥಳವಾಸದ ಅಕ್ಕಿಯು ಹೆಚ್ಚಾಗಿ, ಶಾಶ್ವತವಾಗಿ ನಡೆದುಬರು ವಂತೆಯೂ ನಮ್ಮ ಮಹಾಜನಗಳು ಸರ್ಕಾರದವರನ್ನು ಪ್ರಾರ್ಥಿಸಿ ಸ್ಥಿರ ಪಡಿಸಿಕೊಳ್ಳಬೇಕೆಂದು ಪ್ರಾರ್ಥನೆ.

ಮಂಡಯಗ್ರಾಮದ ಪಶ್ಚಿಮದಲ್ಲಿ ಶಿಂಗ್ರೆಯ್ಯಂಗಾರ್ ಕೊಳ ಮತ್ತು ತೋಪು ದೇವಸ್ಥಾನದ ಉಪಯೋಗಕ್ಕಾಗಿ ಬಿಡಲ್ಪಟ್ಟಿದ್ದುವು. ಈ ತೋಪಿನ ಅನೇಕ ಭಾಗವು ಸಹ ಗ್ರಾಮವಿಸ್ತಾರದ ನಾನಾಕಾರ್ಯಗಳಿಗಾಗಿ ಸರ್ಕಾರದವ ರಿಂದ ತೆಗೆದುಕೊಳ್ಳಲ್ಪಟ್ಟು ಹಂಚಿಹರಿದುಹೋದದ್ದಾಯಿತು. ಅಲ್ಪಸ್ವಲ್ಪ ಉಳಿದಿರುವುದೂ ಕೈಬಿಟ್ಟು ಹೋಗಬಹುದಾಗಿದೆ. ಕೊಳದ ಬಳಿಯ ಮಂಟ ಪವೂ ದೇವಸ್ಥಾನಕ್ಕಾಗಿ ನಮ್ಮವರಿಂದಲೇ ಉಳಿಸಿಕೊಂಡುಬಂದಿರುವುದಾಗಿದೆ. ಶ್ರೀಮದಣ್ಣಾದಿ ಬೂದನೂರು ಆನಂದಾಳ್ವಾರ್ ಸ್ವಾಮಿಗಳವರು ಶ್ರೀ ಜನಾ

ದಾನಸ್ವಾಮಿಯವರ ರಘೋತ್ತಮಕೈಂಕರ್ಯವನ್ನು ಈ ಕೊಳ. ನುಂಟಪವಲ್ಲಿ ಪ್ರತಿ ಸಂವತ್ಸರದಲ್ಲಿಯೂ ನಡೆಯಿಸಿಕೊಂಡು ಬರುತ್ತಲಿವ್ವಾರೆ. ಈ ಗ್ರಂಥವನ್ನು ಬರೆದ ಮಂಡಯಂ ಜಟಾವಲ್ಲಭ ತಿಂಗ್ರೈಯ್ಯಂಗಾರ್ಯರ ಹಿರಿಯರು ಈ ಕೊಳವನ್ನೂ ರಾಮಾನುಜಪುರದ ಕೊಳವನ್ನೂ ಮೇಲುಕೋಟಿಯಲ್ಲಿ ಒಂದು ಕೊಳವನ್ನೂ ಕಟ್ಟಿಸಿರುವುದೆಂದು ತೋರುತ್ತದೆ. ಈ ಕೊಳ, ನುಂಟಪ, ಉಳಿದಿರುವ ತೋಪಿನ ಭಾಗವನ್ನಾದರೂ ದೇವಸ್ಥಾನಕ್ಕಾಗಿ ಶಾಶ್ವತವಾಗಿನಿಲ್ಲಿಸಿಕೊಳ್ಳಲು ಪ್ರಯತ್ನಿಸಬೇಕಾದುದು ನಮ್ಮೂರ ಹಿರಿಯರ ಕರ್ತವ್ಯವಾಗಿದೆ. ಈ ತಿಂಗ್ರೈಯ್ಯಂಗಾರ್ ಕೊಳ, ತೋಪುಗಳ ವಿಚಾರವು ಬಹಳ ಹಿಂದಣ ಶತಮಾನಗಳ ವಿಚಾರವಾದರೂ ದೇವಸ್ಥಾನದ ಸ್ಥಿತ್ಯುಗಳಾನುಪರಿಂದ ಈ ಶತಮಾನದ ಪರದಿಯೊಡನೆಯೇ ಒಂದೆಡೆಯಲ್ಲಿ ನಿರೂಪಿಸಿದೆ.

ಪ್ರಧಾನ ನಾರಾಯಣರಾಯರ ಮಕ್ಕಳು ತಿರುಮಲರಾಯರು ತಿರುಜನಾಪಳ್ಳಿ ಕಲೆಕ್ಟರ್ ಆಫೀಸಿನಲ್ಲಿ ಹೆಡ್ ಶಿರಸ್ತೇದಾರರಾಗಿದ್ದರು. ಇವರು ಕ್ರಿ. ಶ. ೧೮೧೩ರಲ್ಲಿ ತಮ್ಮ ಕೆಲಸಕ್ಕೆ ರಾಜೀನಾಮೆ ಕೊಟ್ಟು, ಮಮ್ರಾಸಿಗೆ ಸೇರಿದರು. ಮುಮ್ಮಡಿ ಕೃಷ್ಣರಾಜ ಒಡೆಯರವರಿಗೂ ಮಮ್ರಾಸ್ ಸರ್ಕಾರಕ್ಕೂ ಮೈಸೂರುರಾಜ್ಯದ ಆಡಳಿತ ಶ್ರೇಷ್ಠತೆಯ ವಿಚಾರದಲ್ಲಿ ಸಮಭಿಪ್ರಾಯಗಳು ನಂಬಿಕೆಯೂ ಬೆಳೆಯುವಂತೆ ಬಹಳ ಕೆಲಸ ಮಾಡಿದರು. ಕ್ರಿ. ಶ. ೧೮೧೮ರಲ್ಲಿ ಮಹಾರಾಜರು ಈ ತಿರುಮಲರಾಯರಿಗೆ ಮೈಸೂರ್ ದಿವಾನ್ ಪದವಿಯನ್ನು ಕೊಟ್ಟು ಕರೆಯಿಸಿದರು. ಆದರೆ ದುರದೃಷ್ಟದಿಂದ ಇವರು ದಾರಿಯಲ್ಲಿಯೇ ವಿಷಪ್ರಾಶನದಿಂದ ಕೊಲ್ಲಲ್ಪಟ್ಟರು.

ಪ್ರಧಾನ ಸಹೋದರರ ವಂಶವರು ಮುಮ್ರಾಸಿನಲ್ಲೂ, ಮೈಸೂರು ಪ್ರಾಂತದಲ್ಲೂ ನಮ್ಮ ಸಮುದಾಯದ ಕುಲವನ್ನು ಪ್ರಕಾಶಪಡಿಸಿದ್ದಾರೆ.

ಇದೇ ಶತಮಾನದ ಆದಿಯಲ್ಲಿ ನಮ್ಮ ಸಮುದಾಯದ ಮತ್ತೊಬ್ಬ ಸ್ವಾಮಿಗಳ ಪ್ರಾಬಲ್ಯ. ಇವರೇ ಶ್ರೀ|| ಉ|| ಜೋಸ್ಯಶಿಂಗ್ಯಾಚಾರ್ಯಸ್ವಾಮಿಗಳು ಮಹಾರಾಜರಿಂದ ಬಹುಮಂದಿ ಹಿರಿಯರಿಗೆ ವೃತ್ತಿಗಳನ್ನೂ ಗೌರವನ್ನು ಸಂಪಾದಿಸಿ ಕೊಟ್ಟರು. ನವಾಗ್ರಹಾರವನ್ನು (ಒಂಭತ್ತು ಮನೆಯ

ಅಗ್ರಹಾರ) ಮೈಸೂರಿನಲ್ಲಿ ನಮ್ಮವರಿಗಾಗಿ ರಾಜರಿಂದ ಕಟ್ಟಿಸಿ ಕೊಡಿಸಿ ಖ್ಯಾತಿಯನ್ನು ಗಳಿಸಿದರು. ಈ ಅಗ್ರಹಾರವು 'ಬುದ್ಧಿವಂತರ ತವರು ಮನೆ' ಎಂದು ಹೆಸರು ಪಡೆದಿದ್ದುದು ಅನೇಕರಿಗೆ ಜ್ಞಾಪಕವಿದೆ. ಇಲ್ಲಿ ವೈರಮುಡಿ ಮಂಟಪೋತ್ಸವನ್ನು ಏರ್ಪಡಿಸಿದವರಿವರು. ಇವರು ರಾಜರಿಂದ ಶ್ರೀಯದು ಗಿರಿಯ ಯತಿರಾಜ ಮಠಕ್ಕೆ ಅನೇಕ ನ್ಯಾಯವಾದ ಸನ್ಮಾನಗಳನ್ನು ಗಳಿಸಲು ಯತ್ನಿಸಿದ್ದೂ, ಕಾರಣಾಂತರಗಳಿಂದ ಇದು ತಪ್ಪಿಹೋದದ್ದೂ ತಿಳಿದೇ ಇದೆ.

ಈ ಶತಮಾನದ ಮಧ್ಯ ಮತ್ತು ಅಂತ್ಯಭಾಗಗಳಲ್ಲಿ ಶ್ರಿ|| ಉ| ವಿದ್ವಾನ್ ನಾಟಂಪಳ್ಳಿ ಅನಂವಾಳ್ವಾರ್ ಸ್ವಾಮಿಗಳವರ (ಕ್ರಿ. ಶ. ೧೮೨೩ ೧೮೭೩) ಪಾಂಡಿತ್ಯವೂ, ಪ್ರತಿಭೆಯೂ ಜಗದ್ವಿಖ್ಯಾತವಾಗಿದ್ದುವು. "ವೇದಾ ್ತ ವಾದಾವಳೀ", "ನ್ಯಾಯಭಾಸ್ಕರ" ಇತ್ಯಾದಿ ಉದ್ಗ್ರಂಥಗಳನ್ನು ರಚಿಸಿದ ಮಹಾತ್ಮರಿವರು. ಕೌಶಿಕ ಗೋತ್ರದ ಶ್ರಿ|| ಉ|| ಮಹಾಭಾಷ್ಯಂ ಶಿಂಗ್ಲಾಚಾರ್ಯ ಎಂಬ ವಿದ್ವದ್ವರೇಣ್ಯರ ಎರಡನೆಯ ಕುಮಾರರು. ಭಾರದ್ವಾಜ ಗೋತ್ರಕ್ಕೆ ಸ್ವೀಕೃತರಾದರು. ತಿರುನಾರಾಯಣ ಪುರದಲ್ಲಿ ವಾಸ. ಶ್ರಿ|| ಉ|| ಮಹಾಭಾಷ್ಯಂ ಶಿಂಗ್ಲಾಚಾರ್ಯರೇ ನಾಟಂಪಳ್ಳಿ ಶಿಂಗ್ಲಾಚಾರ್ಯಸ್ವಾಮಿಗಳು. ಮುಮ್ಮಡಿ ಕೃಷ್ಣರಾಜ ಒಡೆಯರವರ ಆಸ್ಥಾನದಲ್ಲಿ ಅನನ್ತಾಳ್ವಾರ್ ಸ್ವಾಮಿಗಳಿಗೆ 'ಪಂಡಿತ ಮಂಡಲೀ ಸಾರ್ವಭೌಮ'ರೆಂಬ ಬಿರುದು ಪ್ರಖ್ಯಾತವಾಗಿತ್ತು. ವಾದದಲ್ಲಿ ಇವರನ್ನು ಗೆಲ್ಲುವ ಪಂಡಿತರಾರೂ ಇರಲಿಲ್ಲ. ಇವರ ಗ್ರಂಥಗಳ ಮಾಹಾತ್ಮ್ಯವೂ, ದಿವ್ಯತೇಜಃಪ್ರಭಾವವೂ, ಕಲ್ಯಾಣಗುಣಸಂಪತ್ತಿಯೂ, ಅನ್ಯಾದೃಶ ಪ್ರತಿಭಾ ವಿಶೇಷವೂ, ದಿಗ್ವಿಜಯ ವೈಭವವೂ ಸರ್ವರಿಗೂ ಚಿತ್ತಾಕರ್ಷಕವಾಗಿ ಇದ್ದುವು. ಇವರು ಶೇಷಾವತಾರ ರೂಪಿಗಳೆಂದು ಪಂಡಿತರೆಲ್ಲರೂ ಹೊಗಳುತ್ತಿದ್ದರು.

೧೯ ನೆಯ ಶತಮಾನದ ಉತ್ತರಾರ್ಧ ಮತ್ತು ೨೦ ನೆಯ ಶತಮಾನದ ಪೂರ್ವಾರ್ಧ

ಈ ಕಾಲವು ನಮ್ಮಲ್ಲಿ ಎಲ್ಲರಿಗೂ ತಕ್ಕಮಟ್ಟಿಗೆ ಜ್ಞಾಪಕದಲ್ಲಿರಬಹುದಾಗಿದೆ. ಈಚಿನ ಹಿರಿಯರುಗಳನೇಕರ ಜೀವನದ ಚರಿತ್ರಾರ್ಹವಾದ ವಿಷಯಗಳು ಅನೇಕವಾಗಿವೆ. ಬಹಳ ವಿಸ್ತಾರವಾಗುವುದು. ಆಲ್ಲದೆ ಜ್ಞಾಪಕದ ತಪ್ಪಿನಿಂದ

ಅಕಸ್ಮಾತ್ತಾಗಿ ಕೆಲವು ಹಿರಿಯರ ಚರಿತ್ರೆಯ ವರದಿಯೂ ಬಿಟ್ಟುಹೋದಲ್ಲಿ ಬರೆಪನನೂ ಓದುವವರೂ ವ್ಯಸನಪಡಬೇಕಾಗುವುದು. ಈ ಕಾಲದಲ್ಲಿ ಏನಿಲ್ಲವೆಂದರೂ ಐವತ್ತು, ಅರವತ್ತು ಮಹನೀಯರು, ಸ್ತ್ರೀಯರು, ಪುರುಷರು ಸಹ ನಮ್ಮ ಸಮುದಾಯದ ಹೆಸರನ್ನು ವ್ಯಾಪಿಗೊಳಿಸಿದ್ದಾರೆ. ಈ ಒಂದು ನೂರು ವರ್ಷಗಳಲ್ಲಿ ಸುಮಾರಿನ ತಲೆಮಾರಿನ ಪರಾಜದಿಸಿರುವ ಹಿರಿಯ ಮಹನೀಯರ ವಿಸ್ತಾರವಾದ ವಿಷಯಗಳನ್ನು ಅವರವರ ಕುಟುಂಬದವರು ದಯೆಯಿಟ್ಟು ಬರೆದು ಕಳುಹಿಸಿದರೆ ಮಹೋಪಕಾರವಾಗುವುದು. ಮುಂದಣವರ ಉಪಯೋಗಕ್ಕಾಗಿ ಒರೆದು ಪ್ರಚಾರಮಾಡುತ್ತದು ಶ್ರೇಯಸ್ಕರವೂ ಆಗಿರುವುದು.

ಪ್ರಕರಣ ೬

ಶ್ರೀಯದುಗಿರಿ ಯತಿರಾಜ ಮಠದ ಸ್ವಾಮಿಗಳು

ಶ್ರೀಯದುಗಿರಿ ಯತಿರಾಜಮಠದ ಪೀಠವನ್ನು ಬಹುಕಾಲದಿಂದ ನಮ್ಮ ಸಮುದಾಯದವರೇ ಅಲಂಕರಿಸಿದ್ದರು. ಮಠದ ಆಡಳಿತಗಳು ನಮ್ಮ ಮಹಾಜನಂಗಳ ಕೈಯಲ್ಲೇ ನಡೆದುಬಂದಿದೆ.

ಶ್ರೀರಾಮಾನುಜಾಚಾರ್ಯರು ಈ ಮಠವನ್ನು ಸ್ಥಾಪಿಸಿ ತಾವೇ ಸಾಕ್ಷಾತ್ತಾಗಿ ಈ ದಿವ್ಯಪೀಠವನ್ನು ಅಲಂಕರಿಸಿ ಅನುಗ್ರಹಿಸಿದ್ದು ಲೋಕವಿಖ್ಯಾತವಾಗಿದೆ. ಅಂದಿನಿಂದ ಇಂದಿನವರೆಗೆ ಈ ಮಠದ ಜೀಯರ್ ಸ್ವಾಮಿಗಳವರ ಪರಂಪರೆಯೂ, ಅವರವರ ಸರಿಯಾದ ಕಾಲಗಳೂ, ತನಿರ್ಯಗಳೂ, ಆಯಾ ಸ್ವಾಮಿಗಳು ಮಾಡಿದ್ದಕಾರ್ಯಗಳೂ ಬರೆದಿರುವ ಗ್ರಂಥಗಳೂ ಯಾವುದೊಂದೂ ದೊರೆಯದೆ ಇರುವುದು ಬಹಳ ಶೋಚನೀಯವಾಗಿದೆ.

ಶ್ರೀ ಮಠದ ಸ್ವಾಮಿಗಳ ಭಾವಚಿತ್ರಗಳು ಕೆಲವು ದೊರೆಯುತ್ತವೆ. ಇವುಗಳನ್ನು ಸಂಗ್ರಹಿಸಿ ವಿಶಾಲಪಡಿಸಿ, ಕಾಲ ಮತ್ತು ತನಿರ್ಯಗಳೊಡನೆ ಶ್ರೀ ಮಠದಲ್ಲಿ ದರ್ಶನಕ್ಕಾಗಿ ಏರ್ಪಡಿಸುವ ಪವಿತ್ರ ಕಾರ್ಯವನ್ನು ಶ್ರೀ ಮಠವು ಕೈಕೊಳ್ಳಬೇಕಾಗಿದೆ.

ಶ್ರೀರಾಮಾನುಜಾಚಾರ್ಯರಿಂದ ಈಚೆಗೆ ಆ ತರುಣದಲ್ಲಿ (೧) ಶ್ರೀ ॥ ಉ॥ ದೇಶಾದ್ರಿಕೇಳ್ವಿ ತಿರುನಾರಾಯಣ ರಾಮಾನುಜಜೀಯರ್ ಸ್ವಾಮಿಗಳು, (೨) ಶ್ರೀ ॥ ಉ ॥ ತಿರುನಾರಾಯಣ ಜೀಯರ್ ಸ್ವಾಮಿಗಳು (ಕ್ರಿ. ಶ. ೧೫೦೦). (೩) ಶ್ರೀ॥ ಉ॥ ಯತಿರಾಜ ಜೀಯರ್ ಸ್ವಾವಿಗಳು, (೪) ಶ್ರೀ॥ ಉ॥ ಯದುಗರಿ ನಾರಾಯಣಜೀಯರ್ ಸ್ವಾಮಿಗಳು (ಕ್ರಿ. ಶ. ೧೪೫೦) ಈ ತಿರುನಾಮಗಳುಮಾತ್ರ ತಿಳಿದಿವೆ ಇನ್ನು ಕೆಲವು ತನಿರ್ಯೆಗಳು ದೊರೆತಿರುವುವು.. ಯಾವ ಸ್ವಾಮಿಗಳೆಂಬುದು ಗೊತ್ತಾಗಿಲ್ಲ.

ಕೆಲವು ಜೀಯರ್ ಸ್ವಾಮಿಗಳ ವಿಷಯವಾಗಿ ತಿಳಿದುಬಂದ ಬಿಡುವಾದ ಅಂಶಗಳನ್ನು ಈ ಕೆಳಗೆ ನಿರೂಪಿಸಿದೆ.

ಶ್ರೀ॥ ಉ॥ ದೇಶಾದ್ರಿ ಕೇಳ್ವಿ ತಿರುನಾರಾಯಣ ರಾಮಾನುಜ ಜೀಯರ್ ಸ್ವಾಮಿಗಳು

ಶ್ರೀರಾಮಾನುಜಾಚಾರ್ಯರವರು ಮೇಲು ಕೋಟಿಗೆ ಶಾಲೀವಾಹನ ಶಕ ೧೦೩೦ ಕಳೆದ ಬಹುಧಾನ್ಯ ಸಂವತ್ಸರದ ಪುಷ್ಯಶುದ್ಧ ೧೪ ಗುರುವಾರ ಪುನರ್ವಸೂ ನಕ್ಷತ್ರದಲ್ಲಿ ಬಿಜಯಮಾಡಿ, ಹುತ್ತವನ್ನು ಕರಗಿಸಿ, ಶ್ರೀ ನಾರಾಯಣಸ್ವಾಮಿಯವರನ್ನು ದರ್ಶನಮಾಡಿ ತಿರುನಾರಾಯಣಪುರವನ್ನು ಸ್ಥಾಪಿಸಿದ್ದು ಲೋಕವಿಖ್ಯಾತವಾದ ವಿಷಯ. ಶ್ರೀ ರಾಮಾನುಜಾಚಾರ್ಯರವರು ಶ್ರೀ ಯದುಗಿರಿ ಯತಿರಾಜಮಠವನ್ನು ಕಟ್ಟಿಸಿ ಶ್ರೀ ಸೀತನನ್ನು ಅಲಂಕರಿಸಿದ್ದು ಶ್ರೀ ರಂಗನಾಥಸ್ವಾಮಿಯ ಆಜ್ಞೆಯಂತೆ ಶ್ರೀರಂಗಕ್ಕೆತಿರುಗಿ ಬಿಜಯಮಾಡುತ್ತಿರುವಾಗ, ಶ್ರೀ ಮಠದ ಆಶ್ರಮಪಟ್ಟವನ್ನು ದೇವಸ್ಥಾನಗಳ ವಿಚಾರಣೆಯಲ್ಲಿದ್ದ ಶ್ರೀ' ಉ॥ ದೇಶಾದ್ರಿಕೇಳ್ವಿ ತಿರುನಾರಾಯಣ ಜೀಯರ್ ಸ್ವಾಮಿಗಳಿಗೆ ವಹಿಸಿದರು. ಆಲ್ಲದೆ "ಐವತ್ತಿಬ್ಬರು" ಶಿಷ್ಯರಿಗೂ ಕರ್ತವ್ಯಗಳನ್ನೂ ನಿರ್ಣಯಿಸಿದರು. ಶ್ರೀರಾಮಾನುಜ ಮುದ್ರೆ ಉಂಗರವನ್ನು ಅನುಗ್ರಹಿಸಿ ದೇವಸ್ಥಾನಗಳ ಸಕಲ ಮರ್ಯಾದೆಗಳನ್ನೂ, ಕಾರ್ಯಭಾರವನ್ನೂ ಶ್ರೀ॥ಉ॥ ತಿರುನಾರಾಯಣ ಜೀಯರ್ ಸ್ವಾಮಿಗಳಿಗೆ ವಹಿಸಿದರು. ಈ ಸ್ವಾಮಿಗಳು ಸುಮಾರು ೩೬ ವರ್ಷಗಳ ಕಾಲ ಆಶ್ರಮವನ್ನು ಅಲಂಕರಿಸಿ, ಶ್ರೀ ತಿರುನಾರಾಯಣ

ಸ್ವಾಮಿಯ ಸಕಲವಿಧ ಕೈಂಕರ್ಯಗಳನ್ನೂ ನಡೆಯಿಸಿಕೊಂಡು ಬಂದರು. ತಮಗೆ ಪರಮಪದಕಾಲ ಪ್ರಾಪ್ತಿಯಾಹುದನ್ನು ತಿಳಿದು, ತಮ್ಮ ಶಿಷ್ಯರಾದ ಶ್ರೀ॥ಉ॥ ತಿರುನಾರಾಯಣಜೀಯರ್ ಸ್ವಾಮಿಗಳಿಗೆ ಪಟ್ಟವನ್ನು ಕೊಟ್ಟು, ರಾಮಾನುಜ ಮುದ್ರೆ ವುಂಗರವನ್ನು ಅನುಗ್ರಹಿಸಿ ಸಿದ್ಧಾರ್ಥಿಸಂವತ್ಸರದ (ಕ್ರಿ. ಶ. ೧೧೩೯) ಚೈತ್ರಬಹುಳದಲ್ಲಿ ಪರಮಪದಸಿದರು.

ಶ್ರೀ॥ ಉ॥ ತಿರುನಾರಾಯಣ ಜೀಯರ್ ಸ್ವಾಮಿಗಳು

ಶ್ರೀ॥ ಉ॥ ತಿರುನಾರಾಯಣ ಜೀಯರ್ ಸ್ವಾಮಿಗಳು ಶ್ರೀ ಮಠದ ಪೀಠವನ್ನಲಂಕರಿಸಿ ದೇವಸ್ಥಾನಗಳ ಸಕಲ ಕೈಂಕರ್ಯಗಳನ್ನೂ ಸುಮಾರು ೪೮ ವರುಷಗಳಕಾಲ ನಿರ್ವಹಿಸಿ ತಮ್ಮ ಶಿಷ್ಯರಾದ ಶ್ರೀ॥ ಉ॥ ಶ್ರೀಯತಿರಾಜ ಜೀಯರ್ ಸ್ವಾಮಿಗಳಿಗೆ ಪಟ್ಟವನ್ನು ಕಟ್ಟಿ ಶಾ. ಶಕ. ೧೦೦೯ ಪ್ರಭವ ಸಂವತ್ಸರ (ಕ್ರಿ. ಶ. ೧೧೮೬) ಪುಷ್ಯಶುದ್ಧ ಪ್ರಥಮಾತಿಥಿಯಲ್ಲಿ ಪರಮಪದ ವನ್ನೈದಿದರು. ಇವರ ಕಾಲದಲ್ಲಿ (ಕ್ರಿ. ಶ. ೧೧೫೫ ರಲ್ಲಿ) ಯಾದವನಾರಾಯಣ ಚತುರ್ವೇದಮಂಗ್ಲಲದ ಮಹಾಜನಗಳು ತಿರುನಾರಾಯಣ ಸ್ವಾಮಿಗೆ ನರಸಿಂಹದೇವರಾಯನ ಆಳಿಕೆಯಲ್ಲಿ ಕೆಲವು ಗ್ರಾಮ ಭೂಮಿಗಳನ್ನು ಕೊಟ್ಟು ಶಿಲಾಶಾಸನವನ್ನು ಸ್ಥಾಪಿಸಿದರು.

ಶ್ರೀ॥ ಉ॥ ಯತಿರಾಜ ಜೀಯರ್ ಸ್ವಾಮಿಗಳು

ಈ ಜೀಯರ್ ಸ್ವಾಮಿಗಳು ಶ್ರೀ ತಿರುನಾರಾಯಣ ಸ್ವಾಮಿಯವರ ದಿವ್ಯ ಕೈಂಕರ್ಯಗಳನ್ನು ಸುಮಾರು ೩೫ ವರುಷಗಳಕಾಲ ನಡೆಯಿಸಿ ಶ್ರೀ ಯದುಗಿರಿ ನಾರಾಯಣ ಜೀಯರ್ ಸ್ವಾಮಿಗಳವರಿಗೆ ಶ್ರೀ ಮತದ ಪಟ್ಟವನ್ನು ಅನುಗ್ರಹಿಸಿ ತಾವು ಪರಮಪದಿಸಿದರು. ಇವರ ಕಾಲದಲ್ಲಿ ತಿರುನಾರಾಯಣಸ್ವಾಮಿಗೆ ಭೂದಾನವನ್ನು ಪಡೆದ ಶಾಸನವಿದೆ.

ಶ್ರೀ॥ ಉ॥ ಯದುಗಿರಿ ನಾರಾಯಣ ಜೀಯರ್ ಸ್ವಾಮಿಗಳು

ಈ ಸ್ವಾಮಿಗಳವರು ಎಷ್ಟು ವರ್ಷಗಳು ಪೀಠವನ್ನು ಅಲಂಕರಿಸಿದ್ದರೋ ತಿಳಿಯದು. ಇಲ್ಲಿಂದ ಮುಂದೆ ಸುಮಾರು ಮೂರು ಶತಮಾನಗಳ ಅಂತರದ ಪಟ್ಟಗಳ ವಿವರವು ಸರಿಯಾಗಿ ದೊರೆತಿಲ್ಲ.

ಶ್ರೀ॥ ಉ॥ ರಾಮಾನುಜಜೀಯರ್ ಸ್ವಾಮಿಗಳು
(ಶಾ. ಶ. ೧೩೮೦, ಕ್ರಿ. ಶ. ೧೪೫೮)

ಶಾ. ಶ. ೧೩೮೦, ಕ್ರಿ. ಶ. ೧೪೫೮ ರಲ್ಲಿ ನಾಗಮಂಗಳಾಧಿಪತಿ ತಿಮ್ಮಣ್ಣ ದಂಡನಾಯಕರು ಮೇಲುಕೋಟೆಯನ್ನು ಜೀರ್ಣೋದ್ಧಾರ ಮಾಡಿ, ರಾಮಾನುಜಕೂಟವನ್ನು ಸ್ಥಾಪಿಸಿ ಈ ರಾಮಾನುಜ ಜೀಯರ್ ಸ್ವಾಮಿಗಳಿಗೆ ಸರ್ವಸ್ವಾತಂತ್ರ್ಯವನ್ನು ವಹಿಸಿ ಕೊಟ್ಟರೆಂದು ಶ್ರೀರಂಗಪಟ್ಟಣದ ತಾಲ್ಲೂಕು ಆಫೀಸಿನ ನಂಬರು ಶಾಸನದಿಂದ ತಿಳಿಯಬರುತ್ತದೆ.

ಶ್ರೀ॥ ಉ॥ ವೇದಾನ್ತಿ ರಾಮಾನುಜ ಮುನಿಗಳು

ಶ್ರೀ॥ ಉ॥ ವೇದಾನ್ತಿ ರಾಮಾನುಜ ಮುನಿಗಳು ತಮ್ಮ ಶಿಷ್ಯರಾದ ಶ್ರೀ॥ ಉ॥ ಅಪ್ಪಯಾಚಾರ್ಯ ಸ್ವಾಮಿಗಳ ಸಂಗಡ ಬಂದು, ಮೂರು ಮಕ್ಕಳನ್ನು ಬಿಟ್ಟು ಕ್ರಿ. ಶ. ೧೬ನೇ ಶತಮಾನದಲ್ಲಿ ಪೀಠವನ್ನಲಂಕರಿಸಿ ಶಿಷ್ಯವರ್ಗವನ್ನು ಅನುಗ್ರಹಿಸಿದರು. ಇವರು ಲೋಹಿತ ಗೋತ್ರದವರು. ವೃಷಭ ಮಾಸ ಪುಷ್ಯನಕ್ಷತ್ರದಲ್ಲಿ ಜನನ. ಇವರು ರಾಮಾನುಜಪುರದಲ್ಲಿ ನಮ್ಮವರ ಕೂಟಕ್ಕೆ ಸೇರಿದವರೆಂಬುದನ್ನು ಹಿಂದೆಯೇ ನಿರೂಪಿಸಿದೆ. ಹಿರಿಯ ವಿದ್ವಾಂಸರು. ಇವರಿಗೆ ವಿಜಯನಗದ ರಾಜರೂ ನಂದ್ಯಾಲದ ಅರಸುಗಳೂ ತಿರುನಾರಾಯಣಪುರದ ದೇವಸ್ಥಾನಗಳ ಸಕಲವಾದ ಮರ್ಯಾದೆಗಳನ್ನೂ ಅಧಿಕಾರಗಳನ್ನೂ ಕೊಟ್ಟಿದ್ದರು. ದೇವರ ಕೈಂಕರ್ಯ ಮತ್ತು ರಾಮಾನುಜ ಕೂಟವನ್ನು ನಡೆಯಿಸುವುದಕ್ಕಾಗಿ ೧೫೦೦ ವರಹಗಳ ಉತ್ಪತ್ತಿಯುಳ್ಳ ಗ್ರಾಮಗಳನ್ನು ಕೊಟ್ಟು ಶಾ ಶ. ೧೪೭೭ ರಲ್ಲಿ (ಕ್ರಿ. ಶ. ೧೫೫೪) ಶಿಲಾಶಾಸನವನ್ನು ಹಾಕಿರುವರು. ಈ ಶಾಸನವು ತಿರುನಾರಾಯಣಪುರದ ಶ್ರೀ ನಾರಾಯಣಸ್ವಾಮಿಯವರ ದೇವಸ್ಥಾನದ ರಂಗಮಂಟಪದ ದಕ್ಷಿಣದ ಕಡೆ ಹೊರ ಭಿತ್ತಿಯಲ್ಲಿದೆ. ಶ್ರೀ॥ ಉ॥ ಕನ್ನಾಡ್ಡೈ ಅಣ್ಣನವರ ವಂಶಸ್ಥರಾದ **ಶ್ರೀ॥ ಉ॥ ವಾಥೂಲ ವರದಾಚಾರ್ಯರು** ಶ್ರೀ॥ ಉ॥ ವೇದಾನ್ತಿ ರಾಮಾನುಜ ಜೀಯರ್ ಸ್ವಾಮಿಗಳಿಗೆ ಆಚಾರ್ಯರೆಂದು ಪ್ರತೀತಿ.

ಈ ಸ್ವಾಮಿಗಳ ತನಿಯನ್:—

ಶ್ರೀ ಮಲ್ಲಕ್ಷ್ಮಣ ಯೋಗೀನ್ದ್ರ, ವಾಥೂಲ ವರದಾರ್ಯಯೋಃ |
ಕೃಪಾಸುಪಾತ್ರಂ ವೇದಾನ್ತ ರಾಮಾನುಜಮುನಿಂ ಭಜೇ ॥

ರಾಮಾನುಜಪುರದ ಪ್ರತಿಷ್ಠಾಪಕರಾದ ಶ್ರೀ॥ ಉ॥ ಅಪ್ಪಯಾಚಾರ್ಯರಿಗೆ ಶ್ರೀ॥ ಉ॥ ವೇದಾನ್ತ ರಾಮಾನುಜಮುನಿಗಳು ವಿದ್ಯಾಗುರುಗಳೆಂದು ಹಿಂದೆಯೇ ನಿರೂಪಿತವಾಗಿದೆ.

ಇಲ್ಲಿಂದ ಮುಂದೆಯೂ ಸುಮಾರು ಮೂರು ಶತಮಾನಗಳ ಅಂತರದ ಪಟ್ಟಗಳ ವಿವರವು ಸರಿಯಾಗಿ ದೊರೆತಿಲ್ಲ. ಶ್ರೀ॥ ಉ॥ ವೇದಾನ್ತ ರಾಮಾನುಜಮುನಿಗಳಿಂದೀಚೆಗೆ ಆರು ಪೀಠಗಳು ಮಂಡಯಂ ಶ್ರೀ ವೈಷ್ಣವ ಮಹಾಜನಗಳಿಂದ ಅಲಂಕರಿಸಲ್ಪಟ್ಟಿತ್ತೆಂದು ಪರಂಪರೆಯಾಗಿ ತಿಳಿದುಬಂದಿದೆ.

ಶ್ರೀ॥ ಉ॥ ಕುಣಿಗಲ್ ಸ್ವಾಮಿಗಳು (ಬಹುಕುಟುಂಬಿ ಸ್ವಾಮಿಗಳು)

ಈ ಸ್ವಾಮಿಗಳು ತಿರುನಾರಾಯಣಪುರದಲ್ಲಿ ಪರಮಪದಿಸಿದ್ದು ಶಾ. ಶ. ೧೭೪೫ (ಕ್ರಿ. ಶ. ೧೮೨೩) ಚಿತ್ರಭಾನು ಸಂವತ್ಸರವೆಂದು ಮಾತ್ರ ತಿಳಿದಿದೆ. ಈ ಸ್ವಾಮಿಗಳ ಬೃಂದಾವನವು ತಿರುನಾರಾಯಣಪುರದಲ್ಲಿದೆ.

ಈ ಸ್ವಾಮಿಗಳ ತನಿಯನ್:—

ಶ್ರೀ ಸಂಪತ್ಕೃತ ಸಂಯಮಿಾನ್ದ್ರ ಚರಣ ದ್ವಂದ್ವಾಶ್ರಯಂ ಸದ್ಗುಣಂ।
ಶ್ರೀಮನ್ತಂ ಗುರು ಸಾರ್ವಭೌಮ ಮನಘಂ ವೇದಾನ್ತ ಯುಗ್ಮಾರ್ಥದಂ॥
ಶ್ರೀಮದ್ಯಾದವ ಶೈಲ ನಾಥಯತಿರಾಟ್ ಕೈಂಕರ್ಯನಿಷ್ಠಂ ಸದಾ।
ಶ್ರೀ ನಾರಾಯಣ ಸಂಯಮಿಾನ್ದ್ರ ಮತುಲೋದಾರಸ್ವಭಾವಂ ಭಜೆ॥

ಶ್ರೀ॥ ಉ॥ ತೊಂಡನೂರು ಪ್ರತಿವಾದಿ ಭಯಂಕರಂ ಶಿಂಗ್ರೆಯ್ಯಂಗಾರ್ ಸ್ವಾಮಿಗಳು

ಶ್ರೀ॥ ಉ॥ ಬಹುಕುಟುಂಬಿ ಸ್ವಾಮಿಗಳ ಅನಂತರ ಶ್ರೀ ಪೀಠವನ್ನಲಂಕರಿಸಿ ಸುಮಾರು ೧೮ ವರ್ಷಗಳಕಾಲ ಕೈಂಕರ್ಯಗಳನ್ನು ನಡೆಸಿದರು. ಜನನ ಕನ್ಯಾಮಾಸ ಸ್ವಾತಿನಕ್ಷತ್ರ. ಇವರು ಶಾ. ಶ. ೧೭೪೫ರಲ್ಲಿ ಆಶ್ರಮ ಪಟ್ಟವನ್ನು ಅಂಗೀಕರಿಸಿದರು. ಶ್ರೀ ಸ್ವಾಮಿಗಳವರು ತಮಗೆ ಪರಮಪದಿಸುವ ಕಾಲವು ಸನ್ನಿಹಿತವಾದುದನ್ನು ಅರಿತು, ತಮ್ಮ ಉತ್ತರಾಧಿಕಾರಿಯಾಗಿ ಶ್ರೀ॥ ಉ॥ ಅನನ್ತಾಳ್ವಾರ್ ಸ್ವಾಮಿಗಳವರಿಗೆ ತ್ರಿದಂಡ ಕಾಷಾಯಾದಿ

ಗಳನ್ನು ೧೯-೧೨-೧೮೬೯ ರಲ್ಲಿ, ವಿಕಾರಿಸಂವತ್ಸರ ಮಾರ್ಗಶಿರ ಚತುರ್ದಶಿಯ ದಿನ, ಅನುಗ್ರಹಿಸಿ ಮಾರನೆಯದಿನ ಪೌರ್ಣಮಾತಿಥಿಯಲ್ಲಿ ತಿರುನಾರಾಯಣ ಪುರದಲ್ಲಿ ಪರಮಪದಿಸಿದರು.

ಇವರ ತಥಿರ್ಯ :—

*ಶೌವೀರ್ಯ ವೇಂಕಟ ಯತೀಂದ್ರ ಪದಾಬ್ಜ ಹಂಸಂ |
ಶ್ರೀಶೈಲ ಶೇಷನರದಾರ್ಯವಯಾತ್ತ ಬೋಧಂ ||
ಶ್ರೀವಾದಿ ಭೀಕರ ಯದುಕ್ಷಿತಿಭೃದ್ಯತೀಂದ್ರ |
ಸಂಪತ್ಕುಮಾರ ಮುನಿವರ್ಯಮಹಂ ಪ್ರಪದ್ಯೆ ||
ಕನ್ಯಾಯಾಂ ಸ್ವಾತಿ ಸಂಜಾತಂ ವಾದಿಭೀಕೃತ್ಕುಲೋದ್ಭವಂ |
ಸುಶೀಲಂ ಸದ್ಗುರುಂ ವಂದೇ ಸಂಪತ್ಪುತ್ರಮುನಿಂ ಸದಾ ||

ಶ್ರೀ॥ ಉ॥ ತಿಟ್ಟೈಮೇಲ್ ಅನನ್ತಾಳ್ವಾರ್ ಸ್ವಾಮಿಗಳು

ಇವರು ಮಾಶಿಮಾಸ ಚಿತ್ತಾನಕ್ಷತ್ರದಲ್ಲಿ ಜನಿಸಿದರು. ಆಶ್ರಮ ಸ್ವೀಕಾರ ೧೯-೧೨-೧೮೬೯. ಇವರಿಗೆ ನಾರಾಯಣ ಪಟ್ಟತಿರುನಾಮ. ಇವರು ಕ್ರಿ. ಶ. ೧೯೩೦ನೇ ಸೌಮ್ಯಸಂವತ್ಸರದಲ್ಲಿ ಪರಮಪದಿಸಿದರು.

ಇವರ ತನಿರ್ಯ :—

ಸಂಪತ್ಸುತಸ್ಯ ಯಮಿನಃ ಪದಪಂಕಜಾಳಿಂ |
ಸಂಪತ್ಕುಮಾರ ಮುನಿವರ್ಯ ಕೃಪಾತ್ತಬೋಧಂ |
ತಲ್ಲಬ್ಧ ವೇದಯುಗಳಂ ಯದುಭೂಧರಶ್ರೀ |
ನಾರಾಯಣಂ ಮುನಿವರಂ ಸತತಂ ಭಜೇಹಂ ||

ಶ್ರೀ॥ ಉ॥ ಛಾಂದೋಗ್ಯಂ ಕುಪ್ಪನ್ನೈಯ್ಯಂಗಾರ್ ಸ್ವಾಮಿಗಳು (ದೊಡ್ಡ ಸ್ವಾಮಿಗಳು)

ಇವರು ಕರ್ಕಾಟಕಮಾಸ ಕೃತ್ತಿಕಾನಕ್ಷತ್ರದಲ್ಲಿ ಜನಿಸಿದರು. ಇವರಿಗೆ ಸಂಪತ್ಕುಮಾರ ಪಟ್ಟತಿರುನಾಮವು. ಇವರು ತಾವು ಶೀತವನ್ನಲಂಕ

---

*ಪಾಠಾಂತರ— ಶೇಷಾರ್ಯ.

ನಿಷ್ಠಾಗರೀ ಶ್ರೀ॥ ಉ॥ **ನಾಟೇರೀ ವರದಾಚಾರ್ಯಸ್ವಾಮಿಗಳವರಿಗೆ** ಶಾ. ಶ. ೧೭೭೬ ರಲ್ಲಿ (ಕ್ರಿ. ಶ. ೧೮೫೪) ಆಶ್ರಮವನ್ನು ಕೊಟ್ಟು ಮೂರು ವರ್ಷಗಳ ಅನಂತರ ಉತ್ತರ ದೇಶದ ಯಾತ್ರೆಗೆ ಕಳುಹಿಸಿದ್ದರು.

ಶ್ರೀ॥ ಉ॥ ಕುಪ್ಪನ್ಯೈಯ್ಯಂಗಾರ್ ಸ್ವಾಮಿಗಳವರು ಕಿ. ಶ. ೧೮೫೮ ರಲ್ಲಿ ಪರಮಪದಿಸಿದರು. ಆಗ ಶ್ರೀ॥ ಉ॥ ನಾಟೇರಿಸ್ವಾಮಿಗಳವರು ಉತ್ತರ ದೇಶದ ಯಾತ್ರೆಯಲ್ಲೇ ಇದ್ದರು.

ಇವರ ತನಿಯನ್:—

ಶ್ರೀ ವೆಂಕಟೇಶ ಕರುಣಾ ಪರಿಣಾಮಪಾತ್ರಂ |
ಶ್ರೀಮಚ್ಛಠಾರಿ ಪದಪಂಕಜ ರಾಜಹಂಸಂ |
ಶ್ರೀಯಾದವಾದ್ರಿ ಯತಿರಾಜ ದಯೈಕಪಾತ್ರಂ |
ಸಂಪತ್ಕುಮಾರ ಮುನಿವರ್ಯಮಹಂ ಪ್ರಪದ್ಯೇ ||

ಶ್ರೀ॥ಉ॥ ನಾಟೇರಿ ವರದಾಚ್ಯಾರ್ಯ ಸ್ವಾಮಿಗಳು

ಇವರು ಕಾಂಚೀನಗರದ ನಾಟೇರಿ ಗ್ರಾಮಕ್ಕೆ ಸೇರಿದವರು. ಕುಂಭ ಮಾಸ ರೇವತೀ ನಕ್ಷತ್ರದಲ್ಲಿ ಜನನ. ಘನ ವಿದ್ವಾಂಸರು. ತಿರುನಾರಾಯಣ ಪುರಕ್ಕೆ ತಮ್ಮ ತಮ್ಮಂದಿರು ಶ್ರೀ ರಾಮಾನುಜಾಚಾರ್ಯರೆಂಬುವರೊಡನೆ ವಯಮಾಡಿಸಿ, ಅಲ್ಲಿಯೇ ಶ್ರೀಮಠದ ಜೀಯರ್ ಸ್ವಾಮಿಗಳಾದ ಶ್ರೀ॥ ಉ॥ ಕುಪ್ಪನ್ಯೈಯ್ಯಂಗಾರ್ ಸ್ವಾಮಿಗಳನಂತರ ಮಠದ ಪೀಠವನ್ನು ಅಲಂಕರಿಸಿ ವರು. ಉತ್ತರದೇಶದಲ್ಲಿ ಬಹಳ ಗೌರವವನ್ನು ಸಂಪಾದಿಸಿ ಜಯಪುರ, ಬಿಕ ನೀರ್, ಬರೋಡಾ, ದರ್ಭಂಗ ಮುಂತಾದ ರಾಜಾಸ್ಥಾನಗಳಲ್ಲಿ ಸಸ್ಮಾನಿತ ರಾಗಿ ಬದರಿಕಾಶ್ರಮ ಮುಂತಾದ ಯಾತ್ರೆಗಳನ್ನು ವೈಭವದಿಂದ ನಡೆಸಿ, ಅನೇಕ ಶಿಷ್ಯರನ್ನು ಶ್ರೀ ಮಠಕ್ಕೆ ಸೇರಿಸಿದರು. ಶಾ. ಶ. ೧೭೮೧ ರಲ್ಲಿ ರೀವಾ ಮಹಾರಾಜರಿಂದ ಆಹ್ವಾನಿತರಾಗಿ ಗೋವಿಂದಘಡಕ್ಕೆ ದಯಮಾಡಿಸಿದರು. ರೀವಾಮಹಾರಾಜರ ಕೋರಿಕೆಯಂತೆ ತಾವು ಗೋವಿಂದಘಡದಲ್ಲಿಯೇ ಉಪ ದೇಶವನ್ನು ಅನುಗ್ರಹಿಸುತ್ತ ನಿಂತರು. ಶ್ರೀ॥ ಕುಪನ್ಯೈಯ್ಯಂಗಾರ್ಯಸ್ವಾಮಿ

ಗಳು ಪರಮಪದಿಸಲು ಮೂಲಮಠದಲ್ಲಿ ಪೀಠಕ್ಕೆ ಒಬ್ಬರಾದನೇಲೊಬ್ಬರು ಸ್ವಾಮಿಗಳಿಗೆ ಪಟ್ಟವನ್ನು ಕಟ್ಟಿಸಿದರು.

ರೀವಾ ಮಹಾರಾಜರಾದ ರಘುರಾಜ ಸಿಂಹನಿಗೆ **ಶ್ರೀ॥ ಉ॥ ವರದಾಚಾರ್ಯ ಸ್ವಾಮಿಗಳವರ** ಮುಂತ್ರೋಪದೇಶ ಬಲದಿಂದ ಸುಪುತ್ರಸಂತಾನವಾಗಿ ಗುರುಗಳವರ ಉಪದೇಶದಂತೆ ಮಗುವಿಗೆ ವೆಂಕಟರಮಣಸಿಂಗ್ ಎಂಬುದಾಗಿ ನಾಮಕರಣವಾಯಿತು. ಗೋವಿಂದಘಡದಲ್ಲಿ ರಾಜರು ಒಂದು ಯತಿರಾಜಮಠವನ್ನು ಕಟ್ಟಿಸಿ ಸ್ವಾಮಿಗಳಿಗೆ ಪಹಿಸಿ, ಅನೇಕ ದ್ರವ್ಯ, ಗ್ರಾಮ, ಇತ್ಯಾದಿಗಳನ್ನು ಕೊಟ್ಟಿದ್ದಲ್ಲದೆ ನಿರಂತರವಾಗಿ ದ್ರವ್ಯ ಸಹಾಯವಾಗುವಂತೆಯೂ ಕಟ್ಟಲೆಯನ್ನು ಏರ್ಪಡಿಸಿದ್ದರು. ಶ್ರೀ ಸ್ವಾಮಿಗಳವರು ಗೋವಿಂದಘಡದಲ್ಲಿಯೇ ೧೯೧೯ರಲ್ಲಿ ಪರಮಪದಿಸಿದರು. ವಿಕೃತಿ ಸಂವತ್ಸರ, ಸಿಂಹಕೃಷ್ಣ ತೃತೀಯಾ ತಿಥಿ.

ಈಗಲೂ ಕಾರಣಾಂತರಗಳಿಂದ ಶ್ರೀ॥ ಉ॥ ವರದಾಚಾರ್ಯ ಸ್ವಾಮಿಗಳವರು ಗೋವಿಂದಘಡದ ಮಠದಲ್ಲಿ ಆರಾಧನೆಯಲ್ಲಿಟ್ಟುಕೊಂಡಿದ್ದ ಮೂರ್ತಿಗಳೂ ದ್ರಾವಿಡಾಕ್ಷರ ಕೆಲವು ಓಲೆ ಪುಸ್ತಕಗಳೂ, ಕೆಲವು ಬೆಳ್ಳಿಯ ಪಾತ್ರೆಗಳೂ ಆ ಮಠದಲ್ಲಿಯೇ ನಿಂತುಹೋಗಿವೆ. ನಮ್ಮ ಮೂಲ ಮಠದಿಂದ ಸಕಾಲದಲ್ಲಿ ಸರಿಯಾದವರು ಗೋವಿಂದಘಡಕ್ಕೆ ಹೋಗದೆ ಇದ್ದುದು ಇದಕ್ಕೆ ಮುಖ್ಯ ಕಾರಣಗಳಲ್ಲೊಂದಾಗಿದೆ. ಶಾಖಾ ಮಠದ ಆಡಳಿತವು ಮೂಲ ಮಠಕ್ಕೆ ತಪ್ಪಿಹೋಯಿತು.

ಶ್ರೀ॥ ಉ॥ ಕೃಷ್ಣಯ್ಯ ವೆಂಕಟಾಚಾರ್ಯ ಸ್ವಾಮಿಗಳು
(ಮುದಿಗುಂಬಂ ಸ್ವಾಮಿಗಳು)

ಈ ಮಹನೀಯರು ಶಾ. ಶ. ೧೭೩೭ (ಕ್ರಿ. ಶ. ೧೮೧೪) ಭಾವ ಸಂವತ್ಸರದ ಮಿಥುನ ಮಾಸ ಭರಣಿ ನಕ್ಷತ್ರದಲ್ಲಿ ಜನಿಸಿದರು. ಗೋವಿಂದಘಡದಲ್ಲಿದ್ದ ಶ್ರೀ॥ ಉ॥ ನಾಟೇರಿ ವರದಾಚಾರ್ಯ ಸ್ವಾಮಿಗಳ ನಿಯಮನದಿಂದ ಮೂಲ ಮಠದಲ್ಲಿ ಕ್ರಿ. ಶ. ೧೮೨೨ ರಲ್ಲಿ ಆಶ್ರಮ ಸ್ವೀಕಾರ. ಇವರಿಗೆ ಸಂಪತ್ಕುಮಾರ ಪಟ್ಟ ತಿರುನಾಮವು. ಕ್ರಿ. ಶ. ೧೮೨೬-೨೭ರಲ್ಲಿ ಭಾವ ಸಂವತ್ಸರ

ಆಷಾಢ ಶುದ್ಧ ತೃತೀಯೆಯಲ್ಲಿ ಪರಮಪದಿಸಿದರು. ದೇವಸ್ಥಾನದ ಸಕಲ ಕೈಂಕರ್ಯಗಳನ್ನೂ ನಡೆಸುತ್ತಿದ್ದರು.

ಇವರ ತನಿಯರ್ು—

ಶ್ರೀಮಚ್ಛ್ರೀಂಕಟ ಲಕ್ಷ್ಮ್ಮಣಾರ್ಯ ಯಮಿನಃ ಕಾರುಣ್ಯ ಸಿಂಧೋರ್ನಿಧೇಃ
ಸಂಪ್ರಾಪ್ತೋಭಯ ವೇದಮೌಳಿ ಹೃದಯಂ ವಾತ್ಸ್ಯೇವಾರಾನ್ನಿಧಿಮ್
ಶ್ರೀ ಯದ್ವದ್ರಿಯತೀನ್ದ್ರ ಲಬ್ಧಯತಿರಾಟ್ಸಂಪತ್ಸುತಾಖ್ಯಂ ಮುನಿಂ
ಶ್ರೀ ನಾರಾಯಣ ಪಾದಪಂಕಜ ಯುಗಧ್ಯಾನೈಕನಿಷ್ಠಂ ಭಜೇ ॥

ಭವಾಬ್ಧೇ ಮಿಥುನೇ ಮಾಸಿ ಭರಣ್ಯಾಮವಾಸ್ಥಿತೋದಯಮ್ ।
ಸೇವೇ ಯದ್ವದ್ರಿಯತಿ ರಾಟ್ಸಂಪತ್ಸುತಮುನಿಂ ಸದಾ ॥

ಶ್ರೀ॥ ಉ॥ ಪೆರಿಯ ಕೊಮಾರೆ ಶಿಂಗರಾಜಾರ್ಯ ಸ್ವಾಮಿಗಳು

(ದೊಡ್ಡ ಸ್ವಾಮಿಗಳು)

ಈ ಮಹನೀಯರು ಆನಿ ಮಾಸ ಪೂರ್ವಾಭಾದ್ರ ನಕ್ಷತ್ರದಲ್ಲಿ ಜನಿಸಿದರು. ಇವರಿಗೆ ಶ್ರೀ॥ ಉ॥ ಮುದಿಗುಂಟ ಸ್ವಾಮಿಗಳ ನಂತರ ಪಟ್ಟ. ನಾರಾಯಣ ಪಟ್ಟ ತಿರುನಾಮವು. ಎರಡೇ ಚಾತುರ್ಮಾಸ್ಯ ವ್ರತಗಳನ್ನು ನಡೆಸಿ, ಧಾತು ಸಂವತ್ಸರ ಆಷಾಢ ಶುದ್ಧ ದ್ವಿತೀಯೆಯಲ್ಲಿ (ಕ್ರಿ. ಶ. ೨೩–೬–೧೮೭೬) ತಿರುನಾರಾಯಣಪುರದಲ್ಲಿ ಪರಮಪದಿಸಿದರು.

ಇವರ ತನಿಯರ್ು—

ಶ್ರೀಮತ್ಕೌಶಿಕ ವಂಶ ಮೌಕ್ತಿಕಮಣಿಂ ಶ್ರೀಶೈಲವರ್ಯಾತ್ಮಜಂ ।
ಶ್ರೀಮತ್ಸೌಮ್ಯ ನೃಸಿಂಹ ದೇಶಿಕ ಪದಾಸಕ್ತಾನ್ತರಂಗಂ ಶುಚಿಮ್ ॥
ತಸ್ಮಾದ್ ಜ್ಞಾನದಯಾನಿಧೇರಧಿಗತತ್ರಯ್ಯನ್ತಯುಗ್ಮಾರ್ಥದಮ್ ।
ವಂದೇಹಂ ಯದುಭೂಧರೇನ್ದ್ರಯತಿರಾಣ್ಣಾರಾಯಣಾಖ್ಯಂ ಮುನಿಂ ॥

ಶ್ರೀ॥ ಉ॥ ನಾಟಂಪಳ್ಳಿ ಅಳಹಿಯ ಶಿಂಗರಾಜಾರ್ಯ ಸ್ವಾಮಿಗಳು

ಈ ಮಹನೀಯರು ಕರ್ಕಾಟಕ ಮಾಸದ ಪೂರ್ವಾಭಾದ್ರ ನಕ್ಷತ್ರದಲ್ಲಿ ಜನಿಸಿದರು. ಇವರು ಕ್ರಿ. ಶ. ೧೮೭೬ರಲ್ಲಿ ಆಶ್ರಮ ಸ್ವೀಕಾರ ಮಾಡಿದರು.

ಇವರಿಗೆ ಸಂಪತ್ಕುಮಾರ ಪಟ್ಟ ತಿರುನಾಮವು. ಆಂಧ್ರದೇಶದ ಶ್ರೀಕೂರ್ಮದಲ್ಲಿ ಕ್ರಿ. ಶ. ೧೫೫೬ರಲ್ಲಿ ಇವರು ಪರಮಪದಿಸಿದರು. ಅಲ್ಲಿಯೇ ಬೃಂದಾವನವಾಯಿತು. ಇವರು ಆಂಧ್ರ ದೇಶದಲ್ಲಿ ಸಂಚರಿಸುತ್ತಿದ್ದಾಗ ಬೊಬ್ಬಿಲಿ ಮಹಾರಾಜರು ಇವರನ್ನು ತಮ್ಮ ಆಸ್ಥಾನಕ್ಕೆ ಬಿಜಯಮಾಡಿಸಿಕೊಂಡು ಮರ್ಯಾದೆಯನ್ನು ಮಾಡಿದರು.

ಇವರ ತನಿಯನ್—

ಶೇಷಾರ್ಯಾನ್ವಯ ದುಗ್ಧವಾರಿಧಿ ಕಲಾನಾಥಾದನನ್ತಾರ್ಯತಃ
ಸಂಪ್ರಾಪ್ತೋಭಯ ವೇದಮೌಳಿಮನಘಂ ಶ್ರೀಭಾಷ್ಯಸಾರಾರ್ಥದಂ |
ಶಾಂತ್ಯಾದ್ಯಾತ್ಮ ಗುಣಾಕರಂ ಯತಿಪತೇಃ ಪಾದಾಂಬುಜೈಕಾಶ್ರಯಂ
ವಂದೇಹಂ ಯದುಭೂಧರೇನ್ದ್ರಯತಿ ರಾಟ್ಸಂಪತ್ಕುಮಾರಂ ಮುನಿಮ್ ||

ಮಾಸಿ ಕರ್ಕಟಕೇ ಪೂರ್ವ ಪ್ರೌಷ್ಠಪದ್ಯಾಂ ಸಮುದ್ಭವಮ್ |
ಯದ್ವೈದ್ರಿ ಯತಿರಾಜಾಖ್ಯಂ ಸಂಪತ್ಸುತ ಮುನಿಂ ಭಜೇ ||

ತಮ್ಮ ಜತೆಯಲ್ಲಿಯೇ ಇದ್ದ ಶ್ರೀಮದಿತ್ಯಾದಿ ನಾಟಂಪಳ್ಳಿ ತಿರುನಾರಾಯಣ ಪೆರುಮಾಳರಿಗೆ ಪಟ್ಟವನ್ನು ಕೊಟ್ಟರು.

ಶ್ರೀ॥ ಉ॥ ನಾಟಂಪಳ್ಳಿ ತಿರುನಾರಾಯಣ ಪೆರುಮಾಳ್ ಸ್ವಾಮಿಗಳು

ಇವರು ಮಿಥುನಮಾಸ ಆರ್ದ್ರಾನಕ್ಷತ್ರದಲ್ಲಿ ಜನಿಸಿದರು. ಕ್ರಿ. ಶ. 1886 ನೆಯ ಮಾರ್ಚಿ ಪಾರ್ಥಿವ ಫಾಲ್ಗುಣ ಕೃಷ್ಣಪಕ್ಷ ಪಂಚಮಿಯಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದರು ಇವರು ಅಲ್ಪಕಾಲವೇ ಪೀಠಸ್ಥರಾಗಿದ್ದು ಯಾತ್ರಾಮಾರ್ಗದಲ್ಲಿ 3–8–1887 ನೆಯ ಸರ್ವಜಿತ್ ಶ್ರಾವಣ ಕೃಷ್ಣ ಅಮಾವಾಸ್ಯಾದಿನದಲ್ಲಿ ನಾಗಪುರದಲ್ಲಿ ಪರಮಪದಿಸಿದರು.

ಇವರ ತನಿಯನ್ :—

ಶ್ರೀಮದ್ಯಾದವ ಶೈಲಶೃಂಗಯತಿರಾಟ್ಸಂಪತ್ಕುಮಾರಾದ್ಯತೇಃ |
ಸಂಪ್ರಾಪ್ತೋಭಯವೇದಮೌಳಿಮನಘಂ ಶಾನ್ತಾಕ್ಷಮಾಭೂಷಣಂ ||
ಶ್ರೀಭಾಷ್ಯದ್ರಮಿಡಾಗಮಾದಿನಿರತಂ ಶ್ರೀವೈಷ್ಣವಾರಾಧಕಂ |
ವನ್ದೇಹಂ ಯದುಭೂಧರೇನ್ದ್ರ ಯತಿರಾಣ್ನಾರಾಯಣಾಖ್ಯಂ
ಮುನಿಮ್ ||

ಗಾಂ 4360

ಬಾಲಧನ್ವಿಕುಲೋದ್ಭೂತಂ ಮಿಥುನೇ ಮಾಸಿ ರೌದ್ರಭೇ।
ಯದ್ವದ್ರಿಯತಿರಾಜಶ್ರೀ ನಾರಾಯಣಮುನಿಂ ಭಜೇ ॥

ಶ್ರೀ॥ ಉ॥ ಜೀಯರ್ ಸನ್ನಿಧಿ ತಿರುಮಲಾಚಾರ್ಯಸ್ವಾಮಿಗಳು

ಈ ಮಹಾನುಭಾವರು ಜನಿಸಿದ್ದು ಕರ್ಕಾಟಕ ಮಾಸ, ಸ್ವಾತಿ ನಕ್ಷತ್ರ. ಇವರು ಘನವಿದ್ವಾಂಸರು, ಪರಮಸಾಧುಗಳು. ರೀವಾ ಸಂಸ್ಥಾನದ ಗೋವಿಂದಘಡದಲ್ಲಿ ಇವರು ಕ್ರಿ. ಶ. ೧೮೮೭ ರಲ್ಲಿ ಸನ್ಯಾಸಾಶ್ರಮವನ್ನು ಸ್ವೀಕರಿಸಿದರು. ಇವರದು ಸಂಪತ್ತುಮಾರ ಪಟ್ಟವು. ಶ್ರೀಮದಿತ್ಯಾದಿ ಯೋಗಿ ಪಾರ್ಥಸಾರಥಿ ಐಯ್ಯಂಗಾರ್ ಸ್ವಾಮಿಗಳವರೊಡನೆ ಮದ್ರಾಸಿನಲ್ಲಿ ಭಗವದ್ವಿಷಯಾದಿ ತೆನ್ನಾಚಾರ್ಯ ಗ್ರಂಥಗಳನ್ನು ಪರಿಶೋಧಿಸಿ ಅಚ್ಚುಮಾಡಿಸಿದರು. ಅನೇಕ ಪಾಶ್ಚಾತ್ಯದೇಶದ ಪಂಡಿತರೂ ಈ ಸ್ವಾಮಿಗಳವರಲ್ಲಿ ಶಾಸ್ತ್ರ ವಿಚಾರಗಳಲ್ಲಿ ಉಪದೇಶವನ್ನು ಪಡೆದರು. ಅವರುಗಳಲ್ಲಿ ಜರ್ಮನ್ ವಿದ್ವಾಂಸರಾದ ಪಾಲ್ ಡ್ಯೂಸ್ಸೆ ಎಂಬುವವರೂ ಒಬ್ಬರಾಗಿದ್ದರು. ಈ ಸ್ವಾಮಿಗಳು ಬದರಿಕಾಶ್ರಮ ಮುಂತಾದ ಉತ್ತರದೇಶದ ಯಾತ್ರೆಗಳನ್ನು ಮಾಡಿ, ಅನೇಕ ಶಿಷ್ಯರನ್ನು ಸಂಪಾದಿಸಿ ಅವರಿಗೆ ಮಹತ್ತರವಾದ ಉಪದೇಶವನ್ನು ಮಾಡಿದರು. ರೀವಾ ಮತ್ತು ಹೈದರಾಬಾದಿನ ರಾಜರುಗಳಿಂದ ಬಹಳವಾಗಿ ಗೌರವಿಸಲ್ಪಟ್ಟರು. ಬೆಂಗಳೂರಿಗೆ ರಾಜ ಮರ್ಯಾದೆಯೊಡನೆ ಬಂದು ತಿರುನಾರಾಯಣಪುರಕ್ಕೆ ಬಿಜಯಮಾಡಿಸಿ, ಶ್ರೀನಾರಾಯಣಸ್ವಾಮಿ ಲಕ್ಷ್ಮೀ ನೃಸಿಂಹ ಸ್ವಾಮಿಗಳವರ ಕೈಂಕರ್ಯಗಳನ್ನು ನಡೆಯಿಸುತ್ತ ಶಿಷ್ಯವೃಂದಕ್ಕೆ ಉಪದೇಶಿಸುತ್ತಿದ್ದರು. ಪುನಃ ಉತ್ತರದೇಶಕ್ಕೆ ಬಿಜಯಮಾಡಿ ಟೆಹರಿ ಸಂಸ್ಥಾನಾಧೀಶ್ವರನಿಂದ ಆಹ್ವಾನಿತರಾಗಿ ಗೌರವಿಸಲ್ಪಟ್ಟರು. ಶ್ರೀಗಳವರು ಪುನಃ ಬದರಿಕಾಶ್ರಮ ಯಾತ್ರೆಯನ್ನು ಮಾಡಿ ೫೮-೧೦-೧೯೦೧ ರಲ್ಲಿ, ಪ್ಲವ, ಆಶ್ವಯುಜ ಕೃಷ್ಣ ದ್ವಿತೀಯಾದಲ್ಲಿ ಗೋವಿಂದಘಡದಲ್ಲಿ ಪರಮಪದಿಸಿದರು. ಬಹಳ ದ್ರವ್ಯವನ್ನು (ಸುಮಾರು ರೂ. ೧೫೦೦೦) ಸಂಪಾದಿಸಿ, ತಮಗೆ ಆಪ್ತರಾದ ಹಿರಿಯರ ಮೂಲಕ ಆರ್‌ಬಕ್‌ನಾಟ್ ಬ್ಯಾಂಕಿನಲ್ಲಿ ಇಟ್ಟಿದ್ದರು. ಈ ಮಹನೀಯರ ಕಾಲದಲ್ಲಿ ಮೂಲಸ್ಥಾನದಲ್ಲಿ ಶ್ರೀನಿವಾಸ ದೇವರ ಪೂಜಾಗೃಹ, ತಿರುಮಡಪಳ್ಳಿ, ಕಾಲಕ್ಷೇಪ ಸ್ಥಳ ಇವು ಮೊದಲಾಗಿ ಕಟ್ಟಲ್ಪಟ್ಟುವು.

10410

ಇವರ ತನಿಯನ್—

ಶೇಷಾರ್ಯಾನ್ವಯ ಬಾಲಧನ್ವಿಕುಲಜ ಶ್ರೀವಾಸ ಕೃಷ್ಣಾರ್ಯಯೋಃ
ಪ್ರೇಮ್ಣಾಪ್ತ್ಯೋಭಯ ವೇದಮೌಳಿಮನಘಂ ಶಾನ್ತ್ಯಾದಿವಾರಾಂನಿಧಿಮ್ ।
ಶ್ರೀನಾರಾಯಣ ಯೋಗಿವರ್ಯ ಚರಣ ದ್ವಂದ್ವೈಕ ನಿಷ್ಠಂ ಭಜೇ
ಶ್ರೀಮದ್ಯಾದವಶೈಲ ಶೃಙ್ಗಯತಿ ರಾಟ್ಸಂಪತ್ಕುಮಾರಂ ಮುನಿಮ್ ॥
ಶೇಷವಂಶ್ಯಾಚ್ಛ್ರೀನಿವಾಸಾದ್ವರಸನ್ನಿಧಿ ವೇದ ದಾತ್ ।
ಸ್ವಾತಿಜಂ ಕರ್ಕಟೇ ವನ್ದೇಽನುಂತ್ರ ವೇದಾರ್ಥದಂ ಮುನಿಮ್ ॥

ಶ್ರೀ॥ ಉ॥ ಚಿನ್ನಕುಮಾರ ಶಿಂಗ್ರಾಚಾರ್ಯ ಸ್ವಾಮಿಗಳವರು

ಈ ಮಹಾನುಭಾವರು ವೃಷಭ ಮಾಸ ಅನೂರಾಧಾ ನಕ್ಷತ್ರದಲ್ಲಿ ತಿರುನಾರಾಯಣಪುರದಲ್ಲಿ ಕ್ರಿ. ಶ. ೧೮೩೭ ರಲ್ಲಿ ಜನಿಸಿದರು. ಶಾಸ್ತ್ರಾಭ್ಯಾಸವನ್ನು ತಿರುನಾರಾಯಣಪುರದಲ್ಲಿಯೇ ಮಾಡಿ, ಮದ್ರಾಸ್ ತಿರುವಲ್ಲಿಕ್ಕೇಣಿಗೆ ದಯಮಾಡಿಸಿದಮೇಲೆ ನಮ್ಮ ಸಮುದಾಯದವರೆಲ್ಲರೂ ಇವರ ಮಂತ್ರೋಪಾಸನ ಶಕ್ತಿಯನ್ನು ಅನುಭವಿಸಿ, ಇವರಿಗೆ ಸಹಾಯ ಮಾಡುತ್ತಿದ್ದರು. ಇವರು ಶ್ರೀ ನೃಸಿಂಹದೇವರ ಉಪಾಸಕರಾಗಿದ್ದರು. ಶ್ರೀ ಜೀಯರ್ ಸನ್ನಿಧಿ ಸ್ವಾಮಿಗಳು ಇವರು ಆಶ್ರಮ ಸ್ವೀಕಾರ ಮಾಡಬೇಕೆಂದು ತಮ್ಮ ಅವಸಾನ ಕಾಲದಲ್ಲಿ ರೀವಾ ಸಂಸ್ಥಾನದಿಂದ ಆಪ್ತಣೆ ಕೊಡಿಸಿದ್ದ ಶ್ರೀಮುಖವನ್ನು ತಿರಸ್ಕರಿಸಿಯೂ ರೀವಾ ಸಂಸ್ಥಾನದ ರಾಜರ ಆಹ್ವಾನದಂತೆಯೂ ಗೋವಿಂದಘಡಕ್ಕೆ ದಯಮಾಡಿಸಿ ೧೮೬೯ ರಲ್ಲಿ ಪ್ಲವ ಪುಷ್ಯ ಪೌರ್ಣಮೆಯ ದಿನ ಸನ್ಯಾಸಾಶ್ರಮವನ್ನು ಅಂಗೀಕರಿಸಿದರು. ಉತ್ತರ ದೇಶದ ಯಾತ್ರೆಯಲ್ಲಿ ಅಯೋಧ್ಯೆಗೆ ಬಿಜಯಮಾಡಿಸಿದರು. ಶ್ರೀ॥ ಉ॥ ಶ್ರೀಯೋಗಿ ಪಾರ್ಥಸಾರಥಿ ಐಯ್ಯಂಗಾರ್ ಸ್ವಾಮಿಗಳು ಅಲ್ಲಿ ಶ್ರೀರಾಮ ದೇವರ ಗುಡಿಯನ್ನು ಕಟ್ಟಿಸಿ, ವಿಗ್ರಹಗಳನ್ನು ಪ್ರತಿಷ್ಠೆಮಾಡುವುದಕ್ಕೆ ಪ್ರೋತ್ಸಾಹವನ್ನು ಕೊಟ್ಟು, ಇತರ ವಿಧದ ಸಹಾಯಗಳನ್ನು ಒದಗಿಸಿಕೊಟ್ಟರು. ಅಯೋಧ್ಯೆಯಿಂದ ಗೋವಿಂದಘಡಕ್ಕೆ ದಯಮಾಡಿಸಿ ಅಲ್ಲಿಂದ ಹೊರಟು ಹೈದರಾಬಾದ್, ಸ್ಯಾಜ್‌ವೀಡ್, ಪನಪರ್ತಿ, ಗದ್ವಾಲ್ ಸಂಸ್ಥಾನಗಳ ರಾಜರುಗಳಿಂದ ಸನ್ಮಾನಿತರಾಗಿ ಗುಂಟೂರಿಗೆ ತಲಪಿದರು. ಅಲ್ಲಿಂದ

ನೆಲ್ಲೂರಿನಿಂದ ಬಿಜಯಂ[illegible]ಮಾಡಿಸಲು. ಆ ಊರಿನವರೆಲ್ಲರೂ ಅತ್ಯಂತ ವೈಭವದಿಂದ ಶ್ರೀ ಸ್ವಾಮಿಗಳನ್ನು ಸ್ವಾಗತಕ್ಕೆ ಬಿಜಯಂಗಾಡಿಸಿಕೊಂಡು ಅನಂತವಾದ ಮರ್ಯಾದೆಗಳನ್ನು ಸಲ್ಲಿಸಿದರು.

ಆನಂತರ ಜೊಂಗಲೂರಿಗೆ ಸರ್ಕಾರೀ ಮರ್ಯಾದೆಗಳೊಡನೆ ಮಲ್ಲೀಶ್ವರಕ್ಕೆ ಶ್ರೀಗಳವರು ಬಿಜಯಮಾಡಿ, ಶ್ರೀ ವೇಣುಗೋಪಾಲಕೃಷ್ಣಸ್ವಾಮಿ ದೇವ ಸ್ಥಾನದಲ್ಲಿ ಅಗ್ರಮರ್ಯಾದೆಯನ್ನು ಹೊಂದಿ, ಪೆ[illegible]ರಲ್ಲಿ ತಿರುನಾರಾಯಣಪುರಕ್ಕೆ ದಯಮಾಡಿಸಿದರು. ತಿರುನಾರಾಯಣಪುರದಲ್ಲಿ ಶ್ರೀ ನಾರಾಯಣಸ್ವಾಮಿ ನರಸಿಂಹದೇವರ ಕೈಂಕರ್ಯದಲ್ಲಿ ನಿರತರಾಗಿದ್ದು [illegible]ರಲ್ಲಿ ಪ್ಲವಂಗ ಕಾರ್ತಿಕ ಕೃಷ್ಣಪಂಚಮಿಯಲ್ಲಿ ಪರಮಪದವಿಸಿದರು. ಈ ಕಾಲದಲ್ಲೇ ಮದ್ರಾಸ್ ಅರ್ಪಿತ್‌ನಟ್ ಬ್ಯಾಂಕು ದಿವಾಳಿಯಾಗಿ ನಷ್ಟವಾಯಿತು. ಶ್ರೀಗಳವರು ನೆಲ್ಲೂರಿನಲ್ಲಿದ್ದಾಗ ತಮ್ಮ ಕಾಲಾನಂತರ ತಮ್ಮ ಉತ್ತರಾಧಿಕಾರಿಯಾಗಿ ಸನ್ಯಾಸಾಶ್ರಮವನ್ನು ಪರಿಗ್ರಹಿಸೆಂದು ಶ್ರೀಮದಿತ್ಯಾದಿ (ಕುಟ್ಟಿಯತ್ತಂಬಿ) ದಾಮೋದರಂ ರಾಮಾನುಜಪುರಂ ಆನಂದಾಣ್ ಪಿಳ್ಳೈ ಅಳಗಿಂಗರಾಚಾರ್ಯ ಸ್ವಾಮಿಗಳಿಗೆ ಆಶೀರ್ವದಿಸಿದ್ದರು.

ಇವರ ತನಿಯನ್

ಶ್ರೀಯದ್ವಿದ್ರಿ ಯತೀನ್ದ್ರಪೂರ್ಣ ಕರುಣಾಪಾತ್ರಂ ತದೀಯೋ ಮತೇ
ಸಂಪ್ರಾಪ್ತಾಶ್ರಮ ಮಾಶ್ರಿತೈಕ ಶರಣಂ ಸಂಸತ್ಕುಮಾರೇಕ್ಷಣಾತ್ |
ಶ್ರೀ ರಾಮಾನುಜ ಸಂಯಮೀನ್ದ್ರ ಕಥಿತಚ್ಛಿದ್ರೋಕ್ತಿ ಸಾರಾರ್ಥದಂ |
ಶ್ರೀಮಂತಂ ಯತಿರಾಜ ಸಂಯಮಿವರಂ ನಾರಾಯಣಂ ಸಂಶ್ರಯೇ ||

ವೃಷಭೇ ಮಾಸ್ಯನೂರಾಧಾ ಜಾತಂ ನಾರಾಯಣಾಭಿಧಮ್ |
ಬಾಲಘನ್ವಿಕುಲಾಬ್ಧೀಂದು ಯತಿರಾಜ ಗುರುಂ ಭಜೇ ||

ಶ್ರೀ|| ಉ|| ರಾಮಾನುಜಪುರಂ ತಿರುಮಲೈ ಅನಂದಾಣ್ ಪಿಳ್ಳೈ ಅಳಕಿಯ ಶಿಂಗರಾಚಾರ್ಯ ಸ್ವಾಮಿಗಳು

(ಶ್ರೀ ಕುಟ್ಟಿಯತ್ತಂಬಿದಾಮೋದರಂ ಅಳಗಿಂಗರಾಚಾರ್ಯಸ್ವಾಮಿಗಳು)

ಇವರ ಜನನ ಶಾ.ಶ. [illegible] ಪರಾಭವ ಮೇಷಮಾಸ ಶತಭಿಷಾ

ನಕ್ಷತ್ರದಲ್ಲಿ. ಶ್ರೀ॥ ಉ॥ ಕುಮಾರ ಜೀಯರ್ ಸ್ವಾಮಿಗಳವರಿಗೆ ವಾಗ್ದಾನ ಮಾಡಿದ ಮೇಲೆ ಶಾ. ಶ. ೧೮೩೧ನೇ ಕೀಲಕ ಸಂವತ್ಸರ ಆಷಾಢ ಶುಕ್ಲ ತ್ರಯೋದಶೀ ಭಾನುವಾರ (೧೫–೭–೧೯೦೯ರಲ್ಲಿ) ತಿರುನಾರಾಯಣಪುರದಲ್ಲಿ ಶ್ರೀ ಯತಿರಾಜ ಮಠದಲ್ಲಿ ಬಹಳ ವೈಭವದೊಡನೆ ಸನ್ಯಾಸಾಶ್ರಮವನ್ನು ಸ್ವೀಕರಿಸಿದರು. ಇವರದು ಸಂಪತ್ಕುಮಾರ ಪಟ್ಟವು. ಈ ಸ್ವಾಮಿಗಳು ಲೌಕಿಕ, ವೈದಿಕ ಮಾರ್ಗಗಳ ತತ್ವಗಳನ್ನು ಅರಿತವರಾಗಿ, ವೃದ್ಧರಾದರೂ ಬಹಳ ಯಶಸ್ಸಿನಿಂದ ಶ್ರೀ ಮಠದ ಕೈಂಕರ್ಯಗಳನ್ನು ನೆರವೇರಿಸಿದರು. ಈ ಮಠಕ್ಕೆ ವಿಶೇಷ ಗೌರವವನ್ನು ಪಡೆದು, ನಮ್ಮ ಸಮುದಾಯದ ಹಿರಿಯರು, ಕಿರಿಯರು ಎಲ್ಲರನ್ನೂ ಆಕರ್ಷಿಸಿ ಅನುಗ್ರಹಿಸುತ್ತಿದ್ದರು. ಶ್ರೀ ಮಠವನ್ನು ಉದ್ಧರಿಸಲು ಅನೇಕ ಪ್ರಯತ್ನಗಳನ್ನು ನಡೆಯಿಸಿದರು. ಆದರೆ ನಮ್ಮವರ ದೌರ್ಭಾಗ್ಯದಿಂದ ಐದು ವರ್ಷಗಳ ಅವಧಿಯಲ್ಲೇ ಶಾ.ಶ. ೧೮೩೬ನೇ (ಕ್ರಿ.ಶ. ೧೯೧೩) ಪ್ರಮಾದೀಚ ಜ್ಯೇಷ್ಠ ಶುದ್ಧ ದಶಮಿಯಲ್ಲಿ ತಿರುನಾರಾಯಣಪುರದಲ್ಲಿ ಪರಮಪದಿಸಿದರು. ಶ್ರೀ ಮಠಕ್ಕೆ ಧನ ಸಂಗ್ರಹ ಮಾಡಿದ್ದಲ್ಲದೆ ನಿತ್ಯ ತದೀಯಾರಾಧನೆಗಳನ್ನು ಉತ್ಸಾಹದಿಂದ ನಡೆಸುತ್ತಿದ್ದ ಮಹಾನುಭಾವರು ಈ ಸ್ವಾಮಿಗಳು.

ಇವರ ತನಿಯರ್ನ—

ಯದ್ವದ್ರಿನಾಥ ಪದಪಂಕಜ ಕಿಂಕರಾಗ್ರ್ಯಂ
ಶ್ರೀ ಶ್ರೀನಿವಾಸ ಕರುಣಾಪರಿಲಬ್ಧ ಬೋಧಂ |
ನಾರಾಯಣಾಖ್ಯ ಮುನಿವರ್ಯ ಕಟಾಕ್ಷಪಾತ್ರಂ
ಸಂಪತ್ಕುಮಾರ ಯತಿರಾಜಗುರುಂ ಭಜೇಹಂ ॥

ಮೇಷೇ ಶತಭಿಷಗ್ಜಾತಂ ಪರಾಭವ ಶರದ್ವರೇ |
ಯದ್ವದ್ರಿ ಯತಿರಾಜ ಶ್ರೀ ಸಂಪತ್ಕುಮಾರ ಮುನಿಂ ಭಜೇ ॥

ಶ್ರೀ॥ ಉ॥ ಕೋಪೆ ವೆಂಕಟಾಚಾರ್ಯ ಸ್ವಾಮಿಗಳು

ಇವರ ಜನನ ಮಿಥುನ ಮಾಸ, ಸ್ವಾತಿ ನಕ್ಷತ್ರ. ಶಾ.ಶ. ೧೮೬೬ನೇ ಪ್ರಮಾದೀಚ ಆಷಾಢ ಶುದ್ಧ ನವಮಿ ಶನಿವಾರದಲ್ಲಿ (೧೫–೭–೧೯೪೫)

ಶ್ರೀ ಯತಿರಾಜ ಮಠದ ಪೀಠವನ್ನಲಂಕರಿಸಿದರು. ಇವರದು ನಾರಾಯಣ ಪಟ್ಟವು. ಈ ಸ್ವಾಮಿಗಳು ಹಿಂದೆ ಶ್ರೀ ಮಠದ ಪೀಠವನ್ನಲಂಕರಿಸಿದ್ದ ಶ್ರೀ॥ ಉ॥ ನಾಟೇರಿ ವರದಾಚಾರ್ಯ ಸ್ವಾಮಿಗಳ ತಮ್ಮಂದಿರಾದ ಶ್ರೀ ರಾಮಾನುಜಾಚಾರ್ಯರಲ್ಲಿ ಆಯುರ್ವೇದ ವೈದ್ಯ ಶಾಸ್ತ್ರವನ್ನು ಓದಿ, ರೋಗಿಗಳಿಗೆ ವಿಶೇಷವಾಗಿ ಸಹಾಯ ಮಾಡುತ್ತಿದ್ದರು. ಶ್ರೀ॥ ಉ॥ ಮುದಿಗುಂಬಂ ತಿರುಮಲಾಚಾರ್ಯರ ಸಹಾಯದಿಂದ ಶ್ರೀ ಮಠದಲ್ಲಿ ೩೧–೭–೧೯೧೫ ರಲ್ಲಿ ಒಂದು ಉಭಯ ವೇದಾಂತ ಪಾಠಶಾಲೆಯನ್ನು ಸ್ಥಾಪಿಸಿ, ವಿದ್ಯಾರ್ಥಿಗಳಿಗೆ ಎಲ್ಲಾ ಸೌಕರ್ಯಗಳನ್ನೂ ಒದಗಿಸಿ, ಪಾಠಶಾಲೆಯನ್ನು ನಡೆಯಿಸುತ್ತ ಬಂದರು. ಶ್ರೀ॥ ಉ॥ ಮುದಿಗುಂಬಂ ತಿರುಮಲಾಚಾರ್ಯರವರು ಕಾರ್ಯದರ್ಶಿಗಳಾಗಿದ್ದು, ತಮ್ಮ ವಿಶ್ರಾಂತಿ ಕಾಲದಲ್ಲಿ ಶ್ರೀ ಮಠದ ಕಾರ್ಯಗಳನ್ನು ಭಕ್ತಿಯಿಂದ ನೆರವೇರಿಸುತ್ತ ಬಂದರು. ೭–೪–೧೯೧೪ ರಲ್ಲಿ ಆಗಿನ ದಿವಾನ್ ಶ್ರೀ ವಿಶ್ವೇಶ್ವರಯ್ಯನವರು ಶ್ರೀ ಮಠದಲ್ಲಿ ಶ್ರೀ ಸ್ವಾಮಿಗಳವರ ದರ್ಶನವನ್ನು ಮಾಡಿ ಆಶೀರ್ವಾದವನ್ನು ಪಡೆದರು. ೧೬–೭–೧೯೧೫ ರಲ್ಲಿ ಶ್ರೀಮನ್ಮಹಾರಾಜರವರು ಶ್ರೀ ಯತಿರಾಜ ಮಠಕ್ಕೆ ದಯಮಾಡಿಸಿ, ಶ್ರೀ ಸ್ವಾಮಿಗಳವರಿಂದ ತೀರ್ಥ ಪ್ರಸಾದವನ್ನು ಪಡೆದು, ಮಹಾಶೀರ್ವಾದವನ್ನು ಹೊಂದಿ, ಶ್ರೀ ಜೀಯರ್ ಸ್ವಾಮಿಗಳವರಿಗೆ ಜೋಡಿಶಾಲು ಇತ್ಯಾದಿ ಮರ್ಯಾದೆಯನ್ನು ಸಮರ್ಪಿಸಿದರು. ಶ್ರೀ ಸ್ವಾಮಿಗಳವರು ಶಾ.ಶ. ೧೮೪೦ ನೇ ಪಿಂಗಳ ಆಷಾಢ ಕೃಷ್ಣ ಪ್ರಥಮೆಯಲ್ಲಿ (ಕ್ರಿ.ಶ. ೧೯೧೭) ತಿರುನಾರಾಯಣಪುರದಲ್ಲಿ ಪರಮಪದಿಸಿದರು.

ಇವರ ತನಿಯನ್—

ಶ್ರೀಶೈಲ ಲಕ್ಷ್ಮಣಮುನೇಃ ಕಲಿತಾತ್ಮಬೋಧಂ
ಸಂಪತ್ಕುಮಾರ ಯಮಿನಃ ಕರುಣೈಕ ಪಾತ್ರಮ್ |
ಶ್ರೀ ಯಾದವಾದ್ರಿ ಯತಿರಾಜ ಪದಾಬ್ಜ ಭೃಂಗಂ
ನಾರಾಯಣಾರ್ಯ ಯಮಿನಂ ಶರಣಂ ಪ್ರಪದ್ಯೇ ॥

ಮಿಥುನೇ ಭಾಸ್ಕರೇ ಸ್ವಾತಿ ನಕ್ಷತ್ರೇ ವಿಹಿತೋದಯಂ |
ಯದ್ವದ್ರಿ ಯತಿರಾಜಶ್ರೀ ನಾರಾಯಣಮುನಿಂ ಭಜೇ ॥

ಶ್ರೀ॥ ಅ॥ ವಿದ್ವಾನ್ ಆಸೂರಿ ಅನಂತಾಳ್ವಾರ್ ಸ್ವಾಮಿಗಳು

ಈ ಸ್ವಾಮಿಗಳ ಜನನ ಶಾ.ಶ. ೧೭೮೧, ಕಾಳಯುಕ್ತಿ ಮಾಶಿಮಾಸ ಕೃಷ್ಣಪಕ್ಷ ಸಪ್ತಮಿಯಾ ತಿಥಿ, ಅನೂರಾಧಾ ನಕ್ಷತ್ರ. ಈ ಸ್ವಾಮಿಗಳು ಪೂರ್ವಾಶ್ರಮದಲ್ಲಿ ಶ್ರೀ ಯತಿರಾಜ ಮಠದ ಶ್ರೇಯೋಭಿವೃದ್ಧಿಗಾಗಿ ಬಹಳ ಶ್ರಮಿಸಿದರು. ಲೌಕಿಕ ವಿದ್ಯೆಯಲ್ಲೂ, ವೈದಿಕ ವಿದ್ಯೆಯಲ್ಲೂ ಬಹಳ ಹಿರಿಯ ಪಂಡಿತರಿವರು. ಕಾವ್ಯ, ನಾಟಕ, ವ್ಯಾಕರಣ, ವೇದಾಂತವೇ ಮುಂತಾದ ಶಾಸ್ತ್ರಗಳಲ್ಲೂ, ಕವಿತೆಯಲ್ಲೂ ಉದ್ದಾಮ ಪಂಡಿತರು. ಪಂಡಿತ ಮಂಡಲಿಗಳಲ್ಲಿಯೂ. ಅನೇಕ ರಾಜಸಭೆಗಳಲ್ಲಿಯೂ ಅಗ್ರಮರ್ಯಾದೆಗಳನ್ನು ಪಡೆದವರು. ಅತಿಶಯ ವಿದ್ವಾನಿಧಿ ಇವರು ಕನ್ನಡ, ತಮಿಳು, ತೆಲುಗು, ಹಿಂದಿ, ಸಂಸ್ಕೃತ ಭಾಷೆಗಳಲ್ಲಿ ಅಪೂರ್ವವಾದ ಉಪನ್ಯಾಸಗಳನ್ನು ಮಾಡಿದವರು. ಭರತಖಂಡವನ್ನೆಲ್ಲಾ ಅನೇಕಾವರ್ತಿ ಯಾತ್ರೆಮಾಡಿದವರು. ಹಿಂದಣ ಅನೇಕ ಜೀಯರ್ ಸ್ವಾಮಿಗಳ ಇಷ್ಟದಂತೆಯೂ ನಮ್ಮ ಸಮುದಾಯದವರ ಪ್ರಮುಖವಾದ ಪ್ರಾರ್ಥನೆಯಂತೆಯೂ ಇವರು ಕ್ರಿ.ಶ ೧೧-೨-೧೯೨೧ ರಲ್ಲಿ ರೌದ್ರಿ ಮಾಘ ಶುದ್ಧ ತೃತೀಯಾ ಶುಕ್ರವಾರದಲ್ಲಿ ಸನ್ಯಾಸಾಶ್ರಮವನ್ನು ವಹಿಸಿ, ಶ್ರೀ ರಾಮಾನುಜರ ದಿವ್ಯಪೀಠವನ್ನಲಂಕರಿಸಿದರು. ಈ ಸ್ವಾಮಿಗಳ ಆಶ್ರಮ ಸ್ವೀಕಾರ ಸಮಾರಂಭವು ಅಸಾಧಾರಣ ಪ್ರತಿಭೆಯಿಂದ ಬೆಳಗಿತ್ತು. ೧೦-೧೧-೧೯೨೩ ರಲ್ಲಿ ಶಿಷ್ಯರು, ಅಭಿಮಾನಿಗಳು ಇವರ ಪ್ರಾರ್ಥನೆಯಂತೆ ಪರಿವಾರದೊಡನೆ ಬಹಳ ವಿಜೃಂಭಣೆಯಿಂದ ಉತ್ತರ ದೇಶದ ಯಾತ್ರೆಗೆ ವಿಜಯಮಾಡಿಸಿದರು. ಏಳು ವರುಷಗಳ ಕಾಲ ಉತ್ತರ ದೇಶದ ಯಾತ್ರೆಯನ್ನು ಮಾಡಿ, ೧೦-೧೧-೧೯೩೦ ರಲ್ಲಿ ಅನಂತ ಮರ್ಯಾದೆಗಳೊಡನೆ ಬೆಂಗಳೂರು ಮಲ್ಲೇಶ್ವರಕ್ಕೆ ವಿಜಯಮಾಡಿದರು. ಈ ಯಾತ್ರಾ ಚರಿತ್ರ ಸಂಗ್ರಹವನ್ನು ಶ್ರೀಗಳವರನ್ನು ಪ್ರಾರ್ಥಿಸಿ, ಅಪ್ಪಣೆಯನ್ನು ಪಡೆದು, ಯಾತ್ರಾ ದಿನಚರಿ ಗ್ರಂಥಗಳನ್ನು ನೋಡಿಯೂ, ಕೇಳಿಯೂ, ಪ್ರತ್ಯೇಕ ಗ್ರಂಥವಾಗಿ ಈ ಗ್ರಂಥವನ್ನು ಬರೆದವನೇ ಹಿಂದೆಯೇ ಬರೆದು, ಶ್ರೀ ಮಠದ ಸಹಾಯದಿಂದ ಅಚ್ಚು ಮಾಡಿದ್ದಾನೆ. ಮುಂದಣವರಿಗೆ ಈ ಗ್ರಂಥವು ಬಹಳ ಉಪಯೋಗ. ಅನೇಕ ವಿವರಗಳಿವೆ. ಯಾತ್ರೆಯಲ್ಲಿ ಅನೇಕ ಶಿಷ್ಯರಿಗೆ ಸಮಾಶ್ರಯಣ

ನೂಸಿದರು. ನೂಜ್‌ವೇಡ್, ಪಿಠಾಪುರಂ, ತೂಣಿ, ಬೊಬ್ಬಿಲಿ, ನುಂದಸಾ, ೀವಾ, ಹೈದರಾಬಾದ್ ಸಂಸ್ಥಾನಗಳ ಮಹಾರಾಜರುಗಳಿಂದ ಸನ್ಮಾನಿತ ರಾಗಿರುವರು. ಅನೇಕ ಗ್ರಂಥಗಳನ್ನು ಪರಿಶೋಧಿಸಿ ಅಚ್ಚು ಮಾಡಿಸಿರುವರು. ನಾನಾ ಭಾಷೆಗಳಲ್ಲಿ ಅನೇಕ ಉಪನ್ಯಾಸಗಳನ್ನು ದಯಪಾಲಿಸಿರುವರು. ಹಿಂದೂ ಮತೀಯರ ಮಹಾಸಮ್ಮೇಳನದಲ್ಲಿ ಧರ್ಮಾಚಾರ್ಯ ಪೀಠವನ್ನು ಅಲಂಕರಿಸಿ, ಅಪೂರ್ವವಾದ ಮರ್ಯಾದೆಯನ್ನು ಹೊಂದಿದರು. ಶಿಲಾಶಾಸನದ ಪ್ರತಿಷ್ಠೆ, ನೂತನ ಗ್ರಾಮ ನಿರ್ಮಾಣ, ಹಿಂದಣ ಶ್ರೀ ಸ್ವಾಮಿಗಳವರ ಬೃಂದಾವನ ಜೀರ್ಣೋದ್ಧಾರ—ಈ ಕೆಲಸಗಳೆಲ್ಲಾ ನಡೆದಿವೆ. ಶಿಷ್ಯ ಸಂಪತ್ತಿಯು ಬಹಳ ಹೆಚ್ಚಿತು. ಶ್ರೀ ಯತಿರಾಜ ಮಠದ ಖ್ಯಾತಿಯು, ಉತ್ತರ, ದಕ್ಷಿಣ ಹಿಂದುಸ್ಥಾನದಲ್ಲೆಲ್ಲಾ ಹರಡಿತು. ತಿರುನಾರಾಯಣ ಪುರಕ್ಕೆ ವೈಭವದೊಡನೆ ಬಿಜಯಮಾಡಿಸಿ, ಶ್ರೀ ತಿರುನಾರಾಯಣ, ಶೆಲ್ವಪಿಳ್ಳೆ, ಉಡೈಯವರ್, ಶ್ರೀ ಲಕ್ಷ್ಮೀನರಸಿಂಹರ ಕೈಂಕರ್ಯಗಳನ್ನು ನಡೆಯಿಸುತ್ತಿದ್ದು, ಪುನಃ ಉತ್ತರದೇಶ, ಮಲಯಾಳ ದೇಶಗಳಿಗೆಲ್ಲಾ ಬಿಜಯಮಾಡಿಸಿ, ಮಹಾ ಸಭೆಗಳಲ್ಲಿ ಅಗ್ರಾಸನಾಧಿಪತ್ಯವನ್ನು ವಹಿಸಿ ಉಪದೇಶಿಸಿದರು. ಅಲ್ಲದೆ ಅನೇಕ ಅಮುದ್ರಿತವಾದ ಮಹಾ ಗ್ರಂಥಗಳನ್ನು ಪರಿಶೋಧಿಸಿ, ಮುದ್ರಣಕ್ಕೆ ಸಿದ್ಧಪಡಿಸಿದರು, ಮುದ್ರಿಸಿದರು. ಈ ಗ್ರಂಥಗಳ ನಾಮಾವಳಿಯನ್ನು ಈ ಗ್ರಂಥದ ಬೇರೆ ಪ್ರಕರಣದಲ್ಲಿ ಬರೆದಿದೆ. ನೆಲ್ಲೂರು, ಮದ್ರಾಸ್, ಕೊಚ್ಚಿ, ಗುಡಿವಾಡ ಮುಂತಾದ ಸ್ಥಳಗಳಿಗೆ ಆಹ್ವಾನಿತರಾಗಿ ಬಿಜಯಮಾಡಿಸಿದ್ದರು. ಸುಮಾರು ೨೨ ಸಂವತ್ಸರಗಳು ಶ್ರೀ ಮಠದ ಪೀಠವನ್ನಲಂಕರಿಸಿ, ೧೭—೫—೧೯೫೩ ರಲ್ಲಿ ಸ್ವಭಾನು ವೈಶಾಖ ಶುದ್ಧ ತ್ರಯೋದಶಿಯಲ್ಲಿ ತಿರು ನಾರಾಯಣಪುರದಲ್ಲಿ ಪರಮಪದಿಸಿದರು. ಇವರು ಮಲ್ಲೇಶ್ವರದಲ್ಲಿ ಶ್ರೀ ಮಠದ ಕಟ್ಟಡವನ್ನು ಪ್ರಾರಂಭಿಸಿದರು.

ಶ್ರೀ ಮಠದಲ್ಲಿ ಕೆಲವು ನಿರ್ಧಾರವಾದ ಕೈಂಕರ್ಯಗಳಿಗಾಗಿ ಶ್ರೀಗಳವರು ಪೂರ್ವಾಶ್ರಮದಲ್ಲಿ ಸಂಪಾದಿಸಿದ್ದ ೨೦೦೦ ರೂಪಾಯಿಗಳನ್ನು ಮಾಸಲಾಗಿಟ್ಟು, ಈ ಧರ್ಮವನ್ನು ನಿರಂತರವಾಗಿ ನಡೆಯಿಸಿಕೊಂಡು ಬರುವುದಕ್ಕಾಗಿ ಒಂದು ಸಮಿತಿಯನ್ನು ಏರ್ಪಡಿಸಿದ್ದಾರೆ. ಕೈಂಕರ್ಯಗಳು ನಡೆದುಬರುತ್ತಿವೆ. ಶ್ರೀಮಠ

ದೆಲ್ಲೆ ಸಂವತ್ಸರವೂ ಎಲ್ಲಾ ತಿಂಗಳುಗಳಲ್ಲಿಯೂ ಕೆಲಕೆಲವು ಗೊತ್ತಾದ ದಿನಗಳಲ್ಲಿ ಶ್ರೀ ಲಕ್ಷ್ಮೀನರಸಿಂಹದೇವರಿಗೆ ಬಾಲಭೋಗವೂ, ರಾಜಭೋಗವೂ, ಕ್ಷೀರನಿವೇದನ ಕೈಂಕರ್ಯ ನಡೆಯುವುದಕ್ಕಾಗಿ ಮುಖ್ಯವಾಗಿ ಆಂಧ್ರದೇಶದ ಅನೇಕ ಭಕ್ತಾದಿಗಳಿಂದ ದ್ರವ್ಯವು ಶೇಖರಿಸಲ್ಪಟ್ಟಿತು. ಇದು ಮೈಸೂರು ಸರ್ಕಾರದಲ್ಲಿ ಧರ್ಮನಿಧಿಯಾಗಿ ಇಡಲ್ಪಟ್ಟಿದೆ.

ಈ ಸ್ವಾಮಿಗಳಿಗೂ ಶ್ರೀಮಠದ ಟ್ರಸ್ಟಿಗಳಿಗೂ ವೈಮನಸ್ಯವುಂಟಾಗಿ ಸ್ವಾಮಿಗಳ ಕಾಲದಲ್ಲೇ ಒಂದು ವಿಧವಾಗಿ ಬಗೆ ಹರಿಯಿತು.

ಇವರ ತನಿಯರ್ಚನೆ—

ಶ್ರೀರಾಮಾನುಜಯೋಗಿನಾ ಭಗವತಾ ಪೂತೇಭಿಜಾತಂ ಕುಲೇ
ಯದ್ವದ್ಯೌ ತದುಪಕ್ರಮೇ ಯತಿಮತೇ ಸಂಪ್ರಾಪ್ತ ಮೋಕ್ಷಾಶ್ರಮಮ್ ।
ಪ್ರಾಪ್ತಾಭಿಖ್ಯಮನಂತ ಸಂಯಮಿವರಂ ಸಂಪತ್ಸುತಾಖ್ಯೇಪದೇ
ಶ್ರೀಮತ್ಸೌಮ್ಯ ನೃಸಿಂಹ ಯೋಗಿಕರುಣಾಲಬ್ಧಾತ್ಮಬೋಧಂ ಭಜೇ ॥

ಕಾಲಯುಕ್ತಿ ಶರತ್ಕುಂಭ ಮೈತ್ರತಾರಾಸಮುದ್ಭವಮ್ ।
ಯದ್ವದ್ರಿ ಯತಿರಾಜಶ್ರೀ ಸಂಪತ್ಸುತಮುನಿಂ ಭಜೇ ॥

ವಿದ್ವಾನ್ ಶ್ರೀ ಕೃಷ್ಣಕುಮಾರ ಯತಿರಾಜ ಜೀಯರ್ ಸ್ವಾಮಿಗಳು
(ಆಶ್ರಮ ಸ್ವೀಕಾರ ೧೭–೪–೧೯೪೪)

ಇವರು ಪಾರ್ಥಿವ ಸಂವತ್ಸರ ಧನುರ್ಮಾಸ ರೇವತೀನಕ್ಷತ್ರದಲ್ಲಿ ಮೇಲುಕೋಟೆಯಲ್ಲಿ ಅವತರಿಸಿದರು. ಈ ಸ್ವಾಮಿಗಳ ಹಿರಿಯರ ಪೂರ್ವಸ್ಥಳ ಪಟ್ಟಕಾಡಲ್ಲ, ಮತ್ತು ಕಾರ್ಪಂಕಾಡು. ಮೂಲಪುರುಷರು ವಾಧೂಲ ಕಂದಾಡೈ ತೋಳಪ್ಪರ್ ಎಂಬುವರು. ಬಹಳ ಹಿಂದೆಯೇ ಇವರ ಹಿರಿಯರು ತಿರುನಾರಾಯಣಪುರಕ್ಕೆ ದಯಮಾಡಿಸಿ ಈ ದೇಶೀಯರ ಸಂಬಂಧ ಬೆಳೆಯಿಸಿ ಇಲ್ಲಿಯೇ ನೆಲಸಿದರು. ಇವರ ಬಂಧುಗಳು ಕಾರ್ಪಂಕಾಡಿನಲ್ಲಿ ಈಗಲೂ ಇದ್ದಾರೆ. ಇವರು ನಾರಾಯಣಪಟ್ಟದವರು. ಇವರು ಮೇಲುಕೋಟೆ ಸಂಸ್ಕೃತ ಪಾಠಶಾಲಾಧ್ಯಕ್ಷರಾಗಿದ್ದ ಶ್ರೀ॥ ಅ॥ ಪಂಡಿತರತ್ನಂ ಕುಪ್ಪಣ್ಣ ಸ್ವಾಮಿಗಳವರಲ್ಲಿ ಸಾಹಿತ್ಯ, ವೇದಾಂತ ಸಂಪ್ರದಾಯ ಗ್ರಂಥಗಳನ್ನು

ಅಧಿಕರಿಸಿ ವೇದಾಂತಶಾಸ್ತ್ರದಲ್ಲಿ ಪಂಡಿತರಾದರು. ಕೆಲವುಕಾಲ ಸಂಸ್ಕೃತ ವಿದ್ಯಾಪ್ರಚನ ನಡೆಯಿಸಿದ ಅನಂತರ ಶ್ರೀರಂಗದಲ್ಲಿ ಕೋಯಿಲ್ ಕಂದಾಡೈ ಅಣ್ಣನ್ ಸ್ವಾಮಿಗಳವರ ತಿರು ವಾಳಿಗೆಯಲ್ಲಿ ಪಾಠಪ್ರವಚನ ಮಾಡುತ್ತಾ ಸದಾಚಾರಶೀಲರಾಗಿ ದಯಮಾಡಿಸಿದ್ದರು.

ಶ್ರೀ ಮಠದ ಶಿಷ್ಯಾಭಿಮಾನಿಗಳ ಪ್ರಾರ್ಥನೆಯಿಂದ ಶ್ರೀ ಯತಿರಾಜ ಮಠದಲ್ಲಿ ಶ್ರೀ ತಾರಣ ಸಂವತ್ಸರ (ಕ್ರಿ. ಶ. ೧೭–೪-೧೯೪೪) ಶುಭದಿವಸ ವೇದಪುಷ್ಕರಿಣಿ ದತ್ತಾತ್ರೇಯಪೀಠದಲ್ಲಿ ತುರೀಯಾಶ್ರಮವನ್ನು ಸ್ವೀಕರಿಸಿ ಶ್ರೀ ಯತಿರಾಜ ಮಠದಲ್ಲಿ ದಿವ್ಯಪೀಠವನ್ನು ಅಲಂಕರಿಸಿದರು. ಬೆಂಗಳೂರಿನ ಮಲ್ಲೇಶ್ವರಂ ನಿವೇಶನಗಳಲ್ಲಿ ಶ್ರೀಮಠದ ಕಟ್ಟಡಗಳು ಇವರ ಕಾಲದಲ್ಲಿ ಅಭಿವೃದ್ಧಿಯಾಗಿವೆ.

ಇವರ ತನಿಯನ್—

ಶ್ರೀಮತ್ಕೃಷ್ಣಕುಮಾರವಂಶಜಮುನಿಂ ವಾಧೂಲಗೋತ್ರೋದ್ಭವಂ
ನಾಮ್ನಾ ಶ್ರೀ ತಿರುವೇಂಕಟಾರ್ಯಮನಘಂ ಪ್ರಾಪ್ತಾಗಮಾಂತದ್ವಯಂ।
ಯದ್ವದ್ರಾ ಯತಿರಾಜಪೂಜಕಮಠೇ ಸಂಪ್ರಾಪ್ತ ತುರ್ಯಾಶ್ರಮಂ
ಶ್ರೀನಾರಾಯಣ ಲಕ್ಷ್ಮಣಾರ್ಯ ಯಮಿನಂ ಸೇವೇ ಸದಾ ಸಾದರಂ ॥

ಪಾರ್ಥಿವಾಬ್ದೇ ಧನುರ್ಮಾಸ ರೇವತ್ಯಾಮಾಹಿತೋದಯಂ।
ನಾರಾಯಣ ಸದಾಶ್ಲಿಷ್ಟ ರಾಮಾನುಜಗುರುಂ ಭಜೇ ॥

। ಶ್ರೀಮತೇ ರಾಮಾನುಜಾಯ ನಮಃ ।

ಶ್ರೀ ಯದುಗಿರಿ ಯತಿರಾಜ ಮುತದ ಕೆಲವು ಜೀಯರ್ ಸ್ವಾಮಿಗಳು

ತಿರುನಾಮವು	ಆಶ್ರಮ ಸ್ವೀಕಾರ	ಪರಮಪದಿಸಿದ ಕಾಲ	ಪರಮಪದಿಸಿದ ಸ್ಥಳ	ತಿರುನಕ್ಷತ್ರ
	ಕ್ರಿ. ಶ.	ಕ್ರಿ. ಶ.		
ಶ್ರೀರಾಮಾನುಜಾಚಾರ್ಯರು		೧೧೩೭	ಶ್ರೀರಂಗಮ್	ಆರ್ದ್ರಾ
ಶ್ರೀ ದೇಶಾದ್ರಿ ಕೇಳ್ವಿ ತಿರುನಾರಾಯಣ ರಾಮಾನುಜ ಜೀಯರ್ ಸ್ವಾಮಿಗಳು	೧೧೦೩	೧೧೯೯	ತಿರುನಾರಾಯಣಪುರಂ	
ಶ್ರೀ ತಿರುನಾರಾಯಣ ಜೀಯರ್ ಸ್ವಾಮಿಗಳು	೧೧೯೯	೧೧೯೬	ತಿರುನಾರಾಯಣಪುರಂ	
ಶ್ರೀ ಯತಿರಾಜ ಜೀಯರ್ ಸ್ವಾಮಿಗಳು	೧೧೯೬	೧೨೩೧	ತಿರುನಾರಾಯಣಪುರಂ	
ಶ್ರೀ ಯದುಗಿರಿ ನಾರಾಯಣ ಜೀಯರ್ ಸ್ವಾಮಿಗಳು	೧೨೩೧	—?	ತಿರುನಾರಾಯಣಪುರಂ	
ಶ್ರೀ ರಾಮಾನುಜ ಜೀಯರ್ ಸ್ವಾಮಿಗಳು	೧೪೫೫ರಲ್ಲಿ ಪಟ್ಟದಲ್ಲಿದ್ದರು			
ಶ್ರೀ ವೇದಾಂತಿ ರಾಮಾನುಜಮುನಿ ಸ್ವಾಮಿಗಳು	೧೫೨೫	೧೫೬೫		ವೃಷಭಮಾಸ, ಪುಷ್ಯ
ಶ್ರೀ ಕುಣಿಗಲ್ ಸ್ವಾಮಿಗಳು (ಬಹುಕುಟುಂಬಿ ಸ್ವಾಮಿಗಳು)	—?	೧೬೨೩	ತಿರುನಾರಾಯಣಪುರಂ	
ಶ್ರೀ ತೊಂಡನೂರು ಪ್ರತಿವಾದಿ ಭಯಂಕರಂ ಶಿಂಗ್ರೈಯ್ಯಂಗಾರ್ ಸ್ವಾಮಿಗಳು	೧೬೨೩	೨೦–೧೨–೧೬೫೯	ತಿರುನಾರಾಯಣಪುರಂ	ಕನ್ನಿ, ಸ್ವಾತಿ
ಶ್ರೀ ತಿಟ್ಟುಮೇಲ್ ಅನನ್ತಾಳ್ವಾರ್ ಸ್ವಾಮಿಗಳು	೧೯–೧೨–೧೬೫೯	೧೬೪೯	ತಿರುನಾರಾಯಣಪುರಂ	ಕುಂಭಮಾಸ, ಚಿತ್ತಾ
ಶ್ರೀ ಛಾಂದೋಗ್ಯಂ ಕುಪ್ಪನೈಯ್ಯಂಗಾರ್ ಸ್ವಾಮಿಗಳು	೧೬೪೯	೧೬೮೫		ಕನ್ನಿ, ಪೂರ್ವ

ಶ್ರೀ ನಾಟೇರಿ ವರದಾಚಾರ್ಯ ಸ್ವಾಮಿಗಳು (ಚಿನ್ನ ಸ್ವಾಮಿಗಳು)	೧೮೫೪	೧೮೯೦	ರೇವಾ, ಗೋವಿಂದಘಡ	ಕುಂಭ, ರೇವತಿ
ಶ್ರೀ ಮುದಿಗುಂಬಂ ಸ್ವಾಮಿಗಳು (ಕೃಷ್ಣಯ್ಯನ್ ವೆಂಕಟಾಚಾರ್ಯ ಸ್ವಾಮಿಗಳು)	೧೮೬೭	೧೯-೬-೧೮೭೪	ತಿರುನಾರಾಯಣಪುರಂ	ಮಿಥುನಂ, ಭರಣಿ
ಶ್ರೀ ಪೆರಿಯಕುಮಾರ ಶಿಂಗ್ರಾಚಾರ್ಯ ಸ್ವಾಮಿಗಳು (ದೊಡ್ಡ ಸ್ವಾಮಿಗಳು)	೧೯-೬-೧೮೭೪	೨೩-೬-೧೯೭೬	ತಿರುನಾರಾಯಣಪುರಂ	ಮಿಥುನಂ, ಪೂರ್ವಾಭಾದ್ರ
ಶ್ರೀ ನಾಟಂಪಳ್ಳಿ ಅಳಹಿಯ ಶಿಂಗರಾಚಾರ್ಯ ಸ್ವಾಮಿಗಳು	೧೮೭೬	೧೮೮೬	ಶ್ರೀ ಕೂರ್ಮ	ಕರ್ಕಾಟಕಂ, ಪೂರ್ವಾಭಾದ್ರ
ಶ್ರೀ ನಾಟಂಪಳ್ಳಿ ತಿರುನಾರಾಯಣ ಪೆರುಮಾಳ್ ಸ್ವಾಮಿಗಳು	೧೮೮೬	೩-೮-೧೮೮೭	ನಾಗಪುರ	ಮಿಥುನಂ, ಆರಿದ್ರಾ
ಶ್ರೀ ಜೀಯರ್ ಸನ್ನಿಧಿ ತಿರುಮಲೈಚಾರ್ಯ ಸ್ವಾಮಿಗಳು	೧೮೭೭	೨೮-೧೦-೧೯೦೧	ಗೋವಿಂದಘಡ	ಕರ್ಕಾಟಕಂ, ಸ್ವಾತಿ
ಶ್ರೀ ಚಿನ್ನಕುಮಾರ ಶಿಂಗ್ರಾಚಾರ್ಯ ಸ್ವಾಮಿಗಳು	೨೩-೧-೧೯೦೨	೨೬-೧೧-೧೯೦೭	ತಿರುನಾರಾಯಣಪುರಂ	ವೃಷಭಂ, ಅನೂಷಂ
ಶ್ರೀ ಕುಟ್ಟಿಯತ್ತಂಬಿ ದಾಮೋದರಂ ಅಳಕಿಯ ಶಿಂಗರಾಚಾರ್ಯ ಸ್ವಾಮಿಗಳು	೧೮-೭-೧೯೦೮	೧೩-೬-೧೯೧೩	ತಿರುನಾರಾಯಣಪುರಂ	ಮೇಷಂ, ಶತಭಿಷೆ
ಶ್ರೀ ಕೋಪೆ ವೆಂಕಟಾಚಾರ್ಯ ಸ್ವಾಮಿಗಳು	೧೮-೭-೧೯೧೩	೫-೭-೧೯೧೭	ತಿರುನಾರಾಯಣಪುರಂ	ಮಿಥುನಂ, ಸ್ವಾತಿ
ಶ್ರೀ ಆಸೂರಿ ಅನನ್ತಾಳ್ವಾರ್ ಸ್ವಾಮಿಗಳು	೧೧-೨-೧೯೨೧	೧೭-೫-೧೯೪೩	ತಿರುನಾರಾಯಣಪುರಂ	ಕುಂಭಮಾಸಂ, ಅನುರಾಧಾ

ಪ್ರಕರಣ ೭

ಕೆಲವು ಧರ್ಮಗಳು

ಬಹಳ ಹಿಂದಣ ಕಾಲದಿಂದಲೂ ನಮ್ಮ ಹಿರಿಯರು ಅನೇಕ ಧರ್ಮ ಕೆಲಸಗಳನ್ನು ಮಾಡಿರುವರು. ಆದರೂ ಅನೇಕರು ತಾವು ಮಾಡಿದ ಕಾರ್ಯ ಗಳ ಪ್ರಶಂಸೆಯನ್ನು ಮಾಡಿಕೊಂಡಿಲ್ಲ. ಮಾಡುವ ಧರ್ಮವೆಲ್ಲಾ 'ಭಗ ವತ್ಕೈಂಕರ್ಯ ರೂಪ'ವೆಂದೇ ಅವರು ಭಾವಿಸಿದ್ದರು. ಅವರವರ ಸಮಕಾಲಿ ಕರೂ ಅವರಿಂದ ಈಚಿನವರೂ ಅಲ್ಲಲ್ಲಿ ಹೊಗಳಿದ್ದಾರೆ. ಮತ್ತೆ ಕೆಲವರು ಚರಿತ್ರೆಯನ್ನು ಉಳಿಸುವುದಕ್ಕಾಗಿಯೂ, ಇತರರಿಗೆ ಮಾರ್ಗದರ್ಶನಕ್ಕಾ ಗಿಯೂ, ತಮ್ಮ ಹಿರಿಯರ ಗೌರವಾರ್ಥವಾಗಿಯೂ ಶಾಸನಗಳನ್ನು ಸ್ಥಾಪಿ ಸಿದ್ದಾರೆ. ಕ್ರಿ. ಶ. ೧೫ನೇ ಶತಮಾನದಿಂದ ಈಚೆಗೆ ತಿಳಿದುಬಂದ ಕೆಲವು ಧರ್ಮ ಕಾರ್ಯಗಳನ್ನು ಇಲ್ಲಿ ವಿಜ್ಞಾಪಿಸಿದೆ. ಇನ್ನೂ ಅನೇಕ ವಿಷಯಗಳು ಸಂಗ್ರಹವಾಗಬೇಕಾಗಿವೆ.

೧. ಶ್ರೀರಂಗಪಟ್ಟಣದಲ್ಲಿ ವಿಜಯನಗರದ ವೈಸ್‌ರಾಯರಾಗಿ 'ಶ್ರೀರಂಗ ರಾಯ'ನೆಂಬ ಅಧಿಕಾರನಾಮವಿದ್ದವರಿಗೆ ಕ್ರಿ. ಶ. ೧೫ನೇ ಶತಮಾನದಲ್ಲಿ ಮಂತ್ರಿಗಳಾಗಿ ನಾಗಮಂಗಲಾಧಿಪತಿಯಾಗಿದ್ದ ಶ್ರೀ॥ ತಿಮ್ಮಣ್ಣ ದಂಡನಾಯ ಕರು (ತಿರುಮಲಾಚಾರ್ಯರು) ಶ್ರೀ ರಾಮಾನುಜರಿಂದೀಚೆಗೆ ಅಳಿಸಿಹೋಗು ತ್ತಿದ್ದ ತಿರುನಾರಾಯಣಪುರವನ್ನು ಜೀರ್ಣೋದ್ಧಾರಮಾಡಿದರು. ತಿರುನಾರಾ ಯಣಪುರದ ಶಾಸನ ಒಂದರಲ್ಲಿ (ಕ್ರಿ. ಶ. ೧೪೫೮) ತಮ್ಮನ್ನು "ಯಾದವಗಿರಿ ಜೀರ್ಣೋದ್ಧಾರಕ" ಎಂದು ಕರೆದುಕೊಂಡಿದ್ದಾರೆ. ನಮಗೆ ಸ್ವಲ್ಪ ಹೆಚ್ಚು ಕಡಿಮೆ ಈಗ ಇರುವಂತೆ ತಿರುನಾರಾಯಣಪುರದ ದೇವಸ್ಥಾನ ಇತ್ಯಾದಿ ಗಳನ್ನು ಒದಗಿಸಿ ಪುಣ್ಯವನ್ನು ಗಳಿಸಿದ ಮಹಾತ್ಮರಿವರು. ಶ್ರೀರಂಗಪಟ್ಟಣದ ತಾಲ್ಲೂಕು ೯೯ನೇ ನಂಬರ್ ಶಾಸನದಲ್ಲಿ ವಿವರಗಳನ್ನು ಪರಾಂಬರಿಸ ಬಹುದು.

೨. ಕ್ರಿ. ಶ. ೧೬೭೬ರಲ್ಲಿ ಪ್ರಸಿದ್ಧ ಚಿಕ್ಕದೇವರಾಜ ಒಡೆಯರವರು ಪ್ರಧಾನ ತಿರುಮಲೈಯ್ಯಂಗಾರ್ಯರ ಮಕ್ಕಳಾದ ಪ್ರಧಾನ ಅಪ್ಪಾಜಯ್ಯನವ

ರಿಗೆ ಮಂತ್ರಿಪದವಿಯನ್ನು ಅಂಗೀಕರಿಸುವಂತೆ ತಿಳಿಸಿದುದೂ, ಪ್ರಧಾನ ಅಪ್ಪಾಜಯ್ಯನವರು ತಮ್ಮ ಮಗಳ ಮಗನಾದ ತಿರುಮಲೈಯ್ಯಂಗಾರ್ಯನನ್ನು ಮಂತ್ರಿಯಾಗಿ ನೇಮಕಮಾಡಿಸಿದುದೂ ಹಿಂದೆಯೇ ನಿರೂಪಿತವಾಗಿದೆ. ಈ ಪ್ರಸಿದ್ಧ ಮಂತ್ರಿ ತಿರುಮಲೈಯ್ಯಂಗಾರ್ಯರು ಮೇಲುಕೋಟಿಗೆ ಹೋಗುವ ದಾರಿಯಲ್ಲಿ ಕೆರೆ, ಗ್ರಾಮ, ಛತ್ರಗಳನ್ನು ಕಟ್ಟಿಸಿ ಕೀರ್ತಿಯನ್ನು ಗಳಿಸಿದರು; ತಿರುಮಲಸಾಗರ, ತಿರುಮಲಸಾಗರಛತ್ರ, ದೇವಸ್ಥಾನ ಇತ್ಯಾದಿ. ಹಿಂದೆ ತಿರುಮಲಸಾಗರದಲ್ಲಿ ಪ್ರತಿಷ್ಠಿತರಾಗಿದ್ದ ಶ್ರೀನಿವಾಸದೇವರು ಈಗ ಮೈಸೂರು ವಾಣೀವಿಲಾಸಮೊಹಲ್ಲಾದಲ್ಲಿ ನೂತನವಾಗಿ ಕಟ್ಟಿರುವ ದೇವಸ್ಥಾನದಲ್ಲಿ ಬಿಜಯಮಾಡಿ ಆರಾಧನೆಯನ್ನು ಸ್ವೀಕರಿಸುತ್ತಿದ್ದಾರೆ.

೩. ಕ್ರಿ. ಶ. ೧೮೧೦ ರಲ್ಲಿ ಪ್ರಧಾನ ತಿರುಮಲರಾಯರು ಮಂಡಯದ ಪೂರ್ವದಿಕ್ಕಿನಲ್ಲಿ ಶ್ರೀ ಲಕ್ಷ್ಮೀಜನಾರ್ದನ ಸ್ವಾಮಿಯವರ ದೇವಸ್ಥಾನದ ಉಪಯೋಗಕ್ಕಾಗಿ ಕೊಳ, ತೋಪು, ಮಂಟಪ ಇವನ್ನು ನಿರ್ಮಿಸಿ ಶಾಸನಗಳನ್ನಿಟ್ಟರು, ತಮ್ಮ ತಂದೆ ಗೋವಿಂದರಾಜಯ್ಯನವರ ಹೆಸರಿನಲ್ಲಿ ಗೋವಿಂದರಾಜ ಪುಷ್ಕರಿಣಿ, ಗೋವಿಂದರಾಜೋದ್ಯಾನ ಎಂಬ ನಾಮಕರಣದಿಂದ.

೪. ರಾಮಾನುಜಪುರದಲ್ಲಿ ಒಂದು ಕೊಳ, ಮಂಡಯದ ಪಶ್ಚಿಮದಿಕ್ಕಿನಲ್ಲಿ ದೇವಸ್ಥಾನಕ್ಕಾಗಿ ಒಂದು ಕೊಳ, ಮತ್ತು ತೋಪು, ತಿರುನಾರಾಯಣಪುರದಲ್ಲಿ ಒಂದು ಕೊಳ ಇವೆಲ್ಲಾ 'ಶಿಂಗ್ರೈಯ್ಯಂಗಾರ್ ಕೊಳಗಳೆ'ಂದು ಪ್ರಖ್ಯಾತಿಯಾಗಿವೆ. ಈ ಗ್ರಂಥವನ್ನು ಖಚಿತ ಜಟಾವಲ್ಲಭ ಶಿಂಗ್ರೈಯ್ಯಂಗಾರ್ಯನ ಹಿಂದಣ ಹಿರಿಯವರಿವರೆಂದು ತಿಳಿಯಬರುತ್ತದೆ. ತೀರ್ಮಾನವಾಗಿ ಹೇಳಲು ಸಾಧ್ಯವಿಲ್ಲ. ಕ್ರಿ. ಶ. ೧೮೧೦ ಕ್ಕೂ ಬಹಳ ಹಿಂದೆಯೇ ಎಂದು ಹೇಳಬಹುದಾಗಿದೆ.

೫. ಶ್ರೀ॥ ಉ॥ ಯೋಗೀ ಪಾರ್ಥಸಾರಥಿ ಐಯ್ಯಂಗಾರ್ ಸ್ವಾಮಿಗಳವರೂ, ಇವರ ಧರ್ಮಪತ್ನಿಯವರೂ ಅಯೋಧ್ಯೆಯಲ್ಲಿ ಶ್ರೀರಾಮ ದೇವಸ್ಥಾನವನ್ನು, ಹೊಸದಾಗಿ ನಿರ್ಮಿಸಿ ಅಸಾಧಾರಣವಾದ ಖ್ಯಾತಿಯನ್ನು ಗಳಿಸಿದ್ದಾರೆ.

೬. ಕ್ರಿ. ಶ. ೧೮೭೫ ರ ಸುಮಾರಿನಲ್ಲಿಯ ವಿಷಯ. ಈ ಗ್ರಂಥವನ್ನು ಬರೆದವನ ತಂದೆ ಶ್ರೀ॥ ಉ॥ ಜಟಾವಲ್ಲಭ ತಿರುಮಲೈಯ್ಯಂಗಾರ್ಯರು. ಮಂಡಯದಲ್ಲಿ ಒಂದು ಸಂಸ್ಕೃತಪಾಠಶಾಲೆಯನ್ನು ಸ್ಥಾಪಿಸಿ ಹನ್ನೆರಡುವರ್ಷಗಳ ಕಾಲ ಸ್ವಂತ ಖರ್ಚಿನಿಂದ ನಡೆಯಿಸಿದರು. ಇಲ್ಲಿ ಅನೇಕರು ವಿದ್ವಾಂಸರಾದರು. ಹಿಂದಣ ಶ್ರೀ ಯದುಗಿರಿ ಯತಿರಾಜಜೀಯರ್ ಸ್ವಾಮಿಗಳಾಗಿದ್ದ ಶ್ರೀ॥ ಉ॥ ಅಸೂರಿ ಆನಂದಾಳ್ವಾರ್ ಸ್ವಾಮಿಗಳವರು ಈ ಪಾಠಶಾಲೆಯ ವಿದ್ಯಾರ್ಥಿ. ಶ್ರೀ॥ ಉ॥ ಜಗ್ಗು ಶಿಂಗ್ರೈಯ್ಯಂಗಾರ್ಯ ಸ್ವಾಮಿಗಳವರನ್ನು ಮಂಡಯಕ್ಕೆ ಕರೆಯಿಸಿ ಸುಮಾರು ಹನ್ನೆರಡು ವರ್ಷಗಳ ಕಾಲ ಪಾಠಶಾಲೆಯನ್ನು ನಡೆಸಿ ಯಶಸ್ವಿಗಳಾದರು.

೭. ಶ್ರೀ॥ ಉ॥ ಅಣ್ಣಾಥೊರೆ ತಿರುನಾರಣೈಯ್ಯಂಗಾರ್ಯರು [ಸ್ವಾಮಿ ಶ್ರೀ ವಾಸಾನಂದ ಸ್ವಾಮಿಗಳವರ ತಾತಂದಿರು] ಮಂಡಯದ ಶ್ರೀ ಲಕ್ಷ್ಮೀ ಜನಾರ್ದನ ಸ್ವಾಮಿಯವರ ದೇವಸ್ಥಾನದ ಹೊರಗಣ ಪ್ರಾಕಾರದ ಕೋಟೆಯನ್ನು ಎತ್ತರಿಸಿ ಕಟ್ಟಿಸಿದರೆಂದು ಹೇಳುತ್ತಾರೆ.

೮. ಮದ್ರಾಸ್ ತಿರುವಲ್ಲಿಕ್ಕೇಣಿಯಲ್ಲಿ **"ವೇದವೇದಾಂತ ವರ್ಧಿನೀ"** ಎಂಬ ಸಂಘ ಒಂದನ್ನು ನಮ್ಮ ಸಮುದಾಯದ ಕೆಲವು ಹಿರಿಯ ಮಹನೀಯರು ಮದ್ರಾಸಿನಲ್ಲಿ ಪ್ರಮುಖರಾಗಿದ್ದ ಕೆಲವು ವರ್ತಕ ಮತ್ತು ಇತರ ಮಹಾಶಯರನ್ನು ಸೇರಿಸಿ ಪ್ರಾರಂಭಿಸಿದರು. ಸುಮಾರು ೧೫ ವರ್ಷಗಳ ಕಾಲ ಯಶಸ್ವಿಯಾಗಿ ನಡೆಯಿಸಿ, ಖ್ಯಾತಿಯನ್ನು ಗಳಿಸಿದ ಮೇಲೆ ಈ ಸಂಘವು ೩೭-೧೧-೧೯೪೪ ರಲ್ಲಿ ರಿಜಿಸ್ಟರಾಗಿದೆ. ತೆಲುಗು ಭಾಷೆಯಲ್ಲಿ ಸಂಘದ ಉದ್ದೇಶವೂ ನಿಬಂಧನೆಗಳೂ ಅಚ್ಚು ಮಾಡಲ್ಪಟ್ಟಿವೆ. ಇದರ ಮಾದರಿಯು ಈಗಲೂ ಎಲ್ಲರೂ ಒಪ್ಪುವಂತೆ ಅಚ್ಚುಮೆಚ್ಚಾಗಿದೆ. ನಿರ್ವಾಹಸಭೆಯಲ್ಲಿ ಪ್ರಮುಖರಾಗಿದ್ದ ನಮ್ಮ ಸಮುದಾಯದ ಮಹನೀಯರಿವರು :—(೧) "ಶ್ರೀಮಾನ್ ಶ್ರೀ ಉ. ವೇ. ಮನ್ನಿಶಿಂಗರಾಚಾರ್ಯಲು, ಮದ್ರಾಸ್ ಬ್ಯಾಂಕ್ ಹೆಡ್ ಕ್ಯಾಷ್‌ಕೀಪರ್, ತಿರುವಲ್ಲಿಕ್ಕೇಣಿಲೋ ವಾಸಮು, (೨) ಶ್ರೀಮಾನ್ ಶ್ರೀ ಮ. ಆ. ಶಿಂಗರಾಚಾರ್ಯಲು, ಡಿಪ್ಟೀ ಕ್ಯಾಷ್‌ಕೀಪರ್, ತಿರುವಲ್ಲಿಕ್ಕೇಣಿಲೋ ವಾಸಮು, (೩) ಶ್ರೀಮಾನ್ ಶ್ರೀ ಉ. ವೇ. ಮ. ಆ. ತಿರುನಾವಾ

ಯಣಾಚಾರ್ಯುಲು, ಹೈಕೋರ್ಟು ವಕೀಲ್, ತಿರುವಲ್ಲಿಕ್ಕೇಣಿಲೋ ವಾಸಮು, (4) ಶ್ರೀಮನ್ ಶ್ರೀ ಉ. ವೇ. ಮ. ಆಸೂರಿ ಪಾರ್ಥಸಾರಥಿ ಐಯ್ಯಂಗಾರ್, ಹೈಕೋರ್ಟ್ ಅಡ್ವಕೇಟ್, ತಿರುವಲ್ಲಿಕ್ಕೇಣಿಲೋ ವಾಸಮು.

ಈ ಸಂಘದ ಉದ್ದೇಶವು: "ತಿರುವಲ್ಲಿಕ್ಕೇಣಿ ಶ್ರೀಪಾರ್ಥಸಾರಥಿಸ್ವಾಮಿ ಸನ್ನಿಧಿಯೊಕ್ಕ ಪ್ರಕೃತಸಂಪ್ರದಾಯನುಸಾರಮುಗನೇ ಉಭಯ ವೇದಾಂತ ಮುಲನು ವದಂಗಂಬುಲನು ಪಾಠಶಾಲಾದುಲನೇರ್ಪರಚಿ ಪ್ರವಚನಮು ಜೇಯಿಂಚುಟಯು ತದಭಿವೃದ್ಧಿ ಕಾವಶ್ಯಕಂಬಗು ಯಾವತ್ಕಾರ್ಯಂಬುಲನು ಜಂತಿಂಚಿ ನಡಿಪಿಂಚುಟಯುಮಾತ್ರಮೇ."

೯. ಕ್ರಿ. ಶ. 1913 (14-7-1913)ರಲ್ಲಿ ಶ್ರೀ|| ಉ|| ದಿವಾನ್ ಬಹದ್ದೂರ್, ಎಂ. ಓ ಪಾರ್ಥಸಾರಥಿ ಐಯ್ಯಂಗಾರ್ ಸ್ವಾಮಿಗಳವರು ಒಂದು ಲಕ್ಷ ರೂಪಾಯಿಗಳ ಧರ್ಮವನ್ನು ಮಾಡಿ ಶಾಸನವನ್ನು ಬರೆದಿರವರು ಈ ಪಣದ ವೃದ್ಧ್ಯಂಶದಲ್ಲಿ, (1) ಮತ್ತು ಇತರ ಧರ್ಮಗಳಗಲ್ಲದೆ ಮುಂಡಯುವಲ್ಲಿ ಉತ್ಸವಾದಿಗಳಿಗೆ ಪ್ರತಿವರ್ಷವೂ 70 ರೂಪಾಯಿಗಳು, (2) ಮುಂಡಯುದ ಸಮುದಾಯದ ವಿದ್ಯಾರ್ಥಿಗಳಿಗಾಗಿ ಪ್ರತಿವರ್ಷವೂ 500 ರೂಪಾಯಿಗಳೂ, ಮತ್ತು 3) ಮಂಡಯದ ಸಮುದಾಯುಡಲ್ಲಿ ಬಡವರಾದವರಿಗೆ ಅನಶ್ಯಕ ವಿವ್ಹಾಗ ಸಹಾಯ ಮಾಡಲು 200 ರೂಪಾಯಿಗಳೂ ಮಾಸಲಾಗಿಡಲ್ಪಟ್ಟವೆ. ಈ ಮಹಾನುಭಾವರು ಧರ್ಮ ಮಾಡಿದ ಸುಮೂರ್ತವೇ ಈ ಶತಮಾನದಲ್ಲಿ ನಮ್ಮ ಸಮುದಾಯದ ಮಹಾಜನಗಳ ಮಹಾಸಭೆಗಳು ನಡೆಯುವುದಕ್ಕೆ ಕಾರಣವಾಯಿತು. 1923ರಲ್ಲಿ ಪುನಃ ಒಂದು ಲಕ್ಷ ರೂಪಾಯಿಗಳನ್ನು ದಾನ ಮಾಡಿದರು. ಈಚೆಗೆ ಧರ್ಮಕಾರ್ಯಗಳು ಬಹುಮಟ್ಟಿಗೆ ವೃದ್ಧಿಯಾಗಿವೆ.

10. ಅಯೋಧ್ಯೆ ಶ್ರೀರಂಗಮ್ಮನವರು ಶ್ರೀರಂಗಪಟ್ಟಣದಲ್ಲಿ ಶ್ರೀ ಯತಿರಾಜಮಠವನ್ನು ಕಟ್ಟಿಸಿ ನಿತ್ಯಕಟ್ಟಲೆ ಕೈಂಕರ್ಯವೂ, ಹೆಚ್ಚುಕಟ್ಟಲೆಯಾಗಿ ವೈರಮುಡಿ ಉತ್ಸವ ಕಾಲದಲ್ಲಿಯೂ, ತುಲಾಮಾಸ ಕಾಲದಲ್ಲಿಯೂ ಬಿಜಮಾಡಿಸುವ ಶ್ರೀವೈಷ್ಣವ ಮಹಾಜನಗಳಿಗೆ ತದೀಯಾರಾಧನೆ ನಡೆಯು

ಮಂತೆ ಏರ್ಪಡಿಸಿರುವರು. ಶ್ರೀ ಶ್ರೀರಂಗಮ್ಮನವರು 'ದೊಡ್ಡಮನೆ'ಯವರ ಮಗಳು. ಇವರು ಶ್ರೀ|| ಉ|| ಶ್ರೀ ಯೋಗೀ ಪಾರ್ಥಸಾರಥಿ ಐಯ್ಯಂಗಾರ್ ಸ್ವಾಮಿಗಳವರಲ್ಲಿಯೂ, ಅವರ ಪತ್ನಿ ಶ್ರೀ ಶಿಂಗಮ್ಮನವರಲ್ಲಿಯೂ ಜ್ಞಾನಾರ್ಜನೆಯನ್ನು ಮಾಡಿದರು. ಶ್ರೀರಂಗಮ್ಮನವರು ಪರಮಪದಿಸಿದ ಅನಂತರ ಶ್ರೀಮದಿತ್ಯಾದಿ ಭಾಷ್ಯಾಚಾರ್ ಸ್ವಾಮಿಗಳ ಮಗಳು ಶ್ರೀ ಶ್ರೀರಂಗ ನಾಯಕಮ್ಮನವರು ಈ ಮಹತ್ಕಾರ್ಯದಲ್ಲಿ ಅನ್ವಯಿಸಿದ್ದಾರೆ.

೧೧. ತಿರುನಾರಾಯಣಪುರದಲ್ಲಿ ಶ್ರೀಮದಿತ್ಯಾದಿ ಏಶಾಮಿ ಶ್ರೀನಿವಾಸಯ್ಯಂಗಾರ್ಯರು ಮಾಡಿರುವ ಧರ್ಮಕಾರ್ಯವನ್ನು ಎಷ್ಟು ಹೊಗಳಿದರೂ ಸಾಲದುದಾಗಿದೆ. ಅಷ್ಟತೀರ್ಥ ರಥೋತ್ಸವದಲ್ಲಿ ತಿರುನಾರಾಯಣಪುರದ ಬೆಟ್ಟದ ದಾರಿಯಲ್ಲಿ ಎಂಟು ಮಹಾತೀರ್ಥಗಳಿಗೂ ದೇವರು ಬಿಜಯಮಾಡಿಸುತ್ತಾರೆ. ನಾಲ್ಕಾರು ಮೈಲಿಗಳ ಈ ದಾರಿಯು ಬಹಳ ಕಷ್ಟತರವಾಗಿತ್ತು. ಈ ದಾರಿಗೆಲ್ಲಾ ಶ್ರೀಮದಿತ್ಯಾದಿ ಏಶಾಮಿ ಶ್ರೀನಿವಾಸ್ಯೈಯ್ಯಂಗಾರ್ ಸ್ವಾಮಿಗಳು **ಸ್ವಂತ ದೇಹಶ್ರಮ**ದಿಂದಲೂ ಸ್ವಲ್ಪಮಟ್ಟಿಗೆ ಇತರರ ಸಹಾಯದಿಂದಲೂ ಬೆಟ್ಟದ ಕಲ್ಲುಗಳನ್ನು ಹಾಸಿ, ದೇವರ ಉತ್ಸವಕ್ಕೆ ಸುಗಮವಾದ ಶಾಶ್ವತವಾದ ದಾರಿಯನ್ನು ನಿರ್ಮಿಸಿದ್ದಾರೆ. ಇದಕ್ಕಾಗಿ ವರ್ಷಗಟ್ಟಲೆ ದುಡಿದಿರುವ ಮಹಾನುಭಾವರಿವರು. ಈಗಿನಕಾಲದಲ್ಲಿ ಸುಮಾರು ಒಂದುಲಕ್ಷ ರೂಪಾಯಿನ ಬೆಲೆ ಬಾಳಬಹುದಾದ ಕೆಲಸವಿದೆಂದು ಕೆಲವು ಇಂಜನೀಯರ್‌ಗಳು ಅಭಿಪ್ರಾಯ ಪಟ್ಟಿದ್ದಾರಂತೆ. ಈ ಮಹಾನುಭಾವರ ಜ್ಞಾಪಕಾರ್ಥವಾಗಿ ತಿರುನಾರಾಯಣಪುರದಲ್ಲಿ ನಮ್ಮವರು ಏನಾದರೊಂದು ಶಾಶ್ವತವಾದ ಕೃತಜ್ಞತಾಪೂರ್ವಕವಾದ ಗುರುತನ್ನು ಏರ್ಪಡಿಸಬೇಕು.

೧೨. ಮಂಡಯದ ಪಶ್ಚಿಮ ಭಾಗದಲ್ಲಿರುವ ಶಿಂಗ್ರೈಯ್ಯಂಗಾರ್ ಕೊಳದ ದಂಡೆಯಲ್ಲಿ ಶ್ರೀ ಜನಾರ್ದನ ಸ್ವಾಮಿಯವರು ತೀರ್ಥಸ್ನಾನಕ್ಕೆ ಬಿಜಯಮಾಡಿಸುವುದಕ್ಕಾಗಿ ಒಂದು ಮಂಟಪವನ್ನು ಶ್ರೀಮದಿತ್ಯಾದಿ ಬೂದನೂರು ಅನಂದಾಳ್ವಾರ್ಯರ ಹಿರಿಯರು ನಿರ್ಮಾಣಮಾಡಿದ್ದಾರೆ. ಈಗ ವರ್ಷಂಪ್ರತಿ ದೇವರನ್ನು ಅಲ್ಲಿಗೆ ಬಿಜಯಮಾಡಿಸಿ ತದೀಯಾರಾಧನೆಯನ್ನು ನಡೆಯಿಸುತ್ತಿದ್ದಾರೆ.

೧೩. ಕ್ರಿ. ಶ. ೧೯೩೭ (೩೧–೧೨–೧೯೩೭) ರಲ್ಲಿ ಶ್ರೀಮದ್ವೇದಮಾರ್ಗೇ
ತ್ಯಾದಿ ಎಂ. ಎ. ಅಪ್ಪಳಾಚಾರ್ ಸ್ವಾಮಿಗಳು ಒಂದು ದಾನಶಾಸನ
ವನ್ನೇರ್ಪಡಿಸಿ, ಮಂಡಯಂ ಸಮುದಾಯಕ್ಕೆ ಮಹೋಪಕಾರವನ್ನು ಮಾಡಿರು
ವರು. ತಿರುನಾರಾಯಣಪುರವ ದೇವಸ್ಥಾನದಲ್ಲಿ ಶ್ರೀಮದಿತ್ಯಾದಿ ಅಪ್ಪಳಾ
ಚಾರ್ ಸ್ವಾಮಿಗಳ ಆಚಾರ್ಯರೂ ತಂದೆಯವರೂ ಆದ ಶ್ರೀಮದ್ವೇದಮಾರ್ಗೇ
ತ್ಯಾದಿ ಲಕ್ಷ್ಮೀತಾತಾಚಾರ್ಯ ಸ್ವಾಮಿಗಳವರ ತಿರುನಕ್ಷತ್ರದ ದಿವಸವೂ, ವೈರ
ಮುಡಿ ಉತ್ಸವದ ಅನಂತರ ಮಹಾನೈವೇದ್ಯದ ದಿವಸವೂ ಕೈಂಕರ್ಯಗಳನ್ನು
ಸ್ಥಿರವಾಗಿ ಏರ್ಪಡಿಸಿದ್ದಾರೆ. ಶ್ರೀ ರಾಮಾನುಜಾಚಾರ್ಯರ ವರ್ಷ ತಿರುನಕ್ಷ
ತ್ರದ ಶಾತ್ತುಮರೈ ದಿವಸ ಕೈಂಕರ್ಯವನ್ನೂ ಏರ್ಪಡಿಸಿ ಇವೆಲ್ಲಕ್ಕೂ ಸ್ಥಿರಸ್ವತ್ತು
ಗಳನ್ನು ಧರ್ಮಮಾಡಿದ್ದಾರೆ.

ಅಲ್ಲದೆ ಮೈಸೂರಿನಲ್ಲಿ ಈ ಮಹಾತ್ಮರ ಪೋಷಣೆಯಲ್ಲಿಯೇ ಆದಿ
ಯಿಂದಲೂ ಬೆಳೆದುಬಂದಿರುವ "ಮಂಡಯಂ ವಿದ್ಯಾರ್ಥಿನಿಲಯ"ದ ಖರ್ಚಿ
ಗಾಗಿ ಶಾಶ್ವತವಾಗಿ ಸ್ಥಿರಸ್ವತ್ತುಗಳನ್ನು ಮಾಸಲಾಗಿಟ್ಟಿರುವರು. ಈ ಮಹಾನು
ಭಾವರೂ, ಶ್ರೀಮದಿತ್ಯಾದಿ ಕೋನೂರ್ ಶ್ರೀನಿವಾಸಯ್ಯಂಗಾರ್ ಸ್ವಾಮಿಗಳೂ
ನಮ್ಮ ವಿದ್ಯಾರ್ಥಿ ನಿಲಯದ ಬೆಳವಣಿಗೆಗಾಗಿ ಅನೇಕ ವರ್ಷಗಳಕಾಲ
ಮಹತ್ತರವಾದ ಸೇವೆಯನ್ನು ಸಲ್ಲಿಸಿ ಪುಣ್ಯವನ್ನು ಗಳಿಸಿದ್ದಾರೆ.

೧೪. ಕ್ರಿ. ಶ. ೧೯೩೬ (೧೭–೮–೧೯೩೬) ರಲ್ಲಿ ಶ್ರೀಮದಿತ್ಯಾದಿ ಎಂ.ಎ.
ನಾರಣಯ್ಯಂಗಾರ್ಯರವರು (ಸ್ವಾಮಿ ಶ್ರೀವಾಸಾನಂದ ಸ್ವಾಮಿಗಳು) ಮಂಡ
ಯಂ ಅಣ್ಣಾಥೊರೆ ಧರ್ಮವೆಂಬುದಾಗಿ ದಾನಶಾಸನವನ್ನೇರ್ಪಡಿಸಿರುವರು.
ಮಂಡಯಂ ವಿದ್ಯಾರ್ಥಿ ನಿಲಯಕ್ಕೂ, ಸಮುದಾಯದ ಕೆಲವು ಬಡವರಿಗೂ
೬,೦೦೦ ರೂಪಾಯಿಗಳ ಮೂಲಧನದ ವೃದ್ಧ್ಯಂಶದಿಂದ ಸಹಾಯ ಮಾಡಿರು
ವರು.

೧೫. ಈ ಗ್ರಂಥವನ್ನು ಬರೆದಿರುವ ಮಂಡಯಂ ಜಟಾವಲ್ಲಭ ತಿಂಗ್ಳೈ
ಯ್ಯಂಗಾರ್ಯರಿಂದ, ತನ್ನ ತಾಯಿಯವರ ಆಜ್ಞೆಯಂತೆ, ಈಗ ಸುಮಾರು ೫೫
ವರ್ಷಗಳಿಂದಲೂ ಮಂಡಯದಲ್ಲಿ ಶ್ರೀ ಲಕ್ಷ್ಮೀಜನಾರ್ದನಸ್ವಾಮಿಯವರ
ರಥೋತ್ಸವದ ದಿವಸ ದೇವಸ್ಥಾನದಲ್ಲಿ ಶ್ರೀ ವೈಷ್ಣವ ಮಹಾಜನಗಳಿಗೆ ತದೀ

ಯಾರಾಧನೆಯನ್ನು ನಡೆಸಲ್ಪಡುತ್ತಿದೆ. ಸ್ವಲ್ಪ ಖರ್ಚಿನಿಂದ ಆರಂಭವಾಗಿ, ಈಗ ವರ್ಷಂ ಪ್ರತಿ ೩೦೦-೩೫೦ ರೂಪಾಯಿಗಳು ವಿನಿಯೋಗವಾಗುತ್ತಿದೆ. ಈ ಕೈಂಕರ್ಯವು ಸ್ಥಿರವಾಗಿ ನಡೆದುಕೊಂಡು ಬರುವುದಕ್ಕಾಗಿ ಮೂಲಧನವನ್ನು ಒದಗಿಸಲಾಗದೇ ಇರುವುದು ಬಹಳ ಕೊರತೆಯಾಗಿದೆ.

೧೭. ತಿರುನಾರಾಯಣಪುರದ ಶ್ರೀ ಯದುಗಿರಿ ಯತಿರಾಜಮಠದಲ್ಲಿ ಅನೇಕ ಕೈಂಕರ್ಯಗಳಿಗಾಗಿಯೂ, ಮಂಡಯ, ತಿರುಪಲ್ಲಿಕ್ಕೇಣಿ, ಬೆಂಗಳೂರು ಮಲ್ಲೇಶ್ವರ ದೇವಸ್ಥಾನಗಳಲ್ಲಿಯೂ ಹಲವು ಕೈಂಕರ್ಯಗಳಿಗಾಗಿಯೂ ನಮ್ಮವರು ಬಿಡುಬಿಡುವಾಗಿ ಮೂಲಧನವನ್ನು ಏರ್ಪಡಿಸಿದ್ದಾರೆ. ಈ ವಿವರಗಳು ಸಂಪೂರ್ಣವಾಗಿ ಸಕಾಲಕ್ಕೆ ಒದಗಲಿಲ್ಲ.

೧೮. ನಮ್ಮ ಸಮುದಾಯದಲ್ಲಿ ಶ್ರೀಮದಿತ್ಯಾದಿಗಳಾದ ಮದ್ರಾಸ್ ಪೋಸ್ವಾಮಿ ಶ್ರೀನಿವಾಸಯ್ಯಂಗಾರ್ ಸ್ವಾಮಿಗಳು (ಆರ್‌ಬತ್‌ನಾಟ್ ಬ್ಯಾಂಕ್ ಕ್ಯಾಷಿಯರ್); ದಿವಾನ್‌ಬಹದ್ದೂರ್ ಎಂ. ಓ. ಪಾರ್ಥಸಾರಥಿ ಐಯ್ಯಂಗಾರ್ ಸ್ವಾಮಿಗಳು; ಮದ್ರಾಸ್ ಬ್ಯಾಂಕ್ ದಿವಾನ್‌ಬಹದ್ದೂರ್ ಎಂ. ಎ. ಪಾರ್ಥಸಾರಥಿ ಐಯ್ಯಂಗಾರ್ ಸ್ವಾಮಿಗಳು; ಮದ್ರಾಸ್ ನ್ಯಾಷನಲ್ ಬ್ಯಾಂಕ್ ಕ್ಯಾಷಿಯರ್ ನಾಯಕ ಎಂಬೆರುಮಾನಾರ್ ಸ್ವಾಮಿಗಳು (ಎಂ. ಎನ್. ರಾಮಾನುಜಾರ್ಯರವರು); ಎಂ. ಎ. ಶ್ರೀನಿವಾಸಾಚಾರ್ ಸ್ವಾಮಿಗಳು (ಅಣ್ಣಾದೊರೆ ಶ್ರೀನಿವಾಸಾಚಾರ್ಯರು); ಎಂ. ಎ. ಕೃಷ್ಣಮಾಚಾರ್ ಸ್ವಾಮಿಗಳು (ಅಣ್ಣಾದೊರೆ ಕೃಷ್ಣಮಾಚಾರ್ಯರು), ಎಂ.ಸಿ. ಅಳಶಿಂಗ ಪೆರುಮಾಳ್ ಸ್ವಾಮಿಗಳು ಈ ಮಹನೀಯರು ನಮ್ಮ ಸಮುದಾಯದವರ ಮತ್ತು ಇತರ ಸಮುದಾಯದವರ ಅನೇಕರಿಗೆ ಜೀವನೋಪಾಯದ ಉದ್ಯೋಗಗಳನ್ನು ಕಲ್ಪಿಸಿಕೊಟ್ಟು ಸ ಸಾರಗಳನ್ನು ಸುಖವಾಗಿ ಸ್ಥಾಪನೆಮಾಡಿ ಕೀರ್ತಿಯನ್ನು ಗಳಿಸಿದ್ದಾರೆ.

೧೯. ಮೈಸೂರಿನಲ್ಲಿ ಶ್ರೀ॥ ಉ॥ ಗೋಮಠಂ ಶ್ರೀನಿವಾಸಜೋಸ್ಯರ್ ಸ್ವಾಮಿಗಳವರ (ಶ್ರೀ॥ ಉ॥ ಜಿ. ಆರ್. ಜೋಸ್ಯರ್ ಸ್ವಾಮಿಗಳ ತಂದೆ) ಅಂಕಿತದಲ್ಲಿ ಒಂದು ಶಿಶುವಿಹಾರವು ಏರ್ಪಟ್ಟು ವಿದ್ಯಾದಾನವಾಗುತ್ತಿದೆ.

ಐಯ್ಯಂಗಾರ್ ಸ್ವಾಮಿಗಳು, ಪ್ರೊಫೆಸರ್ ಮಳೂರು ರಂಗಾಚಾರ್ಯ ಸ್ವಾಮಿಗಳು, ಎಂ. ಎ. ಪಾರ್ಥಸಾರಥಿ ಐಯ್ಯಂಗಾರ್ ಸ್ವಾಮಿಗಳು, ಎಂ. ಎ. ತಿರುನಾರಣಾಚಾರ್ಯ ಸ್ವಾಮಿಗಳು. ಈಗಲೂ ಡಾಕ್ಟರ್ ಎಂ. ಒ. ಪಾರ್ಥಸಾರಥಿ ಐಯ್ಯಂಗಾರ್ ಸ್ವಾಮಿಗಳೂ, ಎಂ. ಎ. ಕೃಷ್ಣಮಾಚಾರ್ಯರೂ ಕಾರ್ಯನಿರ್ವಾಹಕ ಮಂಡಲಿಯ ಸದಸ್ಯರಾಗಿದ್ದಾರೆ. ದಿವಂಗತ ಎಂ. ಒ. ಪಾರ್ಥಸಾರಥಿ ಐಯ್ಯಂಗಾರ್ಯರ ಹೆಸರಿನಲ್ಲಿ ಬಹುಮಾನ ಕೊಡುವುದಕ್ಕಾಗಿ ೪ ನಿಧಿಗಳೂ, ದಿವಂಗತ ಎಂ. ಎ. ಪಾರ್ಥಸಾರಥಿ ಐಯ್ಯಂಗಾರ್ಯರ ಹೆಸರಿನಲ್ಲಿ ಒಂದು ನಿಧಿಯೂ ಇವೆ.

22. ಶ್ರೀ॥ ಉ॥ ಆಟರ್ನಿ ನರಸಿಂಹಾಚಾರ್ಯ ಸ್ವಾಮಿಗಳು ಪೇಯಾಳ್ವಾರ್ ಕೋಯಿಲ್ ಬೀದಿಯಲ್ಲಿ ತಮ್ಮ ಮನೆಯ ಬಾಡಿಗೆಯಿಂದ ಬರತಕ್ಕ ಬಹುಮಾನವನ್ನು ಶ್ರೀ ಪಾರ್ಥಸಾರಥಿಯ ಕಾಲಸಂಧಿಗಾಗಿ ಬಿಟ್ಟಿದ್ದಾರೆ. ಶ್ರೀ ಆಳವಂದಾರ ತೆಪ್ಪೋತ್ಸವವೂ ಈ ಹಣದಿಂದಲೇ ನಡೆಯುತ್ತಿದೆ.

23. ಶ್ರೀ॥ ಉ॥ ಆರ್. ನರಸಿಂಹಾಚಾರ್ಯರು 50 ವರ್ಷಗಳ ಹಿಂದೆ ಉಭಯ ವೇದಾಂತವರ್ಧಿನೀ ಸಭೆಯನ್ನು ಸ್ಥಾಪಿಸಿ, ಪ್ರತಿವರ್ಷವೂ ತಿರುನಾರಾಯಣಪುರದಲ್ಲಿ ರಾಮಾನುಜಾಚಾರ್ಯರ ತಿರುನಕ್ಷತ್ರ ಸಮಯದಲ್ಲಿ ಸಭೆ ಸೇರುವಂತೆ ಮಾಡಿದ್ದಾರೆ. ಉಭಯ ವೇದಾಂತ ಪ್ರವಚನಕ್ಕೆ ಉತ್ತೇಜಕವಾಗಿ ಪರೀಕ್ಷೆಗಳೂ ನಡೆಯುತ್ತವೆ ಈ ಸ್ವಾಮಿಗಳು ಇನ್ನೂ ಕೆಲವು ಧರ್ಮಕಾರ್ಯಗಳಿಗಾಗಿ ಸ್ವಂತ ಹಣದಿಂದ ನಿಧಿಯನ್ನು ಕೂಡ ಏರ್ಪಡಿಸಿದ್ದಾರೆ.

24. ಹಿಂದೆ ಮದ್ರಾಸ್ ಬ್ಯಾಂಕ್ ಕ್ಯಾಷಿಯರ್ ಆಗಿದ್ದ ಶ್ರೀ॥ ಉ॥ ಮನ್ನಿ ತಿಂಗರಾಚಾರ್ಯ ಸ್ವಾಮಿಗಳು ಶ್ರೀಪೆರಂಬೂದೂರಿನಲ್ಲಿ ವೇದಮಹಾಪಾಠಶಾಲೆಯನ್ನು ಸ್ಥಾಪಿಸಿದ್ದು.

25. ಮೈಸೂರು ದೇಶದಲ್ಲಿ ವಿದ್ಯಾಧಿಕಾರಿಗಳಾಗಿದ್ದ ಶ್ರೀ॥ ಉ॥ ಮುದಿಗುಂಬಂ ತಿರುಮಲಾಚಾರ್ಯ ಸ್ವಾಮಿಗಳು ಬೇಲೂರಿನಲ್ಲಿ ಶ್ರೀ ಚೆನ್ನಕೇಶವ ದೇವಸ್ಥಾನದ ಪಕ್ಕದಲ್ಲಿ ಶ್ರೀ ಯತಿರಾಜ ಮಠದ ಶಾಖೆಯನ್ನು ಸ್ಥಾಪಿಸಿ

ವೇದಾಧ್ಯಯನಾದಿ ಪಾಠಶಾಲೆಯನ್ನು ಏರ್ಪಾಡು ಮಾಡಿ, ಶ್ರೀ ಮಠಕ್ಕೆ ಭತ್ತ ಬರುವಂತೆ ಭೂಮಿಯನ್ನು ಕೊಡಿಸಿದರು.

೨೮. ತಿರುವಲ್ಲೀಕ್ಕೇಣಿಯ ಶ್ರೀ ಯತಿರಾಜಮಠದ ಕಟ್ಟಡ, ಪ್ರಧಾನ್ ತಿರುಮಲರಾಯರಿಂದ ನಿರ್ಮಿತವಾದ ತೇರಡಿ ಮಂಟಪ, ಮತ್ತು ಯೋಗಿ ಪಾರ್ಥಸಾರಥಿ ಐಯ್ಯಂಗಾರ್ಯರ ಧರ್ಮಪತ್ನಿ ಶಿಂಗಮ್ಮನವರಿಂದ ನಿರ್ಮಿತವಾದ ನಂಬಿಳ್ಳೈ ಸನ್ನಿಧಿ ಈ ಪವಿತ್ರ ಕೆಲಸಗಳೆಲ್ಲವೂ ನಮ್ಮ ಮಂಡಯಂ ಸಮುದಾಯದ ಮಹನೀಯರಿಂದ ಸ್ಥಾಪಿತವಾದುವು.

ಇನ್ನೂ ಅನೇಕ ಧರ್ಮಗಳಿವೆ. ವಿಷಯಸಂಗ್ರಹವಾಗಬೇಕು.

ಪ್ರಕರಣ ೮

ಮಂಡಯಂ ಶ್ರೀ ವೈಷ್ಣವ ಮಹಾಜನರ ಗ್ರಂಥಕರ್ತೃತ್ವವು

ಸುಮಾರು ೭೦೦ ಮನೆಗಳಿರುವ ಕಡಿಮೆ ಸಂಖ್ಯೆಯ ಸಮುದಾಯದವರಾದರೂ, ನಮ್ಮ ಸಮುದಾಯದವರಲ್ಲಿ ವಿದ್ಯೆಯು ಬಹಳ ಹೆಚ್ಚಿನ ಅಂತಸ್ತಿನದು. ಗ್ರಂಥಕರ್ತರು ಬಹುಳವಾಗಿದ್ದಾರೆ. ಗ್ರಂಥಗಳನ್ನು ಬಹಳ ಹೇರಳವಾಗಿ ರಚಿಸಿಯೂ, ಪ್ರಕಾಶಪಡಿಸಿಯೂ ಇದ್ದಾರೆ. ಅಂಥ ಗ್ರಂಥಗಳ ಪಟ್ಟಿಯನ್ನು ಆದಷ್ಟುಮಟ್ಟಿಗೆ ಸಂಗ್ರಹಿಸಿ ಕೊಟ್ಟಿದೆ. ಕ್ರಿ. ಶ. ೧೯೫೦ನೆಯ ಡಿಸೆಂಬರ್ ತಿಂಗಳವರೆಗೆ ಪರಮಪದಿಸಿರುವ ಗ್ರಂಥಕರ್ತರ ಸಂಖ್ಯೆ ಸುಮಾರು ೪೬.

ಹೇಗಾದರೂ ಮಾಡಿ ನಮ್ಮವರು ರಚಿಸಿಯೂ ಪ್ರಕಾಶಪಡಿಸಿಯೂ ಇರುವ ಎಲ್ಲಾ ಗ್ರಂಥಗಳನ್ನೂ (ಸುಮಾರು ೫೦೦) ಒಂದೆಡೆಯಲ್ಲಿ ಕೂಡಿಸಿಡುವ ಭಾಗ್ಯ ಒದಗಬೇಕು. ಯಾವ ಮಹಾನುಭಾವರಾದರೂ ಈಗಲೇ ಯತ್ನಿಸಬೇಕೆಂದು ಸವಿನಯ ಪ್ರಾರ್ಥನೆ. ಮೈಸೂರಿನಲ್ಲಿ ನಮ್ಮ ವಿದ್ಯಾರ್ಥಿನಿಲಯದಲ್ಲಿ ಶೇಖರಿಸಬಹುದು.

ಗ್ರಂಥಗಳ ಪಟ್ಟಿ

ಪರಮಪದಿಸಿರುವ ಗ್ರಂಥಕರ್ತರು

೧. ಶ್ರೀ॥ ಉ॥ ತಿರುಮಲೈ ಗೋವಿಂದರಾಜ ಉಡೈಯರ್ ಸ್ವಾಮಿಗಳು (ಮಂಡಯದ ಪ್ರತಿಷ್ಠಾಪಕರು)

(೧) ಉಭಯ ವೇದಾನ್ತಾಚಾರ್ಯನಿನಚರಿ.

೨. ಶ್ರೀ॥ ಉ॥ ಅಪ್ಪಯಾಚಾರ್ಯ ಸ್ವಾಮಿಗಳು. (ರಾಮಾನುಜಪುರ ಪ್ರತಿಷ್ಠಾಪಕರು.)

(೧) 'ಅಷ್ಟಶ್ಲೋಕಿ'ಯ ಮೇಲೆ 'ಆರಾಯಿರಪ್ಪಡಿ' ವ್ಯಾಖ್ಯಾನ.

(೨), (೩), ಮತ್ತು ಎರಡು ಗ್ರಂಥಗಳು.

೩. ಶ್ರೀ॥ ಉ॥ ವೇದಾನ್ತಿ ರಾಮಾನುಜಜೀಯರ್ ಸ್ವಾಮಿಗಳು.

(ತಿರುನಾರಾಯಣಪುರದಲ್ಲಿ ಶ್ರೀ ಯತಿರಾಜಮಠದ ಸ್ವಾಮಿಗಳು
(ಪ. ಕ್ರಿ. ಶ. ೧೫೫೦
'ಪ' ಎಂದರೆ ಪರಮಪದಿಸಿದ ಮುಮೂರುಕಾಲ.)

ನಿರ್ಹೇತುಕದೀಪಿಕಾ, ಕೈವಲ್ಯದೀಪಿಕಾ ದಿವ್ಯಸೂರಿಪ್ರಭಾವ ದೀಪಿಕಾ, ಅಷ್ಟಶ್ಲೋಕೀ ವ್ಯಾಖ್ಯಾನ.

ಇವುಗಳಲ್ಲಿ ಮೊದಲು ೩ ಪುಸ್ತಕಗಳು ದೊರೆತಿಲ್ಲ. ಅಷ್ಟಶ್ಲೋಕೀ ವ್ಯಾಖ್ಯಾನವನ್ನು ವಿದ್ವಾನ್ ಆಸೂರಿ ಆನಂದಾಳ್ವಾರ್ ಸ್ವಾಮಿಗಳು ಅಚ್ಚು ಪಡಿಸಿ ಪ್ರಕಾಶಪಡಿಸಿದ್ದಾರೆ.

೪. ಪ್ರಧಾನ್ ತಿರುಮಲಾಚಾರ್ಯ (ಪ. ಕ್ರಿ. ಶ. ೧೬೫೫):

(೧) ಕರ್ಣವೃತ್ತಾಂತ ಕಥಾ.

೫. ಮಂತ್ರಿ ತಿರುಮಲಾರ್ಯ. (ಕ್ರಿ. ಶ. ೧೬೪೫-೧೭೦೯)
(ಮೈಸೂರುದೇಶದ ಮಂತ್ರಿ):

(೧) ಗೀತಗೋಪಾಲಂ (೨) ಚಿಕ್ಕದೇವರಾಯ ವಿಜಯಂ (೩) ಅಪ್ರತಿಮ ವೀರಚರಿತೆ (೪) ಚಿಕ್ಕದೇವರಾಯ ವಂಶಾವಳಿ; ಇತ್ಯಾದಿ ಗ್ರಂಥಗಳು.

ಚಿಕ್ಕದೇವರಾಜರು ರಚಿಸಿರುವ ಚಿಕ್ಕದೇವರಾಜ ಬಿನ್ನಪವೆಂಬ ವಿಶಿಷ್ಟಾದ್ವೈತ ಸಾರಗ್ರಂಥವು ಈ ಮಂತ್ರಿಗಳ ಉಪದೇಶಗಳಿಂದಲೇ ಆಗಿರಬಹುದು.

೬. ಶಿಂಗರಾರ್ಯ (ಮಂತ್ರಿ ತಿರುಮಲಾರ್ಯರ ಸಹೋದರರು):

(೧) ಮಿತ್ರವಿಂದಾ ಗೋವಿಂದನಾಟಕ (ಕನ್ನಡಭಾಷೆಯಲ್ಲಿ ಇದೇ ಮೊದಲನೆಯ ನಾಟಕ ಗ್ರಂಥ.)

(೨) ತಿರುಮಲಾರ್ಯರ ಸಂಸ್ಕೃತ ಗ್ರಂಥಗಳ ವ್ಯಾಖ್ಯಾನ.

೭. ಪ್ರಧಾನ ತಿರುಮಲರಾವ್ (ಪ. ಕ್ರಿ. ಶ. ೧೮೧೫)

(೧) ತಿರುಮಲಾರ್ಯ ವಿಜಯ.

೮. ಶ್ರೀರಂಗಪಟ್ಟಣದ ಕೃಷ್ಣಮಾಚಾರ್ಯರು (ಮದ್ರಾಸ್‌ನಲ್ಲಿ ನೆಲೆಸಿದವರು) (ಪ.ಕ್ರಿ.ಶ. ೧೮೩೮):

(೧) ಹಳಿಗನ್ನಡ ನುಡಿಗನ್ನಡಿ (೨) ಹೊಸಗನ್ನಡ ನುಡಿಗನ್ನಡಿ (೩) ಶಬ್ದಮಂಜರಿ (೪) ಧಾತುಮಂಜರಿ.

೯. ಧಾಟಿ ಶಿಂಗಲಾಚಾರ್ಯ (ಪ.ಕ್ರಿ.ಶ. ೧೮೫೦):

(೧) ಕಥಾಸಂಗ್ರಹ.

೧೦. ಶ್ರೀ॥ ಉ॥ ವಿದ್ವಾನ್ ನಾಟಂಪಳ್ಳಿ ಅನಂದಾಳ್ವಾರ್ ಸ್ವಾಮಿಗಳು (ಕ್ರಿ.ಶ. ೧೮೩೩–೧೮೬೩):

(೧) ವೇದಾನ್ತ ವಾದಾವಳೀ.

ವೇದಾನ್ತ ವಾದಾವಳೀ ಗ್ರಂಥದಲ್ಲಿ ಉದಾಹೃತವಾದ ಮಹಾಗ್ರಂಥಗಳೇ ಸುಮಾರು ೧೪೦೦ಕ್ಕೆ ಮೇಲೆ ಇವೆ. ಎಂದರೆ ಈ ಗ್ರಂಥದ ಮಹತ್ವವು ತಿಳಿಯುತ್ತದೆ.

(೨) ನ್ಯಾಯಧಾಸ್ಕರ.

ಇದು ಅದ್ವೈತಮತಕ್ಕೆ ಮೂಲಸ್ತಂಭವಾದ ಅದ್ವೈತಸಿದ್ಧಿ, ಬ್ರಹ್ಮಾನಂದೀಯ, ಲಘುಚಂದ್ರಿಕಾ ಗ್ರಂಥಗಳ ಖಂಡನ.

(೩) ಶತಕೋಟಿ ಖಂಡನ (ಪ್ರಬಂಧ.)

(೪) ಣಕ್ಷತತ್ವ ವಿಭೂಷಣವೆಂಬ ನವಕೋಟಿ ಖಂಡನ.

೧೯. ಮದ್ರಾಸಿನಲ್ಲಿ ಶ್ರೀಮದಿತ್ಯಾದಿ ಮಳಹಾಳ್ವಾರ್ ನರಸಿಂಹಾಚಾರ್ ಸ್ವಾಮಿಗಳವರು ಪ್ರಬಂಧ ಸ್ತೋತ್ರ ಪಾಠಶಾಲೆಯನ್ನು ನಡೆಸಿಕೊಂಡು ಬಂದು ನಮ್ಮ ಬಾಲಕರಲ್ಲಿ ವೈದಿಕವೃತ್ತಿಯನ್ನು ಕಲ್ಪಿಸಿ ಕೀರ್ತಿಯನ್ನು ಗಳಿಸಿದರು.

೨೦. ಮದ್ರಾಸಿನಲ್ಲಿ ಶ್ರೀಮದಿತ್ಯಾದಿ ಅಳಶಿಂಗಪೆರುಮಾಳ್‌ರವರ ಮಹತ್ತರವಾದ ಪ್ರಯತ್ನದಿಂದಲೇ ಸ್ವಾಮಿ ವಿವೇಕಾನಂದರು ಅಮೆರಿಕಾದೇಶಕ್ಕೆ ಹೋಗಿ ನಮ್ಮ ಹಿಂದೂಮತಧರ್ಮ ಪ್ರಚಾರವನ್ನು ಮಾಡಿದುದು. "ಬ್ರಹ್ಮವಾದಿನ್" ಎಂಬ ಮಾಸ ಪತ್ರಿಕೆಯನ್ನು ನಡೆಯಿಸಿದರು. ಈಗಲೂ ಶ್ರೀ ರಾಮಕೃಷ್ಣಾಶ್ರಮದ ಪ್ರಮುಖ ಗ್ರಂಥಗಳಲ್ಲೆಲ್ಲಾ ಶ್ರೀ ಅಳಶಿಂಗಪೆರುಮಾಳ್‌ರವರಿಗೆ 'ನನ್ನ 'ಶ್ರೀ ಅಳಶಿಂಗ' ಎಂಬ ಸ್ವಾಮಿ ವಿವೇಕಾನಂದರು ಪ್ರೀತಿ ಮತ್ತು ಕೃತಜ್ಞತಾಪುರಸ್ಕರವಾದ ನಾಮಧೇಯವು ಸಾಗಿಬರುತ್ತಿದೆ. ಶ್ರೀ ಅಳಶಿಂಗಪೆರುಮಾಳರ ದೂರದರ್ಶಿತ್ವವೂ, ಕಾರ್ಯನಿರ್ವಾಹಕಶಕ್ತಿಯೂ ಭಾರತಖಂಡದಲ್ಲೇ ಹೊಗಳಲ್ಪಡುತ್ತಿದೆ.

೨೧. ದೇವಸ್ಥಾನ, ಮಠಗಳ ಉತ್ಸವಾದಿ ವೈಧಿಕ ಧರ್ಮಕಾರ್ಯಗಳಲ್ಲೇ ನಿರತರಾಗದೆ, ಲೌಕಿಕದೃಷ್ಟಿಯನ್ನೂ ಇಟ್ಟುಕೊಂಡು ಆಧುನಿಕ ಪ್ರಗತಿ ಮಾರ್ಗವನ್ನನುಸರಿಸಿ, ಅನೇಕ ಜನರು ಪಂಡಿತೋತ್ತಮರುಗಳಾಗಿ, ಧನವಂತರಾಗಿ, ಕೀರ್ತಿವಂತರಾಗಿ ಬಾಳಿಬದುಕುವುದಕ್ಕೆ ನಮ್ಮ ಮಹಾಜನರು ಮುಖ್ಯ ಕಾರಣಕರ್ತರೆನ್ನುವುದನ್ನು ತಿರುವಲ್ಲಿಕ್ಕೇಣಿಯ ಹಿಂದೂ ಹೈಸ್ಕೂಲ್ ಎನ್ನುವ ವಿದ್ಯಾಶಾಲೆಯ ಇತಿಹಾಸದಲ್ಲಿ ನೋಡಬಹುದು. ಸಂಕುಚಿತಮನೋಭಾವ ವಿಲ್ಲದೆ ಸಾರ್ವಜನಿಕರ ಹಿತವನ್ನು ಕೋರಿ ಮಾಡಿದ ಮಹಾಕಾರ್ಯವಿದು.

ಈ ಶಾಲೆಯು ಒಂದು ಶತಮಾನದ ಹಿಂದೆ, ಎಂದರೆ ೧೮೫೨ನೆಯ ಇಸವಿಯಲ್ಲಿ ತಮಿಳು ಮತ್ತು ತೆಲುಗುಭಾಷೆಯ ಎರಡು ಚಿಕ್ಕ ಶಾಲೆಗಳಾಗಿದ್ದು ಕೆಲವು ಕಾಲಾನಂತರ ಒಂದಾಯಿತು. ೧೮೬೬ನೇ ಇಸವಿಯಲ್ಲಿ ಈ ಶಾಲೆಯು ಆವನತಸ್ಥಿತಿಗೆ ಬಂದಾಗ ಮದ್ರಾಸ್ ಬ್ಯಾಂಕ್ ಹೆಡ್ ಕ್ಯಾಷಿಯರ್ ಆಧಿಕಾರದಲ್ಲಿದ್ದ ಎಂ. ಎ. ಶಿಂಗರಾಚಾರ್ಯರು ಕಾರ್ಯನಿರ್ವಾಹಕ ಮಂಡಲಿಯು

ಪ್ರಾರ್ಥನೆಯನ್ನು ಅಂಗೀಕರಿಸಿ ಕಾರ್ಯದರ್ಶಿಗಳಾದರು. ಆಗ ಬಾಲಕರ ಪಾಠ ಶಾಲೆಯಲ್ಲಿ ೪೦ ಹುಡುಗರು ಮಾತ್ರ ಇದ್ದರು. ಆರ್ಥಿಕ ಸ್ಥಿತಿಯಲ್ಲಾದರೋ ೮೦ ರೂಪಾಯಿಗಳನ್ನು ಕೈಯಿಂದ ಹಾಕಬೇಕಾಗಿತ್ತು. ಉಪಾಧ್ಯಾಯರ ಸಂಬಳಕೂಡ ಬಾಕಿ ಇದ್ದಿತು. ಶ್ರೀಮಾನ್ ಶಿಂಗರಾಚಾರ್ಯರು ತಮ್ಮ ಸ್ವಂತ ಹಣದಿಂದ ಎಲ್ಲಾ ಬಾಕಿಗಳನ್ನೂ ತೀರಿಸಿ, ಶಾಲೆಯ ಹಣವು ಇಲ್ಲದಿದ್ದರೂ ಕಾಲಾಕಾಲದಲ್ಲಿ ಸಂಬಳವನ್ನು ಬಟವಾಡೆಮಾಡಿ ಹಣಬಂದಮೇಲೆ ಹಿಂತಿರುಗಿ ತೆಗೆದುಕೊಳ್ಳುತ್ತಿದ್ದರು. ಕಾಲಕ್ರಮೇಣ ಮೆಟ್ರಿಕ್ಯುಲೇಷನ್ ತರಗತಿಯನ್ನು ತೆರೆಯಲಾಯಿತು. ಈಗ ಈ ಶಾಲೆಯು ದಕ್ಷಿಣದೇಶದಲ್ಲೆಲ್ಲಾ ಅತಿ ಮುಖ್ಯವಾದ ದೊಡ್ಡ ಶಾಲೆಯಾಗಿ ಪ್ರಖ್ಯಾತವಾಗಿದೆ.

ಈ ಮಹಾಶಯರ ಸ್ವಾರ್ಥತ್ಯಾಗವೂ, ಶ್ರದ್ಧೆಯೂ ಶಾಲೆಯ ಭದ್ರತೆಗೂ, ಅಭಿವೃದ್ಧಿಗೂ ಕಾರಣವೆಂದರೆ ಅತಿಶಯವಲ್ಲ. 1869ರಿಂದ 1905ರಲ್ಲಿ ಅವರು ದಿವಂಗತರಾಗುವವರೆಗೂ ಅಂದರೆ ಸುಮಾರು ೩೫ ವರ್ಷಗಳ ಕಾಲ ಕಾರ್ಯದರ್ಶಿಗಳಾಗಿಯೂ, ಅಧ್ಯಕ್ಷರಾಗಿಯೂ ಸೇವೆ ಸಲ್ಲಿಸಿದ ಮಹಾನುಭಾವರು. ಶ್ರೀ ಶಿಂಗರಾಚಾರ್ಯರ ಕೃತಜ್ಞತಾ ಸೂಚಕವಾಗಿ ಸಭಾಂಗಣವು ಅವರ ನಾಮಧೇಯದಿಂದ ಬೆಳಗುತ್ತಿದೆ. ಶಾಲೆಯ ಶತಮಾನೋತ್ಸವದ ಪತ್ರಿಕೆಯಲ್ಲಿ ಹೇಳಿರುವಂತೆ, "ಯಾವ ಪ್ರಾಪಂಚಿಕ ಸ್ಮಾರಕದಿಂದಲಾಗಲೀ ಸಾರ್ವಜನಿಕರು ಈ ಮಹಾಶಯರ ಸೇವೆಯ ಸಾಲವನ್ನು ಸರಿಯಾಗಿ ತೀರಿಸಲಾರರು. ವಿದ್ಯಾಭಿಮಾನಿಗಳಿಗೆ ಮಾರ್ಗದರ್ಶಕರಾಗಿ ಅವರು ಮಾಡಿದ ಸೇವೆಗೆ ಅವರ ಶಾಲೆಯೇ ತಕ್ಕ ಸ್ಮಾರಕ. ಆಡಂಬರ ರಹಿತವಾಗಿ ಸದಾ ಕಾಲದಲ್ಲೂ ಇಂತಹ ಸ್ಮಾರಕವು ಕಣ್ಣುಮುಂದೆ ನಿಲ್ಲುತ್ತದೆ." ಈ ಶಾಲೆಗೆ ಶಿಂಗರಾಚಾರ್ಯರ ಶಾಲೆ ಎನ್ನುವ ಹೆಸರು ರೂಢಿಯಲ್ಲಿತ್ತು.

ಈ ಮಹಾಶಯರು ಶಾಲೆಯ ವಿದ್ಯಾರ್ಥಿಗೆ ಬಹುಮಾನ ಕೊಡುವುದಕ್ಕಾಗಿ 2,400 ರೂಪಾಯಿಗಳ ಮೂಲಧನವನ್ನು ಸರ್ಕಾರದಲ್ಲಿಟ್ಟಿದ್ದಾರೆ.

ಈ ಕೆಳಗೆ ಕಂಡ ಮಹಾಶಯರುಗಳು ಈ ಶಾಲೆಯ ಅಭಿವೃದ್ಧಿಗಾಗಿ ಸೇವೆ ಸಲ್ಲಿಸಿರುವರು. ಶ್ರೀಮದಿತ್ಯಾದಿಗಳಾದ ಎಂ. ಒ. ಪಾರ್ಥಸಾರಥಿ

ಅಮುದ್ರಿತವಾದ ಗ್ರಂಥಗಳು:—

(೫) ರಸಮುರಳೀಧರ (೧೦) ಜಾತಿವಾದ
(೬) ಕುವಲಯಾನಂದ ಮಕರಂದ (೧೧) ಭೇದಸಮರ್ಥನ
(೭) ನ್ಯಾಯಶಾಸ್ತ್ರ ಕ್ರೋಡಪತ್ರಗಳು (೧೨) ಸತ್ಯತ್ವಾನುಮಾನ ನಿರೂಪಣ
(೮) ಅಪಹತ ಪಾಪ್ಮತ್ವ ನಿರ್ವಚನ (೧೩) ಭಾವರೂಪ ಜ್ಞಾನಖಂಡನ
(೯) ಆನಂದಮಯಾಧಿಕರಣ ವಿಚಾರ (೧೪) ಆಚಾರಲೋಚನ.

ಇತ್ಯಾದಿ.

೧೧. ದೇವಶಿಖಾಮಣಿ ಶ್ರೀನಿವಾಸೈಯ್ಯಂಗಾರು (ಪ.ಕ್ರಿ.ಶ. ೧೮೫೩):

(೧) ಪ್ರದ್ಯೋಧಚಂದ್ರೋದಯ (೨) ಕಿರಾತಾರ್ಜುನೀಯ ಕಥೆ (೩) ಕನ್ನಡಸಾಂಗತ್ಯ (೪) ಮುಂಕುಂದಮಾಲೆ (೫) ಗಿರಿಜಾಕಲ್ಯಾಣ ಕಥೆ (೬) ಧ್ರುವೋಪಾಖ್ಯಾನ (೭) ನಳಚರಿತ್ರೆ (೮) ಪ್ರಹ್ಲಾದಚರಿತ್ರೆ (೯) ನಳಮಾಲೀವಿಲಾಸ ಕಥೆ.

೧೨. ಶ್ರೀ॥ ಉ॥ ಪೆರಿಯಸ್ವಾಮಿ ತಿರುಪುಲಾಚಾರ್ಯರು (ಸು. ಕ್ರಿ. ಶ. ೧೮೯೯):

(೧) ಕರ್ಣಾಟಕ ಗೀತಗೋವಿಂದ (೨) ಉಪಾಯ ನಿಶ್ರೇಣಿಕಾ (೩) ವಿಗ್ರಹಾರಾಧನ ವಿಧಾಯಿನೀ (೪) ಗರಳಪುರೀ ಶಾಸ್ತ್ರಿಗಳ ಯುದ್ಧಕಾಂಡದ ವಾಖ್ಯಾನ (೫) ಉತ್ತರಚಂಪುವಿಗೆ ವ್ಯಾಖ್ಯಾನ (೬) ಸಂಸ್ಕೃತ ಪ್ರಥಮ ಪುಸ್ತಕ (೭) ಬಾಲಬೋಧಿನೀ (೮) ಪ್ರೌಢಬೋಧಿನೀ (೯) ವೃದ್ಧಸೇವಿನೀ ಇತ್ಯಾದಿ.

೧೩. ನಾಟಕದ ರಂಗಾಚಾರ್ಯರು.

(೧) ರಿಂದ (೫) ನಾಟಕಗಳು.

೧೪. ಜಟಾವಲ್ಲಭ ತಿರುಮಲೈಯ್ಯಂಗಾರ್ಯರು (ಪ.ಕ್ರಿ.ಶ. ೧೮೮೫):

(೧) ಸಂಸ್ಕೃತ ಪ್ರಥಮ ಪುಸ್ತಕ (೨) ಸುಲಭ ವೈದ್ಯಚಿಕಿತ್ಸೆ (೩) ಅವತಾರ ವೈಭವ ಮತ್ತು ಸುಮಾರು ೪೦ ಒಲೆಯಲ್ಲಿ ಬರೆದಿರುವ ಗ್ರಂಥಗಳು.

೧೫. ಎಸ್. ಜಿ. ನರಸಿಂಹಾಚಾರ್ಯರು (ಸು. ೧೯೦೭):

ಇವರು ಆರ್ಯಮತ ಸಂಜೀವಿನೀ, ಕರ್ಣಾಟಕ ಕಾವ್ಯಮಂಜರಿ, ಕಾವ್ಯ ಕಲಾನಿಧಿ ಎನ್ನುವ ಮಾಸಪತ್ರಿಗಳನ್ನು ಆಜಿ ರಾಮಾನುಜಯ್ಯಂಗಾರ್ಯರ ಸಹಿತ ಅಚ್ಚುಹಾಕಿಸಿ ಕೀರ್ತಿಗಳಿಸಿದ್ದಾರೆ.

(೧) ಅಜನೃಪಚರಿತೆ (ಪದ್ಯ) (೨) ದಿಲೀಪಚರಿತೆ (ಪದ್ಯ) (೩) ಪ್ರೋಷಿತ ಪ್ರಿಯಸಮಾಗಮ (ಪದ್ಯ) (೪) ಅಲ್ಲಾವುದೀನ್ ಅದ್ಭುತ ದೀಪ (ಗದ್ಯ) (೫) ಈಸೋಪನ ನೀತಿಕಥೆಗಳು (ಗದ್ಯ) (೬) ಗಲಿವರನ ದೇಶಸಂಚಾರ (ಗದ್ಯ) (೭) ಭಾರತ ವೀರಚರಿತೆ (ಗದ್ಯ) (೮) ಗೈಯಾಲಿಯನ್ನು ಸಾಧುಮಾಡುವಿಕೆ (ನಾಟಕ), (೯) ರಿಂದ (೧೨ ಕನ್ನಡ ಪಠ್ಯಪುಸ್ತಕಗಳು (೧೩) ಹಿಂದೂದೇಶದ ಚರಿತ್ರ ಸಂಗ್ರಹ, (೧೪) ಕರ್ಣಾಟಕ ಕವಿಚರಿತೆ (೧೫) ಆರ್. ನರಸಿಂಹಾಚಾರ್ಯರ ಸಂಗಡ. (ಭಾಗ ೧) (೧೬) ಭೂವಿವರಣೆ, (೧೭)ಪದ್ಯಸಾರ, (೧೮) ಉತ್ತರರಾಮ ಚರಿತ್ರೆ (ನಾಟಕ) ಆದಿಪರ್ವ, ಸಭಾ ಪರ್ವ (ಸಹಸಂಪಾದಕ)

೧೬ ಎಂ. ಬಿ. ಶ್ರೀನಿವಾಸ್ಯೆಯ್ಯಂಗಾರ್ಯರು.

(೧) ಜಯಸಿಂಹರಾಜ ಚರಿತೆ (೨) ಹೇಮರಾಜವಿಲಾಸ (೩) ನೀತಿ ಚಿಂತಾಮಣಿ (ಎಂ. ಎಸ್. ಪುಟ್ಟಣ್ಣನವರ ಸಂಗಡ) (೪) ವಾಗ್ವಿದಾಯಿನೀ (೫) ಹಿಂದೂಚರಿತ್ರ ಸಂಗ್ರಹ (ಎಂ ಎಸ್. ಪುಟ್ಟಣ್ಣನವರ ಸಂಗಡ) (೬) ಹಿಂದೂದೇಶದ ನಾಗರಿಕ (೩ ಭಾಗಗಳು) (೭) Aryan Prayer Book (೮) ನಿತ್ಯಾನುಸಂಧಾನ ಟೀಕೆ ೫

(a) ತಿರುಪ್ಪಲ್ಲಾಂಡು (d) ಅಮಲನಾದಿಪಿರಾನ್

(b) ತಿರುಪ್ಪಳ್ಳಿಯೆಳುಚ್ಚಿ (e) ಕಣ್ಣಿನುಣ್ ಶಿರುತ್ತಾಂಬು

(c) ತಿರುಪ್ಪಾವೈ

(೯) ಏಷ್ಯಾಖಂಡದ ಭೂವಿವರಣೆ (೧೦) ಅಧಿಕಾರಸಂಗ್ರಹಂ ಇತ್ಯಾದಿ.

೧೭ ಪ್ರೊಫೆಸರ್ ಪಳಕೂರು ರಂಗಾಚಾರ್ಯರು (ಕ್ರಿ.ಶ. ೧೮೬೧-೧೯೧೬)

(1 Rupavatara of Dharmakirti. 2 vols (Ed)

( ) Sri Bhashya of Ramanuja
(Translated along with Sri M.B.Varadaraja Iyengar)

(3) Hindu philosophy of Conduct
(Lectures on the Gita—3 vols.)

(4) Ganithasarasangraha of Mahaviracharya (Translated & Ed.)

(5) Meghaduta (A critical appreciation)

(6) Function of Religion in Social Evolution.

(7) The Yugas.

(8) Personal Equation in History

(9) Social Ideals of the Hindus

(10) Kavyadarsa of Dandin (Ed.)

(11) Prayogasangraha of Vararuchi (Ed.)

(12) Sri Ramanuja & Vaishnavism.

A lecture at Bangalore published in the *Brahmavadin* and later by Messrs. G. A. Natesan & Co. in 'Three Great Acharyas'

(13) Orthography & pronunciation in Tamil. (Published both in Tamil & English)

(14) Basu's Civil Marriage Bill

(15) Indian Loyalty

(16) Padyavali (A Sanskrit poem on Buddha's life-edited with Sri. S. Kuppuswami Sastrigal)

(17) Sanskrit presidential address to the Pandit's Parishad of Conjeevaram.

(18) Bharathi-Suprabhatam

(19) Social Reform on National Lines.

(20) Sarva-Darshana-Siddhantha-Sangraha of Sankara charya (Translated & Ed)

And variouus articles in the Brahmavadin, Indian Review, Educational Rcview etc.etc.

೧೮. ಡಾಕ್ಟರ್ ಎಂ. ಡಿ. ಶ್ರೀನಿವಾಸೈಯ್ಯಂಗಾರ್ಯರು.

(1) ಗರ್ಭಿಣೀ ಶಿಶುಸಂರಕ್ಷಣ (ಕ್ರಿ.ಶ. ೧೮೯೬) (೩) ವಿಷೂಚಿ.

೧೯. ಎಂ. ಎ. ಶ್ರೀನಿವಾಸಾಚಾರ್ಯರು. (ಆನಂದಾಂಪಿಳ್ಳೈ ಸ್ವಾಮಿಗಳು)

(1) ರಾಜಾಮಲಯಸಿಂಹ(2 ಭಾಗಗಳು) (3) ಲೆಖ್ಖಶಾಸ್ತ್ರದ ಕೈಪಿಡಿ.

೬) ಆಳವಂದಾರ್ ಸ್ತೋತ್ರ ಅರ್ಥಸಮೇತ (to be published)

೨೦ ಜಿ. ಜಿ ನರಸಿಂಹಾಚಾರ್ಯರು

(1) ರಾಮನುಜ ಗೀತಾಭಾಷ್ಯ
(in Brahmavadin—English Translation)

(2) Articles in Brahmavadin

(3) Agamic Rituals (Govt.)

(4) ಪ್ರಪತ್ತಿಯೋಗ (not publisehd)

(5) ವೈದ್ಯಸಂಗ್ರಹ (ಕೈ ಬರಹ)

೨೧ ವಾಸು ಶ್ರೀನಿವಾಸಯ್ಯಂಗಾರ್ಯರು

(1) An open letter to Mrs. A. Beasant
(2) ರಿಂದ (4) Moral Readers
(5) Valmiki & Shelley & several articles
(Indian Review, 1902)
(6) Parallel Quotations (in ಅಕಾರಾದಿ)
from Ramayana, Mahabharatha etc.

೨೨ ಎಂ. ಡಿ. ನಾರಣ್ಯೆಯ್ಯಂಗಾರ್ಯರು (ಪ. ಕ್ರಿ. ಶ. ೧೯೨೮)

(1) ಹಿಂದೂ ವ್ಯವಹಾರ ಧರ್ಮಶಾಸ್ತ್ರ

೨೩ ಅಣ್ಣಾಧೊರೆ ನರಸಿಂಹಾಚಾರ್ಯರು (ಪ. ಕ್ರಿ. ಶ. ೧೯೧೩)

(1) ಯಜು ಸಂಧ್ಯಾಭಾಷ್ಯ ವಿವರಣಂ

(2) ಸ್ತೋತ್ರರತ್ನ–ಅರ್ಥಸಮೇ (not published)

೨೪ ಅಣ್ಣಾಧೊರೆ ತಿರುಮಲಾಚಾರ್ಯರು (ಪ. ಕ್ರಿ. ಶ. ೧೯೧೯)

(1) ನಾರದಭಕ್ತಿ ಸೂತ್ರ (೨) ಸರ್ವಮತ ಸಮನ್ವಯ

೨೫ ಅಣ್ಣಾಧೊರೆ ಶ್ರೀನಿವಾಸಾಚಾರ್ಯರು

(I) Mysore Prachans (joint)

(2 Articles in "Mysore Review"

(3) Preface to ಚಿಕ್ಕದೇವರಾಜ ವಂಶಾವಳಿ

(4) Restoration of Mysore Dynasty (Manuscript)

೨೬ ಎಂ. ಎ. ಅನಂದಾಳ್ವಾರ್ಯರು (ಇಂಜಿನಿಯರ್)

(1) ರಿಂದ (3) Indian Architecture

(4) A forgotten chapter of Indian Engineering
(5) ಮುಕುಂದಮಾಲೆ ಇತ್ಯಾದಿ

೨೭ ಎಂ. ಡಿ. ಶ್ರೀನಿವಾಸಯ್ಯಂಗಾರ್ಯರು (ಧಾಟಿ):

(1) ಭೀಮ (2) ಮಹಿಷಾಸುರಮರ್ದಿನಿ (3) ಸಾಧುಮಿಾರ (4) ಚಂದ್ರಗುಪ್ತ

೨೮ ಪಂಡಿತರತ್ನ, ವಿದ್ಯಾನಿಧಿ ಜಯರಾಮ ವೆಂಕಟಾಚಾರ್ಯರು:

(1) ವಿಶಿಷ್ಟಾದ್ವೈತ ದೀಪಿಕೆ (2) ಭರತಖಂಡದ ಪ್ರಾಚೀನ ಕಲಿಗಳು (joint) (3) ಆಚಾರ ಇತ್ಯಾದಿ.

೨೯ ಶ್ರೀಯೋಗಿ ಪಾರ್ಥಸಾರಥಿ ಅಯ್ಯಂಗಾರ್ ಸ್ವಾಮಿಗಳು

(1) ಶ್ರೀ ಭಗವದ್ವಿಷಯಂ (2) ಶ್ರೀ ಸಹಸ್ರನಾಮಭಾಷ್ಯಂ (3) ಶ್ರೀ ವಿಷ್ಣುಧರ್ಮಂ (4) ಈಶ್ವರ ಸಂಹಿತೈ (5) ಚಂಡಕೌಶಿಕ ನಾಟಕಂ (6) ಉಡ್ಡೈಯವರ್ ನಿಯಮನಪ್ಪಡಿ (7) ಶ್ರೀವಿಷ್ಣುಸಹಸ್ರನಾಮ ಮೂಲಂ (8) ಶೌಂಡಿಲ್ಯಸ್ಮೃತಿ (9) ಶ್ರೀ ಪಾರ್ಥಸಾರಥಿ ಬ್ರಹ್ಮ ಉತ್ಸವಂ (10) ಶ್ರೀ ನರಸಿಂಹ ಬ್ರಹ್ಮ ಉತ್ಸವಂ (11) Sri Bhagavad Gita (English) (12) Sri Mukundamala (English verse) (13) Sri Vachana Bhushanam (English) (14) ಆಗಮ ಪ್ರಾಮಾಣ್ಯಂ (15) ಕರಾವಲಂಬಸ್ತೋತ್ರಂ (16) ಸಿದ್ಧಿತ್ರಯಂ (17) ಶ್ರೀ ಭಾಷ್ಯ ಪ್ರಮೇಯ ಮೂಲ (18) ವೇದಾಂತ ಕಾರಿಕಾವಳೀ (19) ಹರಿಮಹಾತ್ಮ ದರ್ಪಣಂ (20) ಭರದ್ವಾಜ ಸಂಹಿತೈ (21) ಶ್ರೀ ವರಾಹ ಚರಮ ಶ್ಲೋಕಂ (22) ಶ್ರೀ ವಚನಭೂಷಣಂ (23) ವೇದಾಂತ ದೀಪಸಾರಂ (24) ವೇದಾಂತ ಸಂಗ್ರಹಂ (25) ವೆಂಕಟಾಚಲ ಮಹಾತ್ಮ್ಯಂ (26) ಯತಿರಾಜ ವಿಂಶತಿ (27) ಅಥರ್ವ ಶಿಖಾವಿಲಾಸಂ (28) ಪ್ರಸನ್ನ ಪಾರಿಜಾತಂ (29) ವಾಕ್ಯಗುರು ಪರಂಪರೈ (30) ಸುಭಾಲೋಪನಿಷತ್ (31) ತತ್ವತ್ರಯಂ (English translation) (32) ಜಿತನ್ತೈ, ಶರಣಾಗತಿ ಗದ್ಯಂ (33) ಕನ್ನಡ ಮುನುಕ್ಷುಪ್ಪಡಿ (34) ಉನ್ಮತ್ತ ರಾಘವಂ ಇತ್ಯಾದಿ, ಇತ್ಯಾದಿ.

ಇವುಗಳಲ್ಲಿ 9ರಿಂದ 13 ಗ್ರಂಥಗಳೂ 31 & 33ನೇ ಗ್ರಂಥವೂ ಇವರು ಬರೆದುವು. ಮಿಕ್ಕವು ಇವರಿಂದ ಪರಿಶೋಧಿಸಲ್ಪಟ್ಟು ಅಚ್ಚಾದವು.

೫೦ ಶ್ರೀ॥ ಆ॥ ಶ್ರೀ ಕಲ್ಕೀ ಸ್ವಾಮಿಗಳು (ಎಂ. ಟಿ. ನರಸಿಂಹಾಚಾರ್ಯರು

(1) ವೇದಾಂತ ಪಾದಾವಳೀ
(2) ವರವರಮುನಿದಿನಚರ್ಯಾ
(೨) ಪರಿವೃತ್ತಿ ರತ್ನಮಾಲಾ
(4) ಗೀತಾರ್ಥ ಸಾರಾಮೃತ (ಸಂಸ್ಕೃತ)
(೬) ಶ್ರೀಕೃಷ್ಣ ಗೋಪೀ ಸಂವಾದ
(6) ಅನಂತಾರ್ಯ ವೈಭವಂ (ಸಂಸ್ಕೃತ)
(7) ಸಹಸ್ರ ಗಾಥಾರತ್ನಾವಳೀ
(8) ಶ್ರೀ ಭಗವನ್ಮತ
(9) ಶ್ರೀಭಾಷ್ಯ ಸಾರಾಮೃತ
(10) ಗೀತಾಮೃತ ತರಂಗಿಣೀ
(11) ಗೀತಾಸಾರಾಮೃತ (ಕನ್ನಡ)
(12) ತಿರುವಾಯ್ಮೋಳಿ (ಸಂಸ್ಕೃತಕ್ಕೆ ಪರಿವರ್ತನೆ)
(13) ಲಘು ನಿತ್ಯಾನುಸಂಧಾನ
(14) ಬೃಹನ್ನಿತ್ಯಾನುಸಂಧಾನ (manuscript)
(15) ಮಹಾತ್ಮ ಚರಿತಾವಳಿ
(16) ಸಂಪ್ರದಾಯ ಸಾರಾವಳಿ
(17) ಮಂಡಯಂ ಶ್ರೀವೈಷ್ಣವ ಸಮಯಾಚಾರಂಗಳ್
(18) ಗೋತ್ರಪ್ರವರ ನಿಬಂಧನಸಾರಂ
(19) ಆಶೌಚಾದಿ ನಿರ್ಣಯಃ
(20) ನಾಲಾಯಿರ ಪ್ರಬಂಧ (ಸಂಸ್ಕೃತ ಪರಿವರ್ತನ) ಇತ್ಯಾದಿ.

(ಈ ಮಹಾತ್ಮರು ಬರೆದಿಟ್ಟಿರುವ ಗ್ರಂಥಭಂಡಾರವು ಮಹತ್ತರವಾಗಿದೆ)

೬೨ ಮಹಾಮಹೋಪಾಧ್ಯಾಯ, ರಾವ್ ಬಹದ್ದೂರ್, ಪ್ರಾಕ್ತನ ವಿಮರ್ಶ ವಿಚಕ್ಷಣ, ಪ್ರಾಜ್ಞವಿದ್ಯಾವೈಭವ ಆರ್. ನರಸಿಂಹಾಚಾರ್ಯರು.

(1) ನಗೆಗಡಲು, (೩) ರಿಂದ (4) ಕರ್ಣಾಟಕ ಕವಿಚರಿತೆ (5) ನೀತಿ ವಾಕ್ಯಮಂಜರಿ (6) ರಿಂದ 8 Mysore Archaeological Reports

(Govt. 1906-1924) (19)ನೀತಿಮಂಜರಿ (20) Monograph on Belur & Helebid(Govt.)

(21) Monograph on Hosahalli (Govt.) (22) Monograph on ಸೋಮನಾಥಪುರ (Govt.) (23) Articles on ಶೃಂಗೇರಿ (24) Madhva & Sayana (25) Research articles in various peripodicals ಇತ್ಯಾದಿ

೩೩. ಆಜಿ ರಾಮಾನುಜೈಯ್ಯಂಗಾರ್ಯರು —

ಇವರು ಆರ್ಯಮತ ಸಂಜೀವಿನಿ, ಕರ್ಣಾಟಕ ಕಾವ್ಯಕಲಾನಿಧಿ, ಕರ್ಣಾಟಕ ಕಾವ್ಯಮಂಜರಿ ಮಾಸಪತ್ರಿಕೆಗಳಲ್ಲಿ ಸಹಸಂಪಾದಕರಾಗಿಯೂ ಪ್ರತ್ಯೇಕವಾಗಿಯೂ ಅನೇಕ ಗ್ರಂಥಗಳನ್ನು ಪ್ರಚಾರಪಡಿಸಿದ್ದಾರೆ. ಅಲ್ಲದೆ ಹೊಸ ಗ್ರಂಥಗಳನ್ನು ರಚಿಸಿದ್ದಾರೆ. ಕನ್ನಡ ಭಾಷೆಗೆ ಇವರು ಮಾಡಿರುವ ಸೇವೆಯು ಅಪಾರವಾದದ್ದು.

ಚಂಪೂ ಗ್ರಂಥಗಳು: (1) ಮಲ್ಲಿನಾಥಪುರಾಣ (2) ಅಜಿತತೀರ್ಥಕರ ಪುರಾಣ (3) ಅರ್ಥನೇಮಿ ಪುರಾಣ (4) ಚಂದ್ರಪ್ರಭ ಪುರಾಣ (5) ಲೀಲಾವತೀ ಪ್ರಬಂಧ (6) ಕಾವ್ಯಸಾರ (7) ಚಿಕ್ಕದೇವರಾಯವಿಜಯ (8) ಚಿಕ್ಕದೇವೇಂದ್ರ ವಂಶಾವಳಿ (9) ಗಿರಿಜಾಕಲ್ಯಾಣ (10) ಅಭಿನವ ದಶಕುಮಾರ ಚರಿತ್ರೆ (11) ಕಬ್ಬಿಗರಕಾವ ಇತ್ಯಾದಿ.

ಷಟ್ಪದೀ ಗ್ರಂಥಗಳು: (12) ನಳಚರಿತ್ರೆ (13) ಹರಿಶ್ಚಂದ್ರಕಾವ್ಯ (14) ಜೀವಂಧರ ಚರಿತ್ರೆ (15)ಭಾವಚಿಂತಾರತ್ನ (16)ನಂದೀಮಹಾತ್ಮ್ಯಂ (17)ಗಯಚರಿತ್ರೆ ಇತ್ಯಾದಿ.

ಶ್ರೀವೈಷ್ಣವ ಗ್ರಂಥಗಳು: (18) ದಿವ್ಯಸೂರಿ ಚರಿತ್ರೆ (19) ಚಿಕ್ಕದೇವರಾಯ ಬಿನ್ನಪಂ (20) ಅರ್ಥಪಂಚಕಂ (21)ಭಗವದ್ಗೀತಾರ್ಥ ಪ್ರತಿವಾದನ ಕೇರ್ತನಂ (22)ಮುಕುಂದಮಾಲಾ (ಗೀತಾರೂಪ ಕನ್ನಡದಲ್ಲಿ) ಇತ್ಯಾದಿ.

ಗದ್ಯ: (23)ಶ್ರೀವಿಷ್ಣು ಪುರಾಣ (1, 2, 4, 5 ಇತ್ಯಾದಿ ಅಂಶಗಳು) (24) ಚಿಕ್ಕದೇವರಾಜ ವಂಶಾವಳೀ (25)ಶ್ರೀ ರಾಮಾಶ್ವಮೇಧ (26) ಅದ್ಭುತ ರಾಮಾಯಣ (27)ವತ್ಸರಾಜ ಚರಿತ್ರೆ ಇತ್ಯಾದಿ.

ನಾಟಕ: (27) ಮಿತ್ರವಿಂದಾ ಗೋವಿಂದ ನಾಟಕಂ.

ನಿಘಂಟು: 28) ಚತುರಾಸ್ಯ ನಿಘಂಟು (29) ಕರ್ಣಾಟಕ ನಿಘಂಟು (30) ರಳಕುಳ ನಿಘಂಟು (31) ಕರ್ಣಾಟಕ ಸಂಜೀವನಂ (32) ಕರ್ಣಾಟಕ ಶಬ್ದಸಾರಂ (33) ಕವಿಕಂಠಹಾರಂ ಇತ್ಯಾದಿ.

ಶತಕ: (34)ಪಂಪಾಶತಕ (35)ಶುಭಾಶುಭ ಮುಕ್ತಕ ಶತಕ (36) ಅಪರಾಜಿತೇಶ್ವರ ಶತಕ.

ಸಂಕಲನ: (37) ಜೀವೇಶ್ವರ ಸಾಂಗತ್ಯ (38) ಕಪೋತ ವಾಕ್ಯ (39) ಗಜೇಂದ್ರ ಮೋಕ್ಷ (40) ಗೀತಾಗೋಪಾಲ ಮುಕುಂದಂ (41) ಪ್ರಬಂಧಾವಳಿ (ಸ್ವಂತ ಗ್ರಂಥ) (42) ಪ್ರಮಾಣ ಪ್ರಮೇಯ ವಿವೇಕ (43) ಕವಿ ಸಮಯ (ಸ್ವಂತ) (44)ನಾಲ್ಕನೇ ರೀಡರ್ (ಸರ್ಕಾರದ ಪರವಾಗಿ) (45) ಬಾಗಿಲು ಭದ್ರ (ಸ್ವಂತ)(46) ಆದಿಪರ್ವ & ಸಭಾಪರ್ವ (joint) (47) ಶ್ರೀಮನ್ಮಹಾರಾಜ ಶ್ರೀಕೃಷ್ಣರಾಜ ಒಡೆಯರವರ ಭಾಷಣಗಳು (ಕನ್ನಡಕ್ಕೆ ಭಾಷಾಂತರ ಇತ್ಯಾದಿ.

✓ (೩೪) ಎಂ. ಬಿ. ವರದರಾಜೈಂಗಾರ್ಯರು1937

(1) Sri Bhashya (translation associated with Prof. M. Rangacharya)

(2) Vedarthasangraha (Translation published serially in the Brahmavadin)

(3) Tatva-Mukta-Kalapa (Translated & not yet published

(೩೫) ಗೋಮಠ ಶ್ರೀನಿವಾಸ ಜೋಸ್ಯರವರು.

(1) ಋಗ್ವೇದ.

✓ (೩೬) ಪಂಡಿತದೇವಶಿಖಾಮಣಿ ಆಳಶಿಂಗ್ರಾಚಾರ್ಯರವರು (ಪ.ಕ್ರಿಶ. 1940)

(1) ಚಂಡಕೌಶಿಕ ನಾಟಕ (ಕಡೇ ಅಂಕ) (2) ಶಲ್ವನಾರಾಯಣ ಶತಕ (ಪದ್ಯ) (3) ಸ್ವಪ್ನವಾಸವದತ್ತ (ನಾಟಕ) (4) ಶ್ರೀಮತೀ ಪರಿಣಯ (ನಾಟಕ) (5)ರಾಮಾಯಣ (೮ ಭಾಗಗಳು) (6) ಭಾಗವತ (೮ ಭಾಗಗಳು) (7) ಮಹಾಭಾರತ (೭ ಭಾಗಗಳು) (8) ಪ್ರಥಮ ಚಿಕಿತ್ಸೆ (ತರ್ಜಮೆ) (9) ಯುದ್ಧವೂ ಅದರ ಪರಿಣಾಮವೂ (10) ಭಗವದ್ಗೀತೆ (11) ಪಂಚರಾತ್ರ ರೂಪಕಂ. (12) ಪಂಚಭಾಷಾ ಪ್ರಹಸನ ಮತ್ತು ಅನೇಕ ಲೇಖನಗಳು ಇತ್ಯಾದಿ.

(೩೭) ಶ್ರೀ ಶ್ರೀ ವಾಸನಂದಸ್ವಾಮಿಗಳು (ಎಂ.ಎ. ನಾರಣ್ಯೆಯ್ಯಂಗಾರ್ಯರು) Mysore Pradhans (joint-M. A. ಶ್ರೀನಿವಾಸಾಚಾರ್ಯರು)

(೩೮) ಪಂಡಿತ ದೇವಶಿಖಾಮಣಿ ರಾಮಾನುಜೈಯ್ಯಂಗಾರ್ಯರು.

(1) ತತ್ವಶುದ್ಧಿ (2) ಶಿವತತ್ವಸಾರ.

(೩೯) ಶ್ರೀ ಮತ್ಪರಮಹಂಸೇತ್ಯಾದಿ ಶ್ರೀ ಯದುಗಿರಿ ಯತಿರಾಜ ರಾಮಾನುಜ ಜೀಯರ್ ಸ್ವಾಮಿಗಳು (ಶ್ರೀ॥ ಉ॥ ಆಸೂರಿ ಅನಂದಾಳ್ವಾರ್ ಸ್ವಾಮಿಗಳು) (ಪ. 1943)

(1) ಕಾವ್ಯಮಂಜರಿ (Editor) (2) ಪಾದ್ಮಸಂಹಿತೆ (Editor 2 volumes) (3) ಶ್ರೀ ಪೌಷ್ಕರ ಸಂಹಿತೆ (ರತ್ನತ್ರಯ) (4) ಶ್ರೀ ಕಾಶ್ಯಪ ಸಂಹಿತೆ (ವಿಷ ಚಿಕಿತ್ಸೆ) (5) ಅಷ್ಟಶ್ಲೋಕೀ (ಶ್ರೀ॥ ಉ॥ ವೇದಾಂತ ರಾಮಾನುಜ ಮುನಿಗಳವರ ಗ್ರಂಥ) (6) ಶ್ರೀಸದ್ವಿದ್ಯಾವಿಜಯಂ (7) ಅದ್ವೈತ ವಿದ್ಯಾವಿಜಯಂ (8) ಶಾರದಾತನಯ ಭಾವಪ್ರಕಾಶನಂ (9) ತಾಪಸವತ್ಸರಾಜನಾಟಕ (10) ಶೃಂಗಾರ ಪ್ರಕಾಶ (೨೨, ೨೩, ೨೪ ಭಾಗಗಳು) (11) ವಿಜಯಮಂಗಳ ದೀಪಿಕಾ.

ಈ ಮೇಲ್ಕಂಡ ಗ್ರಂಥಗಳು ಅಚ್ಚಾಗಿವೆ.

(12) ಕಾವ್ಯಪ್ರಕಾಶ (ಶ್ರೀ ಚಕ್ರವರ್ತಿಯ ವ್ಯಾಖ್ಯಾನಸಹಿತ) (13) ರಘು ವಂಶದ ಅಕಾರಾಡಿ (14) ಮೇಘದೂತ ಅಕಾರಾದಿ (15) ಜಾನಕೀಹರಣ (ಸಿಲೋನ್ ದೇಶದ ಒಬ್ಬರಾಜನಿಂದ ಕ್ರಿ.ಶ.೧೫೦೦) (16) ಶೃಂಗಾರ ಪ್ರಕಾಶ (೧ ರಿಂದ ೩ ಭಾಗಗಳು) (17)ಬಹ್ಮವಿದ್ಯಾವಿಜಯ (ಮಹಾಚಾರ್ಯ) (18)ಪರಿ

ಕರವಿಜಯ (ಮಹಾಚಾರ್ಯ) (19) ಶೃಂಗಾರ ಪ್ರಕಾಶ (೪–೬ ಭಾಗಗಳು) (20)ಶ್ರೀ ಪರಮೇಶ್ವರ ಸಂಹಿತೆ (21)ಕುಮಾರ ಸಂಭವ (ಅಕಾರಾದಿ)(22) ಮಹಾಚಾರ್ಯರ ಶ್ರೀ ಭಾಷ್ಯ ವ್ಯಾಖ್ಯಾನ (23) ಉತ್ಸವ ಸಂಗ್ರಹ (24) ಶೃಂಗಾರ ಪ್ರಕಾಶ (೭ ರಿಂದ ೨೧, ೨೫ ರಿಂದ ೩೬ ಭಾಗಗಳು) (25) ಮಾನ ಸಾರಶಿಲ್ಪ (26) ಭರತನಾಟ್ಯಶಾಸ್ತ್ರ (27) ಪುರಾಣ ಮಾರ್ಗ ದೀಪಿಕಾ ಇತ್ಯಾದಿ ಇತ್ಯಾದಿ.

(೪೦) ಟಿ. ಪಿ. ಆನಂದಾಳ್ವಾರ್ಯರು.

(1) ರಿಂದ (6) ಕಾದಂಬರಿಗಳು ಮತ್ತು ಕಥೆಗಳು.

(೪೧) ಪ್ರೊಫೆಸರ್ ಎಂ. ಟಿ. ನಾರಣ್ಯೆಯ್ಯಂಗಾರ್ಯರು.

Many articles in mathematical journals (About 22 in number)

(೪೨) Doctor ಎಂ. ಎ. ಸಂಪತ್ಕುಮಾರನ್‌ರವರು.

Many articles of research in Botany journals (about 14 in number)

(೪೩) ಎಸ್. ವಿ. ಗೋವಿಂದರಾಜ್ಯೆಂಗಾರ್ಯರು (ಪ. 1946)

(1) ತಾಮಸ ಪ್ರಭುಚರಿತೆ (ಷಟ್ಪದಿ ಗ್ರಂಥ) (2) ಉಗ್ರಸೇನ ಪಟ್ಟಾಭಿಷೇಕ (3) ಸ್ಮಶಾನಗೀತೆ (ಪದ್ಯ) (4) ಶ್ರೀಮದನಂತಾರ್ಯಚರಿತೆ (ಗದ್ಯ) (5) ಶ್ರೀ ರಾಮಕೃಷ್ಣ ಚರಿತಾಮೃತಂ (೨ ಭಾಗಗಳು) (6) ಬಾಲ ರಾಮಾಯಣ (7) ಶ್ರೀಕೃಷ್ಣ ಸೇವಾವ್ರತಂ (ಪದ್ಯ) (8) ಪ್ರಿಂರೋಜ ವಿಜಯಂ (9)ಕೃಷ್ಣರಾಜವೈಭವಂ.

(೪೪) ಎಸ್. ಎನ್. ತಿರುಮಲಾಚಾರ್ಯರು.

(1) India–journal (ಈ ಪತ್ರಿಕೆಯ ಸಂಪಾದಕರು, ಪ್ರಕಾಶಕರು)

(೪೫) ಎಂ. ಎ. ತಿರುನಾರಾಯಣಾಚಾರ್ಯರು.

(1) Law Reports-Editor.

(೪೬) ಎಂ. ಸಿ. ಅಳಸಿಂಗ ಪೆರುಮಾಳ್‌ರವರು (ಪ. 1909)

(1)ಬ್ರಹ್ಮವಾದಿನ್ Editor. (2)ಪ್ರಬುದ್ಧಭಾರತ, Native States, India, Weekly Review ಇತ್ಯಾದಿ ಪತ್ರಿಕೆಗಳಲ್ಲಿ ಲೇಖನಗಳು.

ಜೀವಿಸಿರುವ ಗ್ರಂಥಕರ್ತರು

(೧) ಆರ್. ಅಳ್ವಾರ್ಯೈಯ್ಯಂಗಾರ್ಯರು.

(1) ಅಂಕಗಣಿತ (೪ ಭಾಗಗಳು) (2) ಕ್ಷೇತ್ರ ಮತ್ತು ರೇಖಾಗಣಿತ (3) ಮಿತಸಂತಾನೋತ್ಪತ್ತಿ (4) ಯುವಕ ಮಂಡಲೀ ಪತ್ರಿಕೆ ಮುಂತಾದ ಪತ್ರಿಕೆಗಳಲ್ಲಿ ಲೇಖನಗಳು ಇತ್ಯಾದಿ.

(೨) ಆರ್. ತಿರುನಾರಣೈಯ್ಯಂಗಾರ್ಯರು (ಈಚೆಗೆ ಪರಂಧಾಮವನ್ನೈದಿದ್ದಾರೆ)
(1) ಚಿಕ್ಕದೇವರಾಜವಿಜ್ಞಾಪ್ಯೆ (ತಮಿಳು ಮತ್ತು ಇಂಗ್ಲೀಷ್)
(2)ವಾರ್ತಾಮಾಲೆ (ಇಂಗ್ಲೀಷ್) (3)ವಿಶಿಷ್ಟಾದ್ವೈತ (ಇಂಗ್ಲೀಷ್– ಅಚ್ಚಾಗಿಲ್ಲ)

(೩) ಸಾಂಖ್ಯತೀರ್ಥ, ಸಾಂಖ್ಯವಿದ್ವಾನ್, ವೇದಾಂತ ವಿದ್ವಾನ್, ಆಸ್ಥಾನ ಮಹಾ ವಿದ್ವಾನ್ ಇತ್ಯಾದಿ ಜಗ್ಗು ವೆಂಕಟಾಚಾರ್ಯರು
(1) ರಸಗಂಗಾಧರ-ಮರ್ಮಪ್ರಕಾಶಿಕಾ-ಕ್ರಮೋದ್ಘಾಟನ (2) ಯಾದವಗಿರಿಮಹಾತ್ಮ್ಯಸಂಗ್ರಹ (3)ಲಕ್ಷ್ಮೀಸ್ತೋತ್ರಂ (4)ಬೃಂದಾವನ ವರ್ಣನಂ (5)ಯದುಗಿರಿ ನಾರಾಯಣಾಸ್ತವಂ(ಪರಿಷ್ಕರಿಸಿ ಅಚ್ಚು ಮಾಡಿಸಿದ್ದು) ಇತ್ಯಾದಿ.

(೪) ವಿದ್ವಾನ್ ಪೆರೀಸ್ವಾಮಿ ಶ್ರೀನಿವಾಸೈಯ್ಯಂಗಾರ್ಯರು.
(1) ಶಾಲಾ ಪಠ್ಯಪುಸ್ತಕಗಳ ಟೀಕೆಗಳು.

(೫) ಆಯುರ್ವೇದೋಪಾಧ್ಯಾಯ, ವೈದ್ಯವಲ್ಲಭ, ಪರೋಪಕಾರ ಕಾರ್ಯ ವಲ್ಲಭ ಎಂ. ಜಿ. ಶಿಂಗರೈಯ್ಯಂಗಾರ್ಯರು

(1) ಗೃಹವೈದ್ಯದ ಕೈಪಿಡಿ (ಕೆಲವುಭಾಗ ಅಚ್ಚಾಗಿದೆ) (2)ಪ್ರಾಣಿಗಳ ವಿಷಗಳಿಗೆ ಸುಲಭ ಚಿಕಿತ್ಸೆ (3) ಭರತಖಂಡದ ಪ್ರಾಚೀನ ಕಲೆಗಳು (4) ಹಿಂದೂದೇಶದ ಪ್ರಾಚೀನ ಚಿತ್ರಕಲೆ (ಲೇಖನ) (5) Oriental

Tit-bits in Engineering (part) (6) ಆಯುರ್ವೇದ ಪಂಡಿತರಿಗಾಗಿ ಅರಿಸಿದ ಅನುಭವದ ಯೋಗಗಳು (ಅಚ್ಚಾಗಿಲ್ಲ) (7) ಯೋಗ ರತ್ನಾಕರ (ಕನ್ನಡ ಭಾಷಾಂತರ ಅಚ್ಚಾಗಿಲ್ಲ) (8) Some experiments of engineering recipes of old (article)

(9) ಶ್ರೀ ಯದುಗಿರಿ ಯತಿರಾಜ ಜೀಯರ್ ಸ್ವಾಮಿಗಳವರ ಉತ್ತರ ದೇಶದ ಯಾತ್ರೆ (10) ಮಂಡಯಂ ಯುವಕ ಮಂಡಲೀ ಪತ್ರಿಕೆ; ಕನ್ನಡಿಗರ ಜ್ಞಾನದೀವಿಕೆ; Mysore Engineer's Association Bulletin ಇವುಗಳಲ್ಲಿ ಲೇಖನಗಳು (11) ಆಯುರ್ವೇದದ ಸುಲಭ ಚಿಕಿತ್ಸೆಗಳು (3 Editions) (12) ಮಂಡಯಂ ಶ್ರೀವೈಷ್ಣವ ಮಹಾಜನರ ಚರಿತೆ ಇತ್ಯಾದಿ.

(೬) ಪ್ರೊಫೆಸರ್ ಎಂ. ಒ. ಪಾರ್ಥಸಾರಥಿ ಐಯ್ಯಂಗಾರ್ಯರು.
Various Research articles on Algae (ಪಾಶಿ)

(೭) ವಿದ್ವಾನ್, ಆರ್. ಎ. ಐಯ್ಯನೈಯ್ಯಂಗಾರ್ ಸ್ವಾಮಿಗಳು.
(1)ಕರ್ನಾಟಕ ಆಚಾರ್ಯ ಹೃದಯ (2)ಗೀತಾರ್ಥ ಸಂಗ್ರಹ (3) ಭಗವದ್ಗೀತೆ (ಕನ್ನಡ ಗದ್ಯಾನುವಾದ) (4) ಈಶಾವಾನ್ಯೋಪನಿಷತ್ (ಕನ್ನಡ) (5)ಅಷ್ಟಶ್ಲೋಕೀ (ಕನ್ನಡ) (6) ಅನೇಕ ವಿಶಿಷ್ಟಾದ್ವೈತ ಉಪನ್ಯಾಸಗಳು.

(೮) ಎಂ. ಸಿ. ಕೃಷ್ಣಸ್ವಾಮ್ಮೈಯ್ಯಂಗಾರ್ಯರು (Bangalore)
(1) A guide to Kalidasa's Raghuvamsa (2) A guide to Bharitruhari's Neeti Sataka (3) Pancatanthra (4) ಬಾಲರಾಮಾಯಣ with notes
(5) ಶ್ರೀ ರಾಮಾಯಣಸಂಗ್ರಹ ದೀಪಿಕೆ (Sanskrit & Kannada)
(6) Articles on Sanatana Arya Dharma

(೯) ಎಂ. ಜೆ. ನರಸಿಂಹನ್‌ರವರು.
Several Botanical Research Articles

(೧೦) ಎಂ. ಎ. ನರಸಿಂಹಾಚಾರ್ಯರು (ಅಯ್ಯಾಧೊರೆ)
(1) ಟಗರಿನ ಕಾಳಗ (2) ಹೆಲಸಿನಹಣ್ಣಿನ ಮಾಯ (3) ಮೌರಿಯ ನಿಂಗ ಪತ್ರಿಕೆಗಳಲ್ಲಿ ಕೆಲವು ಲೇಖನಗಳು.

(೧೧) ಎಂ. ಆಜಿ. ನಾರಣೈಯ್ಯಂಗಾರ್ಯರು.
(1) ಮಾತೃಭೂಮಿಯ ಸೇವೆ (2) ಸಾಧನೋಪಾಯಗಳೂ ಮತ್ತು ಸಿದ್ಧೋಪಾಯವೂ (3) ಜ್ಞಾನವಿಕಾಸದ ಮಹತ್ವ (4) ಕನ್ನಡಿಗರ ಜ್ಞಾನದೀಪಿಕೆಯಲ್ಲಿ ಲೇಖನಗಳು (5) ವಿದ್ಯಾದಾಯಿನಿಯಲ್ಲಿ ಲೇಖನಗಳು (6) ಪ್ರಾಥಮಿಕ ವಿದ್ಯಾಭ್ಯಾಸದ ಕ್ರಮ ಇತ್ಯಾದಿ.

(೧೨) ಎಂ. ಸಿ. ಅಳಸಿಂಗ್ರಾಚಾರ್ಯರು (ಪರಂಧಾಮವನ್ನೈದಿದರು)
(1)ವಿಜ್ಞಾನಶಾಸ್ತ್ರ (2) ಕನ್ನಡಿಗರ ಜ್ಞಾನದೀಪಿಕೆಯಲ್ಲಿ ಲೇಖನಗಳು. (3) ನಿಜವಾದ ಸುಖವು ಎತರಲ್ಲಿದೆ? (4) ಮಂಡಯಂ ಯುವಕ ಮಂಡಲಿ ಪತ್ರಿಕೆಯಲ್ಲಿ ಲೇಖನಗಳು.

(೧೩) ಎಚ್. ಆರ್ ರಂಗಸ್ವಾಮಿ ಐಯ್ಯಂಗಾರ್ಯರು.
1) Mahabharata (Thesis in Historical Quarterly) (2) ವಾದವಿಧಿ (3) ದಿನ್ನಾಗನ ಪ್ರಮಾಣ ಸಮುಚ್ಚಯ (4) ಅನಂತ ನಾಥಪುರಾಣ (5) ಸಾಕ್ರೆಟೀಸನ ಸಂವಾದಗಳು (6) ಯಂಗ್ ಇಂಡಿಯಾದಲ್ಲಿ ಲೇಖನಗಳು (7) ವಿದ್ಯಾದಾಯಿನಿಯಲ್ಲಿ ಲೇಖನಗಳು ಇತ್ಯಾದಿ.

(೧೪) ಎಂ. ಎ. ದೊರೆಸ್ವಾಮಿ ಐಯ್ಯಂಗಾರ್ಯರು.
(1)ತ್ರಿಪುರ ದಹನ (2)ವಿಷ್ಣ್ವಖಿಂಡದ ಜಾಗೃತಿ (3)ಮಾಧವ ವಿದ್ಯಾರಣ್ಯ (4)ಧರ್ಮಜ್ಯೋತಿ (5)ಇಂಗ್ಲೆಂಡಿನ ಸರ್ಕಾರ ಕ್ರಮ (6)ರಿಂದ (20) ಜಯಕರ್ಣಾಟಕ ಮುಂತಾದ ಮಾಸಪತ್ರಿಕೆಗಳಲ್ಲಿ ಲೇಖನಗಳು. ಮತ್ತು ಆಚ್ಚಾಗದ ಲೇಖನಗಳು.

(೧೫) ಎಂ. ಎ. ಗೋಪಾಲಸ್ವಾಮಿ ಐಯ್ಯಂಗಾರ್ಯರು.
(1) Mysore Observer (Editor) (ಪತ್ರಿಕೆ) (2) ಖಾದೀ (3)

ಯಾಜ್ಞವಲ್ಕ್ಯ (4) ಇಂಡಿಯಾದೇಶದ ರಾಜ್ಯಾಂಗ ಪದ್ಧತಿ (5) ಗಾಂಧೀ ಕಥಾ ಪ್ರಸಂಗ (6) ಸ್ವದೇಶೀ ಹಾಡುಗಳು (7) ಮೈಸೂರು ರಂಗಭೂಮಿ (8) ಮುಂಡಯಂ ಯುವಕ ಮಂಡಲಿ ಪತ್ರಿಕೆಯಲ್ಲಿ ಲೇಖನಗಳು (9) ಪ್ರೊಫೆಸರ್ ಎಂ. ರಂಗಾಚಾರ್ಯರ ಜೀವನಚರಿತ್ರೆ (10) Model Constitution for Mysore.

(೧೭) ಜಿ. ಆರ್. ಜೋಸ್ಯರವರು.

I) Sociology (joint) (2) Selections from Ingersol (Appreciation) (3) Tippu Sultan (4) Brahmanophobia (5) ವ್ಯಾಪಾರ (6) ಹುಡುಗರು ಮತ್ತು ಹುಡುಗಿಯರು (7) ಆರ್ಯ ಮಹಿಳಾ ಕೀರ್ತಿ (8) ಋಗ್ವೇದ (9) Rationalist (journal-editor)(I0) ಕಾನೇರಿ (11) Problem of wealth (12) ಮೈಸೂರು ದೇಶದ ಅರಸರ ಚರಿತ್ರೆ (ಇಂಗ್ಲೀಷ್) ಇತ್ಯಾದಿ.

(೧೮) ಎಂ. ಆರ್. ಸಂಪತ್ಕುಮಾರನ್‌ರವರು.

(I) Sri Krishna (2) Life of Anantarya (3) Several Magazine articles (4) Publisher EducationalReview (5) Sri Rama 6) Bhakthan (Editor)

(೧೯) ಎಂ. ಒ. ತಿರುನಾರಣೈಯ್ಯಂಗಾರ್ಯರು.

Sevaral Research Articles on enomlogy & malaria.

(೨೯) ವಿದ್ವಾನ್ ಜಗ್ಗು ಶಿಂಗ್ರೈಯ್ಯಂಗಾರ್ಯರು.

(1)ಯಮಕೈಲಚಂಪೂ (2)ದಾಶರಥಿ ಚರಿತಂ(3,ಕೃಷ್ಣ ಕಥಾ ರಹಸ್ಯಂ (4) ವೈರಮುಡಿ ವೈಭವಂ (5)ಶ್ರೀಸ್ತವದಶಕಂ (6) ಯತಿರಾಜದಶಕಂ 7) ಬರಲಿನ ಭಾಗ್ಯ (8) ಮಾರುತಿ ಸ್ತೋತ್ರಂ (9) ನೀತಿಸಾರಾವಳೀ (10 ಆರ್ಜೆಯ ಅಚ್ಯುತ (11) ಸರ್ವಜ್ಞ ಪದಗಳು ಇತ್ಯಾದಿ.

(೨೦) ವಿದ್ವಾನ್ ಜಗ್ಗು ಆಳ್ವಾರೈಯ್ಯಂಗಾರ್ಯರು.

ಗದ್ಯಕಾವ್ಯ—(1) ಜಯಂತಿಕಾ (ಕಥೆ)(2)ಉಪಾಖ್ಯಾನ ರತ್ನ ಮಂಜೂಷಾ

3) ಭಾವ ಕೌಮುದೀ.

ಪದ್ಯಕಾವ್ಯ—4) ಕರುಣಾರಸ ತರಂಗಿಣೀ 5) ಪಥಿಕೋಕ್ತಿಮಾಲಾ 6) ಶೃಂಗಾರ ಲೀಲಾಮೃತಮ್.

ಚಂಪೂಕಾವ್ಯ—(7) ಯತಿರಾಜ ಚಂಪೂ (8) ಭಾರತಸಂಗ್ರಹ.

ನಾಟಕಗಳು—(9)ಅಮೃತಾಂಬುಕಂ (10) ಸ್ವಾಮಂತಕಂ (11) ಪ್ರತಿಜ್ಞಾ ಕೌಟಿಲ್ಯಂ (12) ಮಂಜುಳ ಮಂಜೀಕಂ (13) ಬಲಿ ವಿಜಯ (ವ್ಯಜ್ಞ್ಞಂ) (14) ಅಮೂಲ್ಯಮಾಲ್ಯಂ (15) ಅಪ್ರತಿಮಾ ಪ್ರತಿಮಾ (16) ಮಣಿ ಪರಣಂ (17) ಯೌವರಾಜ್ಯ (ಏಕಾಂಕ) (18) ಪ್ರಸನ್ನ ಕಾಶ್ಯಪಂ (19) ಸಂಯುಕ್ತಾ (20) ವೀರಸೌಭದ್ರಮ್.

ಸ್ತೋತ್ರಗಳು—(21) ಹಯವದನ ಸ್ತೋತ್ರ (22 ಅಮೃತಾಖಿ ರೋಹಿಣೀ (23) ಲಕ್ಷ್ಮೀ ದಂಡಕಂ (24) ಯದುಶೈಲೇಶ ಶತಕಂ ಇತ್ಯಾದಿ.

(೨೧) ಎಂ. ಕೆ. ಶಿಂಗ್ಲಾಚಾರ್ಯರು.

(1) ಮಂಡಯದ ಚರಿತ್ರೆ (2) ಶ್ರೀವೈಷ್ಣವ ನಿಷ್ಠೆ (೨ ಭಾಗಗಳು)

(೨೨) ಎಂ. ಕೆ. ವರದರಾಜೈಯಂಗಾರ್ಯರು.

(1) Indian States and theFedertion

(೨೩) ಎಂ. ಎನ್. ಶ್ರೀನಿವಾಸನ್‌ರವರು.

(1) Hindu Law in Mysore.

(೨೪) ಎಂ. ಸಿ. ನರಸಿಂಹಾಚಾರ್ಯರು.

Editor of Brahmavadin from 1909-1914

(1) Methods of developing a business

(2) Fortunes in business & Law of Cause & Effect

(3)How Rs. 750 Can becom Rs. 4000 in twenty months

(4) Simple industries 5) Power of Perfumes.

(೨೫) ಎಂ. ಸಿ. ರಂಗಸ್ವಾಮಿಯವರು.

Editor of ವಿದ್ಯಾವಾಹಿನೀ for some years

(೩೭) ಎಂ. ಬಿ. ನರಸಿಂಹೈಯ್ಯಂಗಾರ್ಯರು.

1) Nyaya Bhaskara of Anandalwar(Translated and published serially in Mythic Society Journal)

2) Various articles in Educational Review

3) Vedantasara of SriRamanuja translated into English

(೩೭) ಎಂ. ಜಿ. ಶ್ರೀನಿವಾಸನ್‌ರವರು.

Articles on Engineering Topics such as 'Brick-nogged Terrace

(೩೮) ಡಾಕ್ಟರ್ ಎಂ. ಜೆ. ತಿರುಮಲಾಚಾರ್ಯರು.

Several Research articles on Botany

(೩೯) ಎಂ. ಎ. ಶ್ರೀನಿವಾಸನವರು.

Advocate, Madras

(1) ಲೀಲಾಸ್ ಬೆಟ್ (ಹಿಂದು ಇಲ್ಲಸ್ಟ್ರೇಟೆಡ್ ವೀಕ್ಲಿ)

(2) ದಿ ಪೋಸ್ಟ್ ಆಫೀಸ್: (ಮೆರ್ರಿ ಮೇಗ್‌ಜೈನ್)

ದಿ ಕರ್ಡ್ ಲೆಗ್: (,, ,,)

ಮಚ್ ಅಡೋ ಅಬೌಟ್ ನತಿಂಗ್: (,, ,,)

ಎವೆರಿ ಮಿಕ್ಸೆಡ್ ಡಬ್ಲ್ಸ್: (,, ,,)

ಕಮಲಾವಿ ಕಲ್ಯಾಣಂ: (ಆನಂದ ವಿಕಟ್ ದೀಪಾವಳಿ ಮಲರ್)

ಯಾನ್ಯೈಯಿ ನನ್ರಿ: (ಆನಂದ ವಿಕಟ್)

ವಿಡಾಮುಯರ್ಚಿ ಪುರಾಣಂ: ,,

ರಾಜಿಯಿ ಯೋಚನ್ಯೆ: ,,

ಜಡ್ಜ್ ಚಿನ್ನಸ್ವಾಮಿ ಅಯ್ಯರ್: ,,

ಆಶಟ್ಟುಕ್ಕೇಳ್ವಿಹಳ್: ,,

ಪುದು ಅಗ್ರಾಶನರ್: ,,

ಪಾಯಿ ಆಡಿಯಲ್ ನುಳ್ಳಾನ್ದಾಲ್: ,,

ಕಾಪ್ಪಿ ನಿನೈವುಹಳ್: ,,

ಪರಿಕ್ಷೆಲ್ಲ ತವರಿಯದೇ ,,
ಪೊಲ್ಲಾದ ಮನಂ: ,,
ಪ್ರೇಮಾಹರ್ಷ: ,,
ಸ್ತ್ರೀಹಳ್ ಶೀರ್ ರೆರುತ್ತತಿಮಷೋದಾ: ,,
ನೋಯಟ್ರ್ ವಾಲಿವು: ,,
ಇಲವಶ ವಿಳಂಬರಂ: ,,
ನಾದ್ದಿ ನಿಷ್ಕಾರಂ: ,,
ಕರ್ಡ ತಿರುಪ್ಪಿಕೊಡುತ್ತ ಪಡಲಂ: ,,
ಕೊಮಾಕ್ಕುಟ್ಟಿಲ್ಲ ಮಾಮಾ: (ಸ್ವದೇಶಮಿತ್ರರ್)
ಯಾರುಕ್ಕೋಟ್ ಎನಕ್ಕೋಟ್: (ವಿಚಿತ್ರರ್)
ಎನ್ನೆಲ್ಲಕೇಟ್ಟಾದೀರ್ ಹಳ್: (ಆನಂದವಿಕಟರ್)

ರೇಡಿಯೋ ನಾಟಕಗಳು:

ಶುದ್ಧ ಪೈತ್ತಿಯಕ್ಕಾರರ್: (Prize play)
ಚಿದಂಬರ ಮಹತ್ವಂ:
ಎದಿರ್ಪಾರಾದುದು:

(೩೦) ಎಸ್. ಶ್ರೀನಿವಾಸಾಚಾರ್ಯರು.

(1) Transalations into Tamil from Tagore
(2) Transalations from the Frenrch of Moliere into Tamil.
(3) ಆಡಿ ಪಾಂಡ್ಯನ್.
(4) ಯುಗಸಂಧಿ.
(5) Several articles in Journals

(೩೧) ಎಂ. ಎ. ಜಾನಕಿ.

(1) Bar Council Lecture.

(೩೨) ಎಂ. ಎ. ರುಕ್ಮಿಣಿ.

(1) Several articles in Aryan Path Astrological Magazine etc.

ಪ್ರಕರಣ ೯

ಮಿಶ್ರವಿಷಯಗಳು

ಪಾಜ್ಞವಾಗಿ ಹೊಂದಿಸಿ ಬರೆಯಲಾಗದ ನಮ್ಮವರ ಚರಿತ್ರೆಯ ಬಿಡಿ ಅಂಶಗಳನ್ನು ನಿರೂಪಿಸುವ ಪ್ರಕರಣವಿದು. ನೂರಾರು ಅಂಶಗಳನ್ನು ಎತ್ತಿ ಹೇಳಬಹುದು. ತ್ವರೆಯಲ್ಲಿ ಒದಗಿದ ಕೆಲವು ವಿಷಯಗಳನ್ನು ಮಾತ್ರ ಬಿನ್ನ ವಿಸಿದೆ.

ನಮ್ಮ ಸ್ತ್ರೀಯರು ಮತ್ತು ಪುರುಷರ ಹೆಸರುಗಳು

ನಾವು ಮಂಡಯದವರಾಗಿ ನಮ್ಮ ಪೂರ್ವಜರ ಮಾತೃಸ್ಥಾನದ ದೇವ ಸ್ಥಾನವು ಶ್ರೀ ಲಕ್ಷ್ಮೀಜನಾರ್ದನ ಸ್ವಾಮಿಯವರದಾಗಿದ್ದರೂ, ನಮ್ಮ ದೇವ ರಿಗೆ "ಮಕ್ಕಳ ಜನಾರ್ದನನೆಂಬ" ವಿಶೇಷ ನಾಮಾಂಕಿತವಿದ್ದರೂ, ನಮ್ಮಲ್ಲಿ ಜನಾರ್ದನನೆಂಬ ಹೆಸರು ಎಲ್ಲೋ ಒಂದೇ ಒಂದು ಇರುವುದು ಬಹಳ ಆಶ್ಚರ್ಯವಾಗಿದೆ. ಕಾರಣ ಗೊತ್ತಿಲ್ಲ. ಗಂಡಸರಲ್ಲಿ ಶ್ರೀನಿವಾಸ ವೆಂಕಟಾಚಾರ್ಯ, ತಿರುಮಲೈ, ತಿರುನೀಂಗದನ್ ಮುಂತಾದ ಹೆಸರೇ ಹೆಚ್ಚು ಸಂಖ್ಯೆಯಲ್ಲಿದೆ. ಇದಾದಮೇಲೆ "ನರಸಿಂಹ" (ಅಳಸಿಂಗರ್, ಸಿಂಗ್ರೈಯ್ಯಂಗಾರ್); "ಕೃಷ್ಣ" (ಗೋಪಾಲ, ರಾಜಗೋಪಾಲ, ಪಾರ್ಥಸಾರಥಿ, ರಾಜಮನ್ನಾರ್); ನಾರಾಯಣ; ರಂಗ; ಸಂಪತ್ಕುಮಾರ; ರಾಮಾನುಜ; ಆನನ್ತಾಳ್ವಾರ್; ಈ ವರಿಸೆಯಲ್ಲಿ ಬರುವಂತೆ ತೋರುತ್ತದೆ. ಇತರ ಹೆಸರು ಕಡಿಮೆ ಸಂಖ್ಯೆಯವು. ರಾಜಂ, ಪದ್ಮನಾಭನ್, ವರದರಾಜನ್, ರಾಮನ್, ಅಪ್ಪಳಾಚಾರ್, ಆಳ್ವಾರ್, ರಾಘವನ್, ವೆಂಕಟರಂಗನ್, ಗೋವಿಂದ, ಶ್ರೀವತ್ಸ, ಅಚ್ಚುತೈಯ್ಯಂಗಾರ್, ಅಪ್ರಮೇಯ ಅಯ್ಯಂಗಾರ್, ಶಾಮೈಯ್ಯಂಗಾರ್, ಶ್ರೀಶೈಲಂ, ರಘುನಾಥ, ರಾಜಸಿಂಹ, ಜಯಸಿಂಹ, ಶ್ರೀಪತಿ ಈ ಹೆಸರುಳ್ಳ ಮಹನೀಯರೂ ವಿರಳವಾಗಿ ಇರುವಂತಿದೆ. ಗೊತ್ತಾಗಿ ಹೇಳಲಾಗುವುದಿಲ್ಲ.

ನಮ್ಮ ಸ್ತ್ರೀಯರ ಹೆಸರಿನಲ್ಲಿ ಯಗ್ಗಮ್ಮ (ಯದುಗಿರಿಯಮ್ಮ), ಶ್ರೀರಂಗಮ್ಮ, ವೇಂಗಡಮ್ಮ, ವೇದವಲ್ಲಿ, ಆಂಡಾಳ್, ರುಕ್ಮಿಣಿ, ಶಿಂಗಾರಂ,



ಮೊದಲನೆಯ ಮಂಡಯ್ಯ ಮಹಿಳಾ ಸಮ್ಮೇಳನ, ಮಂಡ್ಯ

ಬಾಹುಬಲಿಯ ಮಂಡಪವು ಮಳಿಲಿ ಸಮೀಪದ, ಹೊಂಗಳದ

ತಿಮ್ಮಪ್ಪನು ಈ ಹೆಸರುಗಳಿಗೆ ಹೆಚ್ಚು. ಅನಂತರ ಅಲಮೇಲಮ್ಮ, ತಿಂಗಮ್ಮ, ತಂಗಚ್ಚಮ್ಮ, ಸೀತೆ, ಜಾನಕಿ, ಪೆತ್ತುಂದೇವಿ, ಕಮಲ, ಕಲ್ಯಾಣಿ ಈ ಹೆಸರುಗಳು ಬರುವಂತಿವೆ. ಈಚೀಚಿಗೆ ನಮ್ಮ ಸ್ತ್ರೀಯರಲ್ಲಿ ಈ ಕೆಳಗೆಕಂಡ ಹೊಸ ಹೆಸರುಗಳು ಬಂದಿವೆ:—

ಸರಿಮಳಾ, ಶಕುಂತಳಾ, ನಾಗಮ್ಮ, ದ್ವಾರಕೀ, ವೈದೇಹೀ, ಶ್ರೀಮತೀ, ಮೈಥಿಲೀ, ಪ್ರಭಾ, ರಮಾ, ಕಿಟ್ಟಮ್ಮಾ, ಶಾಂತಕುಮಾರಿ, ಪಂಕಜ, ಮೈತ್ರೇಯಿ, ಭಾರತಿ, ಮಂಜುಳಾ, ಮಾಲತಿ, ಸರೋಜ, ಸುಶೀಲಾ, ಕಸ್ತೂರಿ, ರಾಜಮ್ಮ, ಜಯಮ್ಮ, ರಾಜಕುಮಾರಿ, ಪುಷ್ಪವಲ್ಲಿ, ಮಾರಾ, ಗೀತಾ, ಸುಧಾ, ಪದ್ಮಾ ಇತ್ಯಾದಿ.

ಈಚಿಗೆ ಇತರ ಆಧುನಿಕ ಸ್ತ್ರೀಯರನ್ನನುಸರಿಸಿ ನಮ್ಮವರ ಹೆಸರುಗಳೂ ಮಾರ್ಪಾಡಾಗಿವೆ. ಆದುದರಿಂದ ಹೆಸರಿನಿಂದಲೇ ಇವರು ಮಂಡಯದವರು ಎಂದುಗೊತ್ತು ಹಿಡಿಯುವುದು ಕಷ್ಟ.

ಹೆಣ್ಣುಮಕ್ಕಳ ಮದುವೆಯ ವಯಸ್ಸು

ಹಿಂದೆ ನಮ್ಮವರಲ್ಲಿ ಬಹಳ ಚಿಕ್ಕ ವಯಸ್ಸಿನಲ್ಲೇ ಹೆಣ್ಣುಮಕ್ಕಳಿಗೆ ಮದುವೆಯಾಗಿದೆ. ಇತರ ಬ್ರಾಹ್ಮಣ ಪಂಗಡಗಳಲ್ಲಿಯೂ ಇದೇ ಪದ್ಧತಿ ಇತ್ತು.

ಐದು ವಯಸ್ಸಿಗೆ ಒಳಪಟ್ಟು ಮದುವೆಯಾದ ಕೆಲವು ಉದಾಹರಣೆಗಳು:—(೧) ಶ್ರೀ॥ ಉ॥ ಅಪ್ಪಳಾಚಾರ್ ಸ್ವಾಮಿಗಳ ತಾಯಿ ಶ್ರೀರಂಗಮ್ಮನವರು (೧೮ ತಿಂಗಳ ಮಗು) (೨) ಶ್ರೀ॥ ಉ॥ ಮದರಾಸ್ ಟಪ್ಪಣೆ ತಿರುಮಲಾಚಾರ್ಯರ ಹೆಂಡತಿ ಆಂಡಾಳಮ್ಮನವರು (೧೮ ತಿಂಗಳ ಮಗು) (೩) ಮಂಡಯದ ಜಟಾವಲ್ಲಭ ತಿಂಗಳೈಯ್ಯಂಗಾರ್ಯರ ತಾಯಿ ಶ್ರೀರಂಗಮ್ಮನವರು (೩ ವರ್ಷ) (೪) ಮಳೂರು ಆನಂದಾಮ್ಪಿಳ್ಳೈ, ಅಲಮೇಲಮ್ಮನವರು (೫ ವರುಷ) (೫) ಶ್ರೀ॥ ಉ॥ ಹೊನ್ನಲಗೆರೆ ರಾಮಾನುಜೈಯ್ಯಂಗಾರ್ ಸ್ವಾಮಿಗಳ ಹೆಂಡತಿ ಶ್ರೀರಂಗಮ್ಮನವರು (೫ ವರುಷ) (೬) ಶ್ರೀ॥ ಉ॥ ಟಪ್ಪಣೆ ತಿಂಗ್ಳಾಚಾರ್ಯರ ಹೆಂಡತಿ ತಂಗಚ್ಚಮ್ಮನವರು (೫ ವರುಷ) (೭) ಶ್ರೀ॥ ಉ॥

ಅಯ್ಯಾದೊರೆ ತಿರುಮಲೈಯ್ಯಂಗಾರ್ಯರ ಹೆಂಡತಿ ಶ್ರೀರಂಗಮ್ಮನವರು (೩ ವರುಷ (೮) ಮಲ್ಲೇಶ್ವರದ ಆನಂದಾಂಪಿಳ್ಳೈ ಶ್ರೀನಿವಾಸಾಚಾರ್ಯರ ಹೆಂಡತಿ ವೇದಮ್ಮನವರು (೩ ವರುಷ) (೯) ಕರ್ನೂಲ್ ವರದರಾಜೈಯ್ಯಂಗಾರ್ಯರ ಹೆಂಡತಿ ಅಲಮೇಲಮ್ಮನವರು (೩ ವರುಷ) (೧೦) ಕಡ್ಡಿ ಶ್ರೀರಂಗಮ್ಮನವರ ಸೊಸೆ ವೇಂಗಡಮ್ಮನವರು (೫ ವರುಷ)(೧೧) ಪೆರೀಸ್ವಾಮಿ ತಿರುಮಲೈಯ್ಯಂಗಾರ್ಯರ ಹೆಂಡತಿ ತಿಮ್ಮರಸಮ್ಮನವರು (೩ ವರುಷ) (೧೨) ಶ್ರೀ ಯೋಗೀ ಪಾರ್ಥಸಾರಥಿ ಅಯ್ಯಂಗಾರ್ಯ ಸ್ವಾಮಿಗಳ ಅಕ್ಕ ಯದುಗಿರಿಯಮ್ಮನವರು ತಮ್ಮ ಒಂದನೆಯ ವಯಸ್ಸಿನಲ್ಲೇ ವಿಧವೆಯಾದರಂತೆ.

ಈಗ ೬೦–೭೦ ವರುಷಗಳ ಹಿಂದಿನ ಮಾತು ಇದು. ನಮ್ಮ ಹಿರಿಯ ಮಹನೀಯರಿಬ್ಬರು ಮಂಡಯದ ಕೆರೆಗೆ ಸಾಯಂಕಾಲ ಸಂಧ್ಯಾವಂದನೆಗಾಗಿ ಹೋಗಿದ್ದ ವೇಳೆಯಲ್ಲಿ ವಿನೋದವಾಗಿ " ನಿಮ್ಮ ಹೆಂಡತಿ ಹೆಣ್ಣು ಹೆತ್ತರೆ ನನ್ನ ಮಗನಿಗೆ ಆ ಹೆಣ್ಣನ್ನು ಮದುವೆಮಾಡಿಕೊಡಬೇಕು," ಎಂದು ಒಬ್ಬರು ಇನ್ನೊಬ್ಬರಿಗೆ ಹೇಳಿದರಂತೆ. " ಆಗಬಹುದು " ಎಂದರಂತೆ ಇನ್ನೊಬ್ಬರು. ಕೂಸು ಹೆಣ್ಣಾಗಿ ಹುಟ್ಟಿ ಅದಕ್ಕೆ ೨ ವಯಸ್ಸು, ಗಂಡಿಗೆ ೪ ವಯಸ್ಸು ಆಗಿದ್ದಾಗ ಮಕ್ಕಳನ್ನು ಎತ್ತಿಕೊಂಡು ಮದುವೆಮಾಡಿದರಂತೆ.

ಅಳಿಸಿಹೋದ ಕೆಲವು ಕುಟುಂಬಗಳ ವಿಷಾದ ವಿಷಯ

ಈಗ ೩೦–೪೦ ವರುಷಗಳೀಚೆಗೆ ಸುಮಾರು ೨೦ ಕುಟುಂಬಗಳು ಅಳಿಸಿ ಹೋಗಿರುವ ವಿಷಯವು ಬಹಳ ವಿಷಾದ ಸಂಗತಿ. ಕಡೆಯದಾಗಿ ಯಾರ ಮರಣದಿಂದ ಹಾಗೆ ಆಯಿತು ಎನ್ನುವುದನ್ನು ಈ ಕೆಳಗೆ ಬರೆದಿದೆ.

(೧) ಮಂಡಯದ ಮುನಿಸಿ ಮುದುಕಮ್ಮನವರು ಸಂಪಳ್ಳಿ ಕುಪ್ಪಣ್ಣನವರ ಹೆಂಡತಿಯ ತಂಗಿ (೧೯೦೮)

(೨) ಶ್ರೀ॥ ಉ॥ ರಂಗಯ್ಯ೯ ಶ್ರೀನಿವಾಸೈಯ್ಯಂಗಾರ್ಯರ ಮಗಳು ವೇಂಗಡಮ್ಮನವರು (೧೯೦೮)

(೩) ಶ್ರೀ॥ ಉ॥ ಆರಕೆರೆ ನರಸಿಂಹಾಚಾರ್ಯರ ಮಗಳು ಶ್ರೀರಂಗಮ್ಮನವರ–ಶ್ರೀರಂಗಪಟ್ಟಣದ ಶ್ರೀ॥ ಉ॥ ಅಣ್ಣಾ ಸಾಮಿ ರಾಮಾನುಜೈಯಂಗಾ

ರ್ಯರ ಸೊಸೆ (೯೯೧)

(೪) ರಾಮಾನುಜಪುರಂ ಜಂಗಕ್ಕನವರು—ರಾಮಾನುಜಪುರಂ ಶ್ರೀ॥ ಲು॥ ವೆಂಕಟಾಚಾರ್ಯ ಸ್ವಾಮಿಗಳವರ ಅಕ್ಕನವರು.

(೫) ಶ್ರೀ॥ ಲು॥ ಮೈಸೂರು ಕುಟ್ಟಿಯಪ್ಪಾಜಿ ಆಳಸಿಂಗ್ರಾಚಾರ್ಯರು (೯೬೪೪)

(೬) ಮಳೂರು ಚಿಂಗಕ್ಕನವರು (೯೯೬)

(೭) ಜೊಕ್ಕ ಶಿತ್ತಿಯವರು (೯೯೪೪)

(೮) ಮದರಾಸಿನ ಆಟರ್ನಿ ನರಸಿಂಹಾಚಾರ್ಯರ ಹೆಂಡತಿ ವೇದಮ್ಮನವರು (೯೯೨೦)

(೯) ಅಯ್ಯಾದೊರೆ ಶ್ರೀರಂಗಮ್ಮನವರು (೯೯೬)

(೧೦) ಮದರಾಸಿನ ಯಗ್ಗಮ್ಮನವರು (ಜೊಡಲಮ್ಮನವರು) (೯೯೯)

(೧೧) ಮದರಾಸಿನ ಶ್ರೀ॥ಲು॥ ಶ್ರೀಮನ್ನಾರಾಯಣನ್ ರವರು (೯೯೨೦)

(೧೨) ಶ್ರೀ॥ ಅಣ್ಣಾದೊರೆ ಕೃಷ್ಣಮಾಚಾರ್ಯರ ಹೆಂಡತಿ ತಿಂಗಾರಮ್ಮನವರು (೯೯೨೩)

(೧೩) ಶ್ರೀ॥ ತಿರುಪತಿ ಗಿಡ್ಡಯ್ಯನ್ ತಿರುನಾರಣೈಯ್ಯಂಗಾರ್ಯರು.

(೧೪) ಮೈಸೂರು ಶ್ರೀ ಗೋದಿ ಶ್ರೀರಂಗಮ್ಮನವರು (೯೯೨೬)

(೧೫) ಶ್ರೀ॥ ಎಂ. ಟಿ. ನಾರಣೈಯ್ಯಂಗಾರ್ಯರ ಮಗಳು ತಿಂಗಾರಮ್ಮನವರು (೯೯೨೬)

೧(೬) ಶ್ರೀ॥ ಮದರಾಸ್ ನಾಯಕರ್ ಎಂಬೆರುಮಾನಾರ್ ರವರ ಅಕ್ಕ ತಿಮ್ಮರಸಮ್ಮನವರು (೯೯೨೭)

(೧೭) ಶ್ರೀ॥ ಮಕರ ನಾರಣೈಯ್ಯಂಗ್ಯಾರು (೯೯೨೮)

(೧೮) ಶ್ರೀ॥ ಮೈಸೂರು ಶಾಮರಾಯರ ತಂಗಚ್ಚಮ್ಮನವರು (೯೯೩೫)

(೯೯) ಶ್ರೀ॥ ಲು॥ ಮುದಿಗುಂಬಂ ತಿರುಮಲಾಚಾರ್ಯರ ಹೆಂಡತಿ ಯಗ್ಗಮ್ಮನವರು (೯೯೩೮)

(೨೦) ಶ್ರೀ|| ಮದರಾಸ್ ನಾಯಕರ್ ಎಂಬೆರುಮಾನಾರ್ ಮಗಳು ರಾಜಾಮಣಿಯಮ್ಮನವರು (೧೯೪೫)

(೨೧) ಶ್ರೀ|| ದಿವಾನ್‌ಬಹದೂರ್ ಎಂ. ಒ. ಪಾರ್ಥಸಾರಥಿ ಅಯ್ಯಂಗಾರ್ಯರ ಹೆಂಡತಿ ಶ್ರೀರಂಗಮ್ಮನವರು (೧೯೪೭)

(೨೨) ಶ್ರೀ|| ಉ|| ಯೋಗಿ ಪಾರ್ಥಸಾರಥಿ ಅಯ್ಯಂಗಾರ್ ಸ್ವಾಮಿಗಳ ಹೆಂಡತಿ ತಿಂಗಮ್ಮನವರು (೧೯೪೩)

ಮೇಲ್ಕಂಡ ಮಹನೀಯರಲ್ಲಿ ಒಬ್ಬಿಬ್ಬರಿಗೆ ಸ್ವೀಕೃತ ಪುತ್ರರು ಇರಬಹುದೆಂದು ಅನುಮಾನವಾಗಿದೆ. ತಪ್ಪುಬರವಣಿಗೆ ಇದ್ದರೆ ಬಹಳ ವಿಷಾದದಿಂದ ಕ್ಷಮಾಪಣೆಯನ್ನು ಬೇಡುವುದಲ್ಲದೆ ಅಂತಹ ಸಂತತಿಗಳು ಅಭಿವೃದ್ಧಿಹೊಂದಲೆಂದು ಪ್ರಾರ್ಥಿಸಲಾಗಿದೆ.

ವಿದ್ಯಾಭ್ಯಾಸ, ಐಶ್ವರ್ಯ, ಉದ್ಯೋಗ

ವಿದ್ಯಾಭ್ಯಾಸವು ನಮ್ಮವರಲ್ಲಿ ಮೊದಲಿಗಿಂತಲೂ ಈಗ ಸರಾಸರಿಯಲ್ಲಿ ಹೆಚ್ಚಾಗಿದೆ; ಸ್ತ್ರೀಯರಲ್ಲಿಯೂ ಸಹ. ಆದರೆ ಹಿಂದೆ ಇದ್ದಂತೆ ಅತಿಪ್ರಖ್ಯಾತರಾದ ಮಹನೀಯರ ಸಂಖ್ಯೆ ಕಡಿಮೆ ಎಂದು ತೋರುತ್ತೆ. ವಿದ್ವತ್ತು ನಮ್ಮವರಲ್ಲಿ ತುಂಬಿದೆ. ಆದರೆ ಸಮಯ ದೊರಕದೆಯೂ, ಅನುಕೂಲವಿಲ್ಲದೆಯೂ, ಪ್ರೋತ್ಸಾಹವಿಲ್ಲದೆಯೂ, ಬ್ರಾಹ್ಮಣ್ಯಕ್ಕೆ ಒದಗಿರುವ ಕೆಲವು ಮುಖ್ಯ ತೊಂದರೆಗಳಿಂದಲೂ ವಿದ್ವತ್ತು ಹಿಂದಿನಂತೆ ಶೋಭಿಸುತ್ತಿಲ್ಲ; ಬೆಳೆಯುತ್ತಿಲ್ಲ; ಫಲದಾಯಕವಾಗಿಲ್ಲ.

ನಮ್ಮಸ್ತ್ರೀಯರು ಪ್ರೌಢವಿದ್ಯಾಭ್ಯಾಸವನ್ನು ಅನೇಕರು ಮಾಡಿದ್ದಾರೆ. ವಿಜ್ಞಾನಶಾಸ್ತ್ರದಲ್ಲಿ, ಕುಶಲವಿದ್ಯೆಗಳಲ್ಲಿ, ವೈದ್ಯಶಾಸ್ತ್ರದಲ್ಲಿ, ನ್ಯಾಯಶಾಸ್ತ್ರದಲ್ಲಿ ವಿದುಷಿಯರಿದ್ದಾರೆ.

ನಮ್ಮವರ ಕೆಲವು ಸಂಪ್ರದಾಯಗಳು

ನಮ್ಮ ಹಿರಿಯರು ಅನುಸರಿಸುತ್ತಿದ್ದ ಸಂಪ್ರದಾಯಗಳೇ ನಮಗೆ ಸತ್ಸಂಪ್ರದಾಯಗಳು. ಈ ಸಂಪ್ರದಾಯಗಳನ್ನೆಲ್ಲಾ ಒಂದುಗೂಡಿಸಿ ಬರೆದಿಟ್ಟಿದ್ದ

ಒಂದು ಪ್ರತಿಯು ಶ್ರೀ|| ಉ|| ಕಲ್ಕಿಸ್ವಾಮಿಗಳವರಲ್ಲಿದ್ದುದು ತಿಳಿದಿದೆ. ಈ ಪ್ರತಿಯು ಮೊರೆತರೆ ಉಕ್ಕೃಷ್ಟವಾದ ನಮ್ಮವರ ಹಿಂದಣ ಚರಿತ್ರೆಯ ಸಾರಾಂಶವೇ ಮೊರೆತಂತಾಗುತ್ತದೆ. ಇನ್ನಲ್ಲಿ ವೈದಿಕ ಲೌಕಿಕ ಧರ್ಮಗಳೆರಡರ ಆಚರಣೆಗಳೂ ತಿಳಿಸಲಾಗಿದೆಯೆನ್ನುತ್ತಾರೆ.

ಅಲ್ಲಲ್ಲಿ ಮೊರೆತ ಕೆಲವು ಅಂಶಗಳನ್ನು ಇಲ್ಲಿ ಬಿಡಿ ಬಿಡಿಯಾಗಿ ಬರೆದಿದೆ.

೧. ಪ್ರಪನ್ನಾಗ್ರೇಸರರಾದ ನಮ್ಮ ಹಿರಿಯರು ದಿವ್ಯದೇಶವಾಸಕ್ಕೇ ಬಹಳ ಹೆಚ್ಚಿಗೆಯನ್ನಿತ್ತರು. ಇದಾಗದಿದ್ದವರು ದಿವ್ಯದೇಶಸಂಬಂಧವನ್ನು ಹೊಂದಿ ತಾವು ಇರುವಲ್ಲಿಯೇ ಒಂದು ಭಗವತ್ಸನ್ನಿಧಿಯನ್ನು ಪ್ರತಿಷ್ಠಿಸಿಕೊಂಡು, ಅಲ್ಲಿ ಭಗವದ್ಭಾಗವತಾಚಾರ್ಯರುಗಳ ಆರಾಧನೋತ್ಸವಾದಿಗಳನ್ನು ವಿಶೇಷ ವೈಭವದಿಂದೆ ನಡೆಸಿಕೊಂಡು ಬಂದಿರುವರು. ಮಂತ್ರ ಜಪಾದಿಗಳಲ್ಲಿಯೂ, ಉಪಾಸನಧ್ಯಾನಾದಿಗಳಲ್ಲಿಯೂ ನಮ್ಮ ಹಿರಿಯರು ಹೆಚ್ಚಾಗಿ ಕಾಲವನ್ನು ಕಳೆಯುವುದೆ ಭಗವತ್ಸನ್ನಿಧಿಗೆ ಮಂಗಳಾಶಾಸನಕ್ಕಾಗಿ ತತ್ತತ್ಕಾಲಕ್ಕೆ ಬಂದು ಸೇರುವುದೇ ನಮ್ಮವರ ಮುಖ್ಯ ಸಂಪ್ರದಾಯ. 'ಆಜ್ಞಾಕೈಂಕರ್ಯ'ಕ್ಕಿಂತ 'ಸಾಕ್ಷಾತ್ಕೈಂಕರ್ಯ'ವೇ ಹೆಚ್ಚಿಂಬುದು ನಮ್ಮ ಹಿರಿಯರ ಮತ. 'ಆಜ್ಞಾಕೈಂಕರ್ಯ'ವಾದ ಸಂಧ್ಯಾವಂದನಾದಿ ಕಾಲಗಳು ಪ್ರಾಪ್ತವಾಗಿದ್ದರೂ ಭಗವತ್ಸಾನ್ನಿಧ್ಯವೇ ಹಿರಿದೆಂದು ಅರಿತು ಉತ್ಸವಾದಿಗಳನ್ನು ಸೇವಿಸಿದ ಅನಂತರವೇ ಸಂಧ್ಯಾವಂದನಾದಿಗಳನ್ನು ನಡೆಯಿಸುತ್ತಿದ್ದುದೇ ನಮ್ಮ ಹಿರಿಯರ ಸಂಪ್ರದಾಯ. ಭಗವದನುಭವವೂ ಭಾಗವತಗೋಷ್ಠಿಯೂ ಪ್ರಾಪ್ಯತಮವೆಂದೇ ನಮ್ಮವರ ಸಿದ್ಧಾಂತ.

೨. ನಮ್ಮವರಲ್ಲಿ ಪ್ರತಾಚರಣೆಗಳಿಲ್ಲ. ಆದರೂ ನಮ್ಮ ಸ್ತ್ರೀಯರು ಪ್ರತಾಚರಣೆಯೋ ಎಂಬಂತೆ 'ಆನೆಹಬ್ಬವನ್ನು' ತಿರುಕಾರ್ತಿಕೆಯಲ್ಲಿ ನಡೆಯಿಸುತ್ತಾರೆ. ಇದರ ಆಂತರಂಗ ಅರ್ಥವು ವ್ಯಕ್ತವಾಗಿ ತಿಳಿಯಲಿಲ್ಲ.

೩. ಮಂಡಯದ ಸ್ತ್ರೀಯರು ಸೀರೆಯನ್ನು ಎಡಗಡೆಗೆ ಹೊದ್ದುಕೊಳ್ಳುತ್ತಾರೆ. ತಿರುಮುಳಿಶೈ ಶ್ರೀ ವೈಷ್ಣವ ಸ್ತ್ರೀಯರೂ ಹೆಬ್ಬಾರ್ ಶ್ರೀ ವೈಷ್ಣವ ಸ್ತ್ರೀಯರೂ ಹೀಗೆಯೇ ಮಾಡುತ್ತಾರೆ. ಇತರರು ಬಲಕ್ಕೇ ಹೊದ್ದುಕೊಳ್ಳುತ್ತಾರೆ.

೪. ಮಂಡಯದ ಸಮುದಾಯದಲ್ಲಿ ಯಾರು ಪರಮಪದಿಸಿದರೂ ಆ ವರ್ತಮಾನವನ್ನು ತಿಳಿದೊಡನೆಯೇ ಸಮುದಾಯದವರೆಲ್ಲರೂ ಸ್ನಾನಮಾಡುತ್ತಾರೆ. ಜ್ಞಾತಿಗಳು ಬಂಧುಗಳು ಎಂದಿಲ್ಲ.

೫. ನಮ್ಮವರು ಎಲ್ಲಿ ರಂಗವಲ್ಲಿಯನ್ನಿಕ್ಕಿದರೂ ಪ್ರಧಾನರಂಗವಲ್ಲಿಯ ಎರಡು ಕಡೆಗೂ ಎರಡು ಶುಭಪದ್ಮಗಳಂತಹ ಚಿಹ್ನೆಗಳನ್ನಿಡುವರು. ಈ ಪದ್ಧತಿಯು ಅನೇಕ ಪಂಗಡದವರಲ್ಲಿಲ್ಲ.

೬. ನಮ್ಮವರು ಊಟಮಾಡುವುದಕ್ಕೆ ಹಚ್ಚುವ ಎಲೆಗಳ ಹಿಂಭಾಗದಲ್ಲಿ ಮಧ್ಯದಲ್ಲಿ ಮುಖಕೆಳಗಾಗಿ 'ಬ್ರಾಹ್ಮಣ ಎಲೆ' ಎಂದು ಒಂದು ಎಲೆಯನ್ನು ಹಚ್ಚುತ್ತಾರೆ. ಬಹಳ ಹಿಂದಣ ಕಾಲಗಳಲ್ಲಿ ಇಂತಹ ಎಲೆಗಳು ಬೀದಿಯಲ್ಲಿ ಕಾಲಿಗೆ ತಗುಲಿದರೆ ಹಿಂಭಾಗದಲ್ಲಿ ನೋಡಿ 'ಇದು ಬ್ರಾಹ್ಮಣರ (ಭಾಗವತರ) ಎಲೆ' ಎಂದು ಅದಕ್ಕೆ ಮೈಲಿಗೆಯೇ ಇಲ್ಲವೆನ್ನುತ್ತಿದ್ದರಂತೆ.

೭. ನಮ್ಮಲ್ಲಿ ಸಂಕಲ್ಪಶ್ರಾದ್ಧವೇ ವಿಶೇಷವಾಗಿ ಅನುಷ್ಠಾನದಲ್ಲಿರುವುದು. ಎಲ್ಲೋ ನಾಲ್ಕಾರು ಮನೆಗಳವರು ಮಾತ್ರ ಪಾರ್ವಣ ಶ್ರಾದ್ಧವನ್ನು ಮಾಡುತ್ತಾರೆ.

೮. ಶ್ರೀಜಯಂತಿಯಲ್ಲಿ ದೇವರ ನಿವೇದನಕ್ಕಾಗಿ ಮೂವತ್ತೆರಡು ಬಗೆಯ ಪಣ್ಯಾರಗಳನ್ನು ಮಾಡುವ ಪದ್ಧತಿಯು ನಮ್ಮಲ್ಲಿ ಇದ್ದಿತು. ಈಚೆಗೆ ಕೆಲವು ಪಣ್ಯಾರಗಳ ಹೆಸರುಗಳೇ ಮರೆತುಹೋಗತ್ತಲಿವೆ.

೯. ಮಂಡಯದ ಶ್ರೀವೈಷ್ಣವ ಮಹಾಜನಗಳಲ್ಲಿ ದೇವರ ನಿವೇದನಕ್ಕೆ ಹುಳಿಯನ್ನವೂ (ಪುಳಿಯೊಹರ್ಯೆ) ಉಳಂದೊಹರ್ಯೆ ಮತ್ತು ಬಟ್ಟಿತೇರ್ಕೊಳಲು ಪಣ್ಯಾರವೂ ಪ್ರಸಿದ್ಧವಾಗಿಹುವಂತೆ. ಈಗಲೂ ಹಾಗೆಯೇ ತೋರುತ್ತಿವೆ. ನಮ್ಮವರು ಮಾಡುವ ಜೊಕ್ಕಲಿಯೂ ಬಹು ಪ್ರಸಿದ್ಧವಾದುದು.

೧೦. ನಮ್ಮವರಲ್ಲಿ ಅಡುಗೆಯ ವೃತ್ತಿಯಿಂದಲೂ ಭಿಕ್ಷದ ವೃತ್ತಿಯಿಂದಲೂ ಜೀವನ ಮಾಡಕೂಡದೆಂಬ ಸಂಕೇತವಿತ್ತಂತೆ. ಆದರೆ ದೇವಸ್ಥಾನಗಳ ತಿರುಮಡಪ್ಪಳ್ಳಿ ಕೈಂಕರ್ಯವನ್ನು ಶ್ರೇಷ್ಠವಾದ ಕೈಂಕರ್ಯವೆಂದು ಭಾವಿ

